ಜುಲೈ
2026

ಸಂಪುಟ 41
ಸಂಚಿಕೆ 7

ಪ್ರಸಾದ

ಮಾಸಿಕ



ಜೆಎಸ್ಎಸ್ ಮಹಾವಿದ್ಯಾಪೀಠ, ಮೈಸೂರು



ಲಿಂಗಸುಗೂರು ತಾಲ್ಲೂಕು ದೇವರಭೂಪೂರಿನ ಶ್ರೀ ಅಮರಗುಂಡ ತೋಪಿನಕಟ್ಟಿ ಸಂಸ್ಥಾನ ಮಠದದಲ್ಲಿ ಆಯೋಜಿಸಲಾಗಿದ್ದ ಶ್ರೀ ಅಮರೇಶ್ವರ ಗುರು ಗಜದಂಡ ಶಿವಾಚಾರ್ಯರ 21ನೇ ಸಂಸ್ಮರಣೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಶ್ರೀ ಅಭಿನವ ಗಜದಂಡ ಶಿವಾಚಾರ್ಯ ಸ್ವಾಮಿಗಳ 21ನೇ ಗುರು ಪಟ್ಟಾಧಿಕಾರದ ಮಹೋತ್ಸವದ ಅಂಗವಾಗಿ ಸನ್ಮಾನಿಸಿದರು. ಕಾಶಿ ಜಗದ್ಗುರುಗಳು ಹಾಗೂ ಇತರರಿದ್ದಾರೆ (17 ಜುಲೈ 2026)

ಪ್ರಸಾದ

ಸಂಪುಟ 41 : ಸಂಚಿಕೆ 7 ಜುಲೈ 2026

ಡಾ. ಎಂ.ಎನ್. ನಂದೀಶ್ ಹಂಚೆ
ಸಂಪಾದಕರು

ಜೆಎಸ್ಎಸ್ ಮಹಾವಿದ್ಯಾಪೀಠ
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004
ದೂರವಾಣಿ : 0821–2548212, Extn. 49



ಸಂಸ್ಥಾಪಕರು

ಶ್ರೀಮನ್ಮಹಾರಾಜ ರಾಜಗುರುತಿಲಕ

ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು

ಅಧ್ಯಕ್ಷರು

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು

ಸಂಪಾದಕ ಸಲಹಾ ಸಮಿತಿ

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

ಸಂಪಾದಕ ಸಮಿತಿ

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

ಮುಖಪುಟ ಚಿತ್ರ

ಬೆಂಗಳೂರಿನಲ್ಲಿ ನಡೆದ 14ನೇ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳವನ್ನು ಪರಮಪೂಜ್ಯ ಜಗದ್ಗುರುಗಳವರು ಹಾಗೂ ಸಿದ್ಧಗಂಗಾ ಶ್ರೀಗಳ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀಮತಿ ಗಂಗಾಂಬಿಕೆ ಮಲ್ಲಿಕಾರ್ಜುನ, ಶ್ರೀ ಕೆ.ವಿ. ನಾಗರಾಜಮೂರ್ತಿ, ಶ್ರೀ ಎಂ. ಕೃಷ್ಣಪ್ಪ, ಶ್ರೀ ಗೊ.ರು ಚನ್ನಬಸಪ್ಪ, ಶ್ರೀ ಎಂ.ಬಿ. ಪಾಟೀಲ್, ಡಾ. ಸಿ. ಸೋಮಶೇಖರ, ಶ್ರೀ ಎಸ್.ಪಿ. ದಯಾನಂದ ಮೊದಲಾದವರುಗಳಿದ್ದಾರೆ (7 ಜುಲೈ 2026)

ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-

ಪರಿವಿಡಿ

ಗುರುವಾಣಿ 5

ಸಂಪಾದಕೀಯ 7

ಮಧುಬಿಂದು 9
ಶ್ರೀ ಸಿದ್ಧೇಶ್ವರ ಸ್ವಾಮಿಗಳು
(ಪ್ರವಚನಸಾರ)

ನಾ ಕಂಡಂತೆ ಪೂಜ್ಯಪಾದರು 17
ಪ್ರೊ. ವೀರಭದ್ರ

ಶಬರಶಂಕರ ವಿಲಾಸ ಟೀಕು : ತೃತೀಯಾಶ್ವಾಸ 20
ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು
(ವೀರಶೈವ ಟೀಕು ಸಾಹಿತ್ಯ ಸರಣಿ)

ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳ ಕೊನೆಯ ಪ್ರವಚನ 28
ಧರ್ಮಣ್ಣ ಮ. ಕುಂಬಾರ

ಶರಣಾಗತಿಯ 'ಬಾಗಿಲು' 34
ಡಾ. ಎ. ನಿರಂಜನ್

ಶರಣರ ಗುಣಲಕ್ಷಣಗಳು 39
ಎಚ್.ಎಸ್. ಸಿದ್ಧಗಂಗಪ್ಪ

ವಾರ್ತಾವಿಹಾರ 57
ಕುಮಾರಸ್ವಾಮಿ ವಿರಕ್ತಮಠ

ಭಜತಿಯರರೆ
ಭೋಗಷಟ್ಪದಿ

ಭಜತಿಯರರೆ ವಿಷ್ಣುವಾಯು
ಅಬ್ಜ ಜಾತ ಚಂದ್ರಸೂರ್ಯ
ಮಝರೆ ಭಾಪು ತಾಳ ಭಜತಿ ನಾಟ್ಯಲೀಲನಂ ॥ ಪ ॥

ಧಿಮಿಕು ಧಿಂಧಿ ದಿಮಿಕು ಧಿಮ್ಮಿ
ಧಿಮಿಕು ನಂದಿ ಕಾಯರುಗಳ
ಯಮಕಚಮಕ ಮೃದಂಗ ಭಜತಿ ನಾಟ್ಯಲೀಲನಂ
ಅಮಲವೀಣೆ ಸುಸ್ವರದಲಿ
ಗಮಪ ಧನಿಸ ರಿಸರಿ ಸರಿಸ
ಗಮಪ ಭಜತಿ ತುಂಬುರಾದಿ ನಾಟ್ಯಲೀಲನಂ ॥ 1 ॥

ಚರಣಗತಿಗೆ ಧರಣಿ ಜಲಂ
ಶರಧಿ ಸಹಿತ ಅಷ್ಟಗಜಂ
ಜರಿಯೆ ಶೇಷ ಸಹಸ್ರ ಶಿರಸ ಒರಗಿ ಬಿದ್ದಿರೆ
ಕರವ ಬಿದಿರೆ ಶೈಲಮಟ್ಟಿ
ಉರುಳುತಿರಲು ದೆಸೆಗೆ ಕುಸುಮ
ವರುಷದಂತೆಯುರುಳಿ ಭಗಣ ನಷ್ಟವಾದವು ॥ 2 ॥

ಸುರರು ಭಾಪು ಧಿರುರೆ ಎನಲು
ಹರಿ ಸುರೇಂದ್ರ ಜೀಯಮೆನಲು
ಹರಸಿ ಮುನಿಗಳಕ್ಷತೆಗಳ ಸೂಸಿಯಿರುತಿರೆ
ಇರದೆಯೆನ್ನ ಹೃದಯಕಮಲ
ಪರಮ ಪೀಠದಲ್ಲಿ ಷಡ
ಕ್ಷರಿಯ ವರನು ಒಪ್ಪಿ ಸೊಗಸಿ ರಾಜಿಸಿರ್ದನು ॥ 3 ॥

ಸಂ.: ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

(ಕೃತಿ : ಮುಪ್ಪಿನ ಷಡಕ್ಷರಿಗಳ ಕೈವಲ್ಯಪದಗಳು)

ಗುರುವಾಣಿ

ಅನೇಕಸಂಶಯೋಚ್ಛೇದಿ ಪರೋಕ್ಷಾರ್ಥಸ್ಯ ದರ್ಶನಮ್ ।
ಸರ್ವಸ್ಯ ಲೋಚನಂ ಜ್ಞಾನಂ ಯಸ್ಯ ನಾಸ್ತ್ಯಂಧ ಏವ ಸಃ ॥

ಚಾಣಕ್ಯನ ನೀತಿಶಾಸ್ತ್ರದಲ್ಲಿನ ಈ ಶ್ಲೋಕವು ಸಂಶಯಗಳನ್ನು ಕತ್ತರಿಸಿಹಾಕುವ, ವಿಷಯಗಳನ್ನು ತೋರಿಸುವ, ಎಲ್ಲವನ್ನೂ ಕಾಣುವ ಕಣ್ಣಾದ ಜ್ಞಾನವು ಯಾರಿಗಿಲ್ಲವೋ ಅವನು ಕುರುಡನೇ ಸರಿ. ಸಂಶಯಕ್ಕೆ ಕಾರಣವಾಗುವ ಇಂದ್ರಿಯಗಳಲ್ಲಿ ಕಣ್ಣು ಪ್ರಮುಖವಾದುದು. ಒಂದು ವಸ್ತುವನ್ನು ನೋಡಿದ ತಕ್ಷಣ ಕಣ್ಣು ಆ ವಸ್ತುವಿನ ಬಗೆಗೆ ಒಂದು ಬಗೆಯ ಅರಿವನ್ನು ನೀಡುತ್ತದೆ. ಇಲ್ಲಿ ಅರಿವು ಮತ್ತು ತಿಳಿವನ್ನು ಭಿನ್ನಾರ್ಥದಲ್ಲಿ ಭಾವಿಸಲಾಗಿದೆ. ಅರಿವೆಂಬುದು ಪ್ರಾಥಮಿಕವಾದರೆ, ತಿಳಿವು ಆತ್ಯಂತಿಕವಾದದ್ದು. ಮೊದಲ ನೋಟಕ್ಕೆ ವಸ್ತು ಗೋಚರಿಸುವ ರೀತಿಯಲ್ಲೇ ಯಾವಾಗಲೂ ಇರಬೇಕಾಗಿಲ್ಲ ಮತ್ತು ಇರುವುದಿಲ್ಲ. ಕಣ್ಣು ತೋರಿಕೆಗೆ, ರಂಜನೆಗೆ ಮೋಹಗೊಳ್ಳುತ್ತದೆ. ಈ ಮೋಹಕತೆ ಬಹುತೇಕ ಅಪಾಯವನ್ನು ತರಬಹುದು. ಆದರೆ ಕಣ್ಣಿನಿಂದ ಉಂಟಾಗುವ ಮೊದಲಿನ ಸಂಶಯವನ್ನು ಹೋಗಲಾಡಿಸುವ ಶಕ್ತಿ ಇರುವುದು ಜ್ಞಾನಕ್ಕೆ ಮಾತ್ರ.

ಕಣ್ಣಿಗೆ ಕಾಣುವ ವಸ್ತುಪ್ರಪಂಚವನ್ನು ಅರಿಯುವುದೆಂದರೆ ಮೇಲ್ನೋಟದ ತಿಳಿವನ್ನು ಹೊಂದುವುದು. ಅದು ಸತ್ಯವೂ ಅಲ್ಲ, ಜ್ಞಾನವೂ ಅಲ್ಲ, ನೈಜವೂ ಅಲ್ಲ. ಅರಿವು, ಪ್ರೀತಿ, ಮಮತೆ ಮುಂತಾದ ಅನೇಕ ಭಾವಗಳು ಕಣ್ಣಿಗೆ ಗೋಚರಿಸುವುದಿಲ್ಲ. ಅಷ್ಟೇ ಏಕೆ, ಗಾಳಿ ಕೂಡ ಕಣ್ಣಿಗೆ ಕಾಣಿಸುವುದಿಲ್ಲ. ಆದರೆ ಅವು ಅನುಭವಕ್ಕೆ ಬರುತ್ತವೆ. ಹೀಗೆ ಅನುಭವಕ್ಕೆ ಮಾತ್ರ ದಕ್ಕುವ ಎಷ್ಟೋ ಸಂಗತಿಗಳು ಜಗತ್ತಿನಲ್ಲಿವೆ. ಆದುದರಿಂದಲೇ 'ಕಣ್ಣರಿಯದಿದ್ದರೂ ಕರುಳರಿಯುತ್ತದೆ' ಎಂಬ ನಾಣ್ಣುಡಿ ಪ್ರಚಲಿತವಾಗಿದೆ. ಬಸವಣ್ಣನವರ "ಉದಕದೊಳಗೆ ಬಯ್ತಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು, ಸಸಿಯೊಳಗಣ ರಸದ ರುಚಿಯಂತಿದ್ದಿತ್ತು, ನನೆಯೊಳಗಣ ಪರಿಮಳದಂತಿದ್ದಿತ್ತು, ಕೂಡಲಸಂಗಮದೇವರ ನಿಲುವು ಕನ್ನೆಯ ಸ್ನೇಹದಂತಿದ್ದಿತ್ತು" ಎಂಬ ವಚನವೂ ವಸ್ತುಪ್ರಪಂಚದ ಆಚೆಗಿನ ಸಂಗತಿಗಳನ್ನು ಮನೋಜ್ಞವಾಗಿ ಕಟ್ಟಿಕೊಡುತ್ತದೆ. ನೀರಿನಲ್ಲಿ ಬೆಂಕಿ ಇದ್ದರೂ ಅದು ಅಗೋಚರವಾಗಿದೆ; ನೀರು ಮತ್ತು ಬೆಂಕಿಯ ಗುಣಸ್ವಭಾವಗಳು ಪರಸ್ಪರ

ವಿರೋಧಿಗಳಾಗಿದ್ದರೂ ಅವು ಬರಿಗಣ್ಣಿಗೇ ಗೋಚರಿಸುವಂತಿವೆ. ಕಣ್ಣಿಗೆ ಕಾಣದ ಸತ್ಯವೆಂದರೆ, ನೀರಿನಲ್ಲಿಯೇ ಬೆಂಕಿ ಅಡಗಿದೆ. ಈ ವಚನದಲ್ಲಿ ಬರುವ ಸಸಿಯೊಳಗಣ ರಸ, ಹೂವಿನೊಳಗಣ ಪರಿಮಳ ಇವು ಪಂಚೇಂದ್ರಿಯಗಳ ಗುಣ. ಇವುಗಳಾಚೆಗಿನ ಸ್ಥಿತಿಯನ್ನು ಹೇಳುತ್ತ ಬಸವಣ್ಣನವರು ದೇವರೆಂಬುದು ಅನುಭವೈಕವೇದ್ಯವಾದುದು ಎಂದಿದ್ದಾರೆ.

ಹೀಗೆ ಬಾಹ್ಯ ಇಂದ್ರಿಯಗಳಿಂದ ಬರುವ ಅರಿವಿಗಿಂತಲೂ ಅಂತಶ್ಚಕ್ಷುವಿನ ಮೂಲಕ ದೊರೆಯುವ ತಿಳಿವು ದೊಡ್ಡದು. ಹೊರಗಿನ ಇಂದ್ರಿಯಗಳು ವಂಚಿಸಬಹುದಾದರೂ ಆತ್ಮಜ್ಞಾನವನ್ನು ವಂಚಿಸಲಾರವು. ಈ ಅರ್ಥದಲ್ಲಿ ಹೊರಗಿನ ಕಣ್ಣು ಇದ್ದವರಿಗೆ ಬರಿಯ ದೃಷ್ಟಿ ಇದ್ದರೆ, ಅಂತರಂಗದ ಕಣ್ಣಿರುವವರಿಗೆ ವಿಶೇಷ ದೃಷ್ಟಿ ಇರುತ್ತದೆ. ಎಲ್ಲವನ್ನೂ ಕಾಣುವ ಕಣ್ಣೆಂದರೆ ಅದು ಜ್ಞಾನ. ಅದು ಸರಳವೂ, ಸುಂದರವೂ ಆಗಿರುತ್ತದೆ. ಆದರೆ ಇಂದ್ರಿಯಗಳಿಗೋ ಸದಾ ತೋರಿಕೆಯ ಪ್ರಪಂಚದಲ್ಲಿ ವಿಹರಿಸುವ ಭ್ರಮೆ. ಆದುದರಿಂದ ನಿಜವಾದ ಜ್ಞಾನ ಯಾವುದೆಂಬುದನ್ನು ಅರಿಯಬೇಕು, ಆ ಮೂಲಕವೇ ಲೋಕವನ್ನು ಪರಿಭಾವಿಸಬೇಕು.

ಪ್ರೊ. ಅಲೋಕ್ ಸಾಗರ್ ಎಂಬ ವ್ಯಕ್ತಿ ದೆಹಲಿಯ ಐ.ಐ.ಟಿ.ಯಲ್ಲಿ ಪ್ರಾಧ್ಯಾಪಕರಾಗಿದ್ದವರು. ಅಮೆರಿಕದ ಹ್ಯೂಸ್ಟನ್ ವಿಶ್ವವಿದ್ಯಾನಿಲಯದ ಪಿಎಚ್.ಡಿ ಪದವೀಧರರು. ರಿಸರ್ವ್ ಬ್ಯಾಂಕ್ ಗೌರ್ನರ್‌ರಾಗಿದ್ದ ರಘುರಾಮ್ ರಾಜನ್ ಅಂಥವರಿಗೆ ಪಾಠ ಹೇಳಿಕೊಟ್ಟ ಗುರುಗಳು. ಈಗ ಮಧ್ಯಪ್ರದೇಶದ ಬುಡಕಟ್ಟು ಜನರ ನಡುವೆ ಕಾಡಿನಲ್ಲಿ ವಾಸಿಸುತ್ತಿದ್ದಾರೆ. ನಗರದ ಸರಕು ಸಂಸ್ಕೃತಿಗಿಂತ ಕಾಡಿನ ನಿಸರ್ಗದ ಮಧ್ಯೆ ಹಾಯಾಗಿ ಬದುಕುತ್ತಿರುವ ಜನಜೀವನ ಅವರಿಗೆ ಸುಂದರವಾಗಿ ಕಂಡಿದೆ. ಇಂದಿನ ಯುವಜನರು ಕೂಡ ನೈಜ ತಿಳಿವನ್ನು ಹೊಂದಬೇಕಾದದ್ದು ಅತ್ಯಗತ್ಯ. ಪ್ರಸ್ತುತ ಸಾಂಪ್ರದಾಯಿಕ ಶಿಕ್ಷಣದಿಂದ ದೊರೆಯುವ ಲೌಕಿಕ ಸುಖ, ಕೊಳ್ಳುಬಾಕುತನ ಯುವಜನರ ಅರಿವಿಗೂ ಬಾರದೆ ಅವರನ್ನು ಅಂಧರನ್ನಾಗಿ ಮಾಡುತ್ತಿದೆ. ಸ್ವಂತ ಸುಖವೇ ಪರಮ ಗುರಿಯೆಂದು ಅವರು ಭಾವಿಸುತ್ತಾರೆ. ಇದು ವಸ್ತುಪ್ರಪಂಚದಲ್ಲಿನ ವ್ಯರ್ಥ ಅಲೆದಾಟಕ್ಕೆ ದಾರಿ ಮಾಡಿಕೊಡುತ್ತದೆ; ಇಂಥ ಅಲೆದಾಟಕ್ಕೆ ಕೊನೆಯಿರುವುದಿಲ್ಲ. ಈ ಸ್ಥಿತಿ ಅಲ್ಲಮಪ್ರಭುದೇವರು ಹೇಳುವಂತೆ "ನೀರು ನೀರಡಿಸಿತ್ತು ನೋಡಾ" ಎಂಬಂತಾಗುತ್ತದೆ. ನೀರಿಗೇ ಬಾಯಾರಿಕೆಯಾದರೆ ಗತಿಯೇನು? ಆದುದರಿಂದ ಜಗತ್ತಿನ ವಾಸ್ತವವನ್ನರಿತು ನಡೆಯಬೇಕಾದುದು ಎಲ್ಲರ ಆದ್ಯತೆಯಾಗಬೇಕು.

ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಸಂಪಾದಕೀಯ

"ವಿದ್ಯಾರ್ಥಿಗಳು ಬತ್ತದ ಚೀಲಗಳಾಗಬಾರದು, ಬತ್ತ ಬೆಳೆಯುವ ಗದ್ದೆಗಳಾಗಬೇಕು" ಎಂಬ ರಾಷ್ಟ್ರಕವಿ ಕುವೆಂಪು ಅವರ ಮಾತು ಕೇವಲ ಪಠ್ಯಪುಸ್ತಕಗಳು ಅಥವಾ ವಿಷಯಾಧಾರಿತ ಮಾಹಿತಿ ಸಂಗ್ರಹಣೆಯೇ ಶಿಕ್ಷಣವೆಂಬ ಕಲ್ಪನೆಯನ್ನು ಕುರಿತಾಗಿದೆ. ವಾಸ್ತವವಾಗಿ ವಿದ್ಯಾರ್ಥಿಗಳು ಕಲಿಕೆಯಲ್ಲಿ ಹೊಸ ಚಿಂತನೆ, ಸೃಜನಶೀಲ ಅಭಿವ್ಯಕ್ತಿಯೇ ಶಿಕ್ಷಣದ ಮೂಲ ಗುರಿಯಾಗಬೇಕು. ಈಗಿನ ಶಿಕ್ಷಣವು ಜ್ಞಾನದ ಬಾಗಿಲಾಗಿರದೆ ಕೇವಲ ಕೌಶಲ್ಯದ ಪ್ರಮೇಯವಾಗಿದೆ. ವಿದ್ಯಾರ್ಥಿಯ ಆತ್ಯಂತಿಕ ಗುರಿ ಉದ್ಯೋಗ ಪಡೆಯುವುದೇ ಆಗಿದೆ. ಕೇವಲ ಉದ್ಯೋಗವನ್ನು ಬಯಸುವ ಈ ಮನಸ್ಥಿತಿಯು ವಿದ್ಯಾರ್ಥಿಯು ವಿಷಯಸಂಬಂಧಿ ಮಾಹಿತಿಯನ್ನು ಎಷ್ಟು ಹೆಚ್ಚಾಗಿ ಸಂಗ್ರಹಿಸಿದ್ದಾನೆ ಮತ್ತು ಅವುಗಳನ್ನು ಹೇಗೆ ನೆನಪಿನಲ್ಲಿ ಇಟ್ಟುಕೊಂಡಿದ್ದಾನೆ ಎನ್ನುವುದಕ್ಕೆ ಮಾತ್ರ ಪ್ರಾಮುಖ್ಯತೆ ನೀಡುತ್ತದೆ. ಆತನ ಉತ್ತೀರ್ಣತೆ, ಶ್ರೇಷ್ಠತೆ ಅದರ ಮೇಲೆ ನಿರ್ಧಾರವಾಗುತ್ತದೆ. ಮಾಹಿತಿ ಸಂಗ್ರಹ ಮತ್ತು ನೆನಪಿನ ಶಕ್ತಿ, ಈ ಎರಡು ವಿಚಾರಗಳೇ ಆತನ ಇಡೀ ಯೋಗ್ಯತೆಯನ್ನು ನಿರ್ಧರಿಸುತ್ತದೆ ಎಂಬುದೊಂದು ದುರಂತ. ನಮ್ಮ ಪರೀಕ್ಷಾ ಪದ್ಧತಿಯೂ ಅಷ್ಟೆ. ಈ ಪೊಳ್ಳು ತತ್ವದ ಮೇಲೆಯೇ ನಿರ್ಧಾರವಾಗುತ್ತದೆ.

ತರಗತಿಯಲ್ಲಿ ಅಧ್ಯಾಪಕರು ಬೋಧಿಸುವ ಪಠ್ಯ ಮತ್ತು ನೀಡುವ ಟಿಪ್ಪಣಿಯನ್ನು ಅಚ್ಚುಕಟ್ಟಾಗಿ ಪರೀಕ್ಷೆಯಲ್ಲಿ ಬರೆಯುವುದರ ಮೇಲೆ ವಿದ್ಯಾರ್ಥಿಯ ಮೌಲ್ಯಾಂಕನ ನಿರ್ಧಾರವಾಗುತ್ತದೆ. ಈ ಪದ್ಧತಿ ಒಂದು ರೀತಿಯಲ್ಲಿ ಪಶುಗಳು ಹುಲ್ಲು ತಿಂದು, ತಿಂದ ಹುಲ್ಲನ್ನೇ ಮತ್ತೆ ಮತ್ತೆ ಮೆಲುಕು ಹಾಕುವ ಕ್ರಿಯೆಯಂತೆ ಇದೆ. ಈ ವ್ಯವಸ್ಥೆಯಲ್ಲಿ ಸೃಜನಶೀಲತೆಗೆ ಯಾವುದೇ ಅವಕಾಶವಿಲ್ಲ. ಮೈಸೂರಿನ ಪ್ರತಿಷ್ಠಿತ ಕಾಲೇಜೊಂದರಲ್ಲಿ ಪಿಯುಸಿ ಅಭ್ಯಾಸ ಮಾಡುತ್ತಿದ್ದ ವಿಜ್ಞಾನ ವಿದ್ಯಾರ್ಥಿಯೊಬ್ಬ ಪರೀಕ್ಷೆಗೆ ಹಾಜರಾಗಿದ್ದ. ಆತನಿಗೆ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ವಿಷಯಗಳಲ್ಲಿ ಶೇ.95 ಅಂಕಗಳು ಬಂದಿದ್ದವು. ಆದರೆ ತನಗೆ ಬಂದ ಅಂಕಗಳ ಬಗ್ಗೆ ಆತನಿಗೆ ತೃಪ್ತಿ ಇರಲಿಲ್ಲ. ಆತ ಅಸಾಧಾರಣ ವಿದ್ಯಾರ್ಥಿಯೆಂದು ಕಾಲೇಜಿನ ಎಲ್ಲ ಅಧ್ಯಾಪಕರಿಗೂ ತಿಳಿದಿತ್ತು. ಆ ವಿದ್ಯಾರ್ಥಿಯ ತಂದೆ ಕೂಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದರು. ಅವರು ಮಗನ ಉತ್ತರ ಪತ್ರಿಕೆಯ ಪರಿಶೀಲನೆಗೆ (Paper Seeing) ಅರ್ಜಿ ಹಾಕಿದರು. ಅದನ್ನು ನೋಡಲು ತನ್ನ ಗೆಳೆಯರು ಹಾಗೂ ವಿಷಯಗಳಲ್ಲಿ ಪರಿಣತರಾಗಿದ್ದ

ಸ್ನೇಹಿತರನ್ನು ಕರೆದುಕೊಂಡು ಹೋಗಿದ್ದರು. ಉತ್ತರಪತ್ರಿಕೆಯನ್ನು ಪರಿಶೀಲಿಸಿದ ಆ ಇಬ್ಬರೂ, ವಿದ್ಯಾರ್ಥಿಯ ತಂದೆಗೆ "ಯಾವುದೇ ಕಾರಣಕ್ಕೂ ಮರುಮೌಲ್ಯಮಾಪನಕ್ಕೆ ಅರ್ಜಿ ಹಾಕಬೇಡಿ" ಎಂದು ಸಲಹೆ ನೀಡಿದರು. ಆ ವ್ಯಕ್ತಿ ಗೆಳೆಯರನ್ನು ಕುರಿತು: "ಏಕೆ, ನನ್ನ ಮಗ ಚೆನ್ನಾಗಿ ಉತ್ತರ ಬರೆದಿಲ್ಲವೇ? ಅಥವಾ ಅವನು ನನಗೆ ಸುಳ್ಳು ಹೇಳಿದ್ದಾನೆಯೇ" ಎಂದರು. ಆಗ ಅಧ್ಯಾಪಕ ಮಿತ್ರರಿಬ್ಬರೂ ಅವರಿಗೆ ಹೇಳಿದರು: "ನಿಮ್ಮ ಮಗ ಪಿಯುಸಿ ಮಟ್ಟಕ್ಕೆ ಬೇಕಾದ ಉತ್ತರವನ್ನು ಬರೆಯದೆ ಸ್ನಾತಕೋತ್ತರ ಮಟ್ಟದ ಉತ್ತರ ಬರೆದಿದ್ದಾನೆ. ಪಾಪ, ಮೌಲ್ಯಮಾಪಕ ತನ್ನ ಮಿತಿಯಲ್ಲಿ ಅರ್ಥವಾದಷ್ಟಕ್ಕೆ ಅಂಕ ನೀಡಿದ್ದಾನೆ. ನೀವು ಮರುಮೌಲ್ಯಮಾಪನಕ್ಕೆ ಅರ್ಜಿ ಹಾಕಿದರೂ ಇಂಥ ಮತ್ತೊಬ್ಬ ಅಧ್ಯಾಪಕ ಮೌಲ್ಯಮಾಪನ ಮಾಡುತ್ತಾನೆ ಅಷ್ಟೆ" ಎಂದು ಸಮಾಧಾನ ಮಾಡಿದರು. ಆ ವಿದ್ಯಾರ್ಥಿ ಈಗ ಜಿಲ್ಲೆಯಲ್ಲಿ ಬಹು ದೊಡ್ಡ ಅಧಿಕಾರಿಯಾಗಿದ್ದಾನೆ.

ಹಿರಿಯ ಸಾಹಿತಿ ಗೊರೂರರು ವಿದ್ಯಾಭ್ಯಾಸ ಮಾಡುತ್ತಿದ್ದಾಗ ಅವರು ರಚಿಸಿದ್ದ ಕೃತಿಯೇ ಅವರಿಗೆ ಪಠ್ಯವಾಗಿತ್ತು. ಪರೀಕ್ಷೆಯಲ್ಲಿ ಅವರಿಗೆ ಕೇವಲ 35 ಅಂಕಗಳು ಬಂದವು! ಈ ಬಗ್ಗೆ ಅವರನ್ನು ಕೇಳಿದಾಗ "ನಾನು ಬರೆದ ಉತ್ತರದಲ್ಲಿ ಪರೀಕ್ಷಕನಿಗೆ ಅರ್ಥವಾಗಿದ್ದು ಶೇ.35 ಅಷ್ಟೇ" ಎಂದು ಉತ್ತರಿಸಿದರು.

ಈ ಎರಡು ಘಟನೆಗಳು ನಮ್ಮ ಪಠ್ಯಗಳ ಬೋಧನೆ ಹಾಗೂ ಮೌಲ್ಯಮಾಪನಕ್ಕೆ ಹಿಡಿದ ಕನ್ನಡಿಗಳಾಗಿವೆ. ಇದು ವಿದ್ಯಾರ್ಥಿ ಮತ್ತು ಅಧ್ಯಾಪಕರಿಬ್ಬರನ್ನೂ ಒಳಗೊಂಡಂತೆ ಇಂದಿನ ಶಿಕ್ಷಣಕ್ಷೇತ್ರದ ದಾರಿದ್ರ್ಯವನ್ನು ಎತ್ತಿ ತೋರಿಸುತ್ತದೆ. ನಾವು ನೀಡುತ್ತಿರುವ ಶಿಕ್ಷಣ ಹೇಸರಗತ್ತೆಯಂತಿದೆ. ಹೊರಗಿನಿಂದ ನೋಡಲು ಸುಂದರವಾಗಿದೆ, ಆದರೆ ಅದಕ್ಕೆ ಮತ್ತೊಂದು ಮರಿಯನ್ನು ಸೃಷ್ಟಿಸುವ ಸಾಮರ್ಥ್ಯವಿಲ್ಲ. ಈ ಸೃಜನಶೀಲ ದಾರಿದ್ರ್ಯದಿಂದ ನಾವು ಪ್ರಾಪಂಚಿಕವಾಗಿ ಪೂರ್ಣದೃಷ್ಟಿ, ಪೂರ್ಣಸೃಷ್ಟಿಯನ್ನು ಹೊಂದಲು ಸಾಧ್ಯವಾಗುತ್ತಿಲ್ಲವೆಂಬುದು ವಿಷಾದನೀಯ.

ಇಂದಿನ ನಮ್ಮ ಶಿಕ್ಷಣಕ್ಕೆ ಸ್ಪಷ್ಟವಾದ ಗುರಿ ಇಲ್ಲದಿರುವುದಕ್ಕೆ ಈ ಸೃಜನಶೀಲ ಬಂಜೆತನವೇ ಕಾರಣ. ವಿದ್ಯಾರ್ಥಿಯು ಉತ್ತೀರ್ಣನಾಗಿ ಕೆಲಸ ಗಿಟ್ಟಿಸಿಕೊಳ್ಳುವುದೇ ವಿದ್ಯೆಯ ಪರಮ ಗುರಿ ಎಂದು ನಾವೆಲ್ಲ ಭಾವಿಸಿರುವುದು ಒಂದು ಅರ್ಥಹೀನ ರೋಗ ಎಂದು ನಮಗೇಕೆ ಗೊತ್ತಾಗುತ್ತಿಲ್ಲ! ಶಿಕ್ಷಣ ಎನ್ನುವುದು ಅಂತರಂಗದ ಸಂಸ್ಕಾರ, ವೈಚಾರಿಕ ನಿಲುವು ಎಂಬ ಅರಿವು ಎಲ್ಲರಲ್ಲಿಯೂ ಮೂಡಿಬರಬೇಕಾಗಿದೆ.

ಡಾ. ಎಂ.ಎನ್. ನಂದೀಶ್ ಹಂಚೆ

ಪ್ರವಚನಸಾರ

ಮಧುಬಿಂದು

ಶ್ರೀ ಸಿದ್ಧೇಶ್ವರ ಸ್ವಾಮಿಗಳು

ಚಿಂತನೆಯನ್ನು ನೂರಾರು, ಸಾವಿರಾರು ವರ್ಷಗಳಿಂದ ಮಾಡಿ ಅನುಭವಿಸಿದರು ಆ ಅನುಭಾವಿಗಳು, ಋಷಿಗಳು. ಭಗವಂತನನ್ನು ಎಷ್ಟು ಪ್ರೀತಿಸಿದರೋ ಅಷ್ಟೇ ಈ ಜಗತ್ತನ್ನೂ ಪ್ರೀತಿಸಿದರು. ಆದರೆ ನಾವು ಹೇಗೆ ಪ್ರೀತಿಸುತ್ತೇವೆ ಹಾಗೆ ಪ್ರೀತಿಸಲಿಲ್ಲ. ನಮ್ಮ ಪ್ರೇಮದ ಕಣ್ಣಿಗೆ ಈ ಜಗತ್ತಿನ ವಿಷಯಗಳೇ ಪರಮಾರ್ಥ. ಜ್ಞಾನಿಗಳ ದೃಷ್ಟಿಯಲ್ಲಿ ವಿಷಯಗಳೆಲ್ಲಾ ಭಗವತ್ ಪ್ರಸಾದ! ವಿಷಯಗಳನ್ನು ಕಂಡು ಸಂತೋಷಿಸಿದವರು ಜ್ಞಾನಿಗಳು. ವಿಷಯಗಳನ್ನು ಕಂಡು ಮೋಹಿಸಿದವರು ನಾವುಗಳು. ಜ್ಞಾನಿಗಳು ಭಗವಂತನಿಗಾಗಿಯೇ ಬದುಕಿದವರು. ಈ ಕಾಣುವ ಜಗತ್ತನ್ನು ಈ ದೇಹ ಇಂದ್ರಿಯಗಳನ್ನು ಎಲ್ಲೆಡೆ ಹರವಿಕೊಂಡಿರುವ ಈ ವಿಷಯಗಳನ್ನು ತಿರಸ್ಕರಿಸಿದರು ಎಂದು ಅವರನ್ನು ನಾವು ತಪ್ಪಾಗಿ ತಿಳಿದುಕೊಂಡಿದ್ದೇವೆ. ಅವರು ತಿರಸ್ಕರಿಸಿದವರಲ್ಲ. ಪ್ರಸಾದೀಕರಿಸಿದವರು. ಅವರು ಜಗತ್ತನ್ನು ವರ್ಣಿಸುತ್ತಾರೆ; ಆ ವರ್ಣನೆ ಕೇಳಿದರೆ, ಭಗವತ್ ಭಾವ ಉಂಟಾಗುತ್ತದೆ. ವಿಷಯಗಳ ಅನುರಾಗ ಉಂಟಾಗುವುದಿಲ್ಲ. ಆದರೆ ನಾವು ವಿಷಯಗಳನ್ನು ವರ್ಣಿಸಿದರೆ ಭಗವತ್ ಪ್ರಜ್ಞೆ ಮರೆಯಾಗುತ್ತದೆ. ವಿಷಯಗಳಲ್ಲಿ ಅನುರಾಗ, ಮೋಹ ಉಂಟಾಗುತ್ತದೆ. ಅವರ ವರ್ಣನೆ ಪ್ರಾಸಾದಿಕ; ನಮ್ಮ ವರ್ಣನೆ ಉನ್ಮಾದಕ! ಕಾರಣವಿಷ್ಟೇ, ಅವರು ದೇವದೃಷ್ಟಿಯಿಂದ ನೋಡಿದರು; ನಾವು ಆಶಾದೃಷ್ಟಿಯಿಂದ ನೋಡಿದೆವು ವಿಷಯಗಳತ್ತ.

ಇಯಂ ಪೃಥ್ವೀ ಸರ್ವೇಷಾಂ ಭೂತಾನಾಂ ಮಧುಃ

ಈ ಜಗತ್ತು, ಈ ಪೃಥ್ವಿ-ಜೇನು; ನಯನಮನೋಹರ. ಇಲ್ಲಿರುವ ಶಬ್ದ, ಸ್ಪರ್ಶ, ರೂಪ, ರಸ ಹಾಗೂ ಗಂಧಗಳು ಮಧು. ಅವೆಲ್ಲ ವೈವಿಧ್ಯ ಪೂರ್ಣ. ಸಾವಿರ ಸಾವಿರ ಬಗೆಯವು. ಅಷ್ಟೇ ರಸಪೂರ್ಣ, ಆಕರ್ಷಕ. ಒಮ್ಮೆ ಸವಿದರೆ ಮತ್ತೆ ಮತ್ತೆ ಸವಿಯುವ ಆಸೆ ಉಂಟಾಗುತ್ತದೆ.

ಈ ಜಗತ್ತು ಮಧು - ಯಾರಿಗೆ? ಸರ್ವ ಭೂತಗಳಿಗೆ, ಜೀವ ಜಂತುಗಳಿಗೆ; ಎಲ್ಲರಿಗೂ ಪ್ರಿಯ, ಪ್ರಾಣಪ್ರಿಯ.

ಅಸ್ಯೈ ಪೃಥಿವ್ಯೈ ಸರ್ವಾಣಿ ಭೂತಾನಿ ಮಧು

ಜಗತ್ತು ಅಷ್ಟೇ ಮಧು ಎಂದಲ್ಲ. ಜಗತ್ತಿನೊಳಗಿರುವ ಜೀವ ಜಂತುಗಳೂ ಈ ಪೃಥ್ವಿಗೆ ಮಧು! ಪೃಥ್ವಿಗೆ ಶೋಭಾಯಮಾನ ಜೀವಿಗಳು. ಅವು ಪ್ರಿಯ. ಸಸ್ಯಗಳು ಇರಬೇಕು,

ಮನುಷ್ಯ ಇರಬೇಕು. ಆಕಾಶದಲ್ಲಿ ಪಕ್ಷಿಗಳು ಹಾರುತ್ತ ಇರಬೇಕು. ನೀರಿನೊಳಗೆ ಮೀನುಗಳು ಈಜುತ್ತಾ ಇರಬೇಕು. ಭೂಮಂಡಲದ ತುಂಬೆಲ್ಲ ಜೀವ-ಜಂತುಗಳು ಓಡಾಡಿಕೊಂಡಿರ ಬೇಕೆಂದು ಬಯಸುತ್ತದೆ ಪೃಥ್ವಿ. ಅದಕ್ಕಾಗಿ ತಪಸ್ಸನ್ನು ಆಚರಿಸುತ್ತದೆ. ಇದನ್ನು ನಿರ್ಮಾಣ ಮಾಡುವುದಕ್ಕಾಗಿ–

'ತಪಃ ತಪ್ಯತ'

ತಪಸ್ಸನ್ನು ಆಚರಿಸಿತು. ಹಿಂದೆ ಹಲವು ಕೋಟಿ ವರುಷಗಳ ಕಾಲ ಭೂಮಿಯೊಳಗೆ ಏನೂ ಇರಲಿಲ್ಲ. ಯಾವ ಜಂತುಗಳೂ ಇರಲಿಲ್ಲ. ಹಚ್ಚ ಹಸಿರಾದ ವನ-ಸಿರಿ ಇರಲಿಲ್ಲ. ಪುಷ್ಪಗಳಿರಲಿಲ್ಲ. ಫಲ ಇರಲಿಲ್ಲ. ಭೂಮಿ ತಪಸ್ಸನ್ನು ಆಚರಿಸಿತು ಕೋಟ್ಯಾವಧಿ ವರ್ಷ. ಭೂಮಿಯ ಪ್ರತಿ ಕಣ ಕಣ ಬಯಸುತ್ತಿತ್ತು–'ಜೀವ ಮಧುವನ್ನು ನಿರ್ಮಾಣ ಮಾಡಬೇಕು, ನನ್ನನ್ನು ನಾನು ಮಧುವಿನಿಂದ ಸಿಂಗರಿಸಿಕೊಳ್ಳಬೇಕು, ಜೀವ-ಜಂತುಗಳಿಂದ ಸಿಂಗರಿಸಿಕೊಳ್ಳಬೇಕು' ಎಂದು. ವಿಜ್ಞಾನ ಇದನ್ನೇ ಹೇಳುತ್ತದೆ.

ನಾಲ್ಕು-ಐದುನೂರು ಕೋಟಿ ವರ್ಷಗಳ ಹಿಂದೆ ಆಕಾಶದಲ್ಲಿ ಮೂಡಿತು ಈ ಪೃಥ್ವಿ. ನೂರು ಕೋಟಿ ವರ್ಷಗಳ ಕಾಲ ಭೂಮಿ ತಪಸ್ಸನ್ನು ಆಚರಿಸಿತು. ಹೇಗೆ ಭಗವಂತ 'ತದೈಕ್ಷತ ಬಹುಸ್ಯಾಂ ಪ್ರಜಾಯೇಯ' ಹಾಗೆ ಭೂಮಿ! ನಾನು ನೂರು ನೂರು ರೂಪವಾಗಬೇಕು, ನೂರು ನೂರು ರಸವಾಗಬೇಕು, ನೂರು ನೂರು ಧ್ವನಿಯಾಗಬೇಕು, ನೂರು ನೂರು ಗಂಧವಾಗಬೇಕೆಂದು ಪೃಥ್ವಿ ತಪಸ್ಸನ್ನು ಆಚರಿಸಿತು. ನೂರು ಕೋಟಿ ವರ್ಷದ ನಂತರ ಮೊಟ್ಟಮೊದಲನೆಯ 'ಅಮೀಬಾ' ಸುಳಿಯಿತು. ಭೂಮಿ ಸಂತೋಷದಿಂದ ತುಳುಕಿತು. 'ಅಮೀಬಾ' ಸೂಕ್ಷ್ಮಾತಿಸೂಕ್ಷ್ಮ. ಅದಕ್ಕೆ ಕೋಟಿ ವರುಷಗಳ ಕಾವು ಕೊಟ್ಟಿತು, ಉಣಿಸಿತು, ತಿನಿಸಿತು. ಅದು ಬಿಸಿಲು ಗಾಳಿಗೆ ನಷ್ಟವಾಗದಂತೆ ಪೋಷಿಸಿತು. ಅಂಥ ಆ ಅಣುಜೀವ ಬೆಳೆದು ಮುಂದೆ ಭೂಮಂಡಲವನ್ನೇ ವ್ಯಾಪಿಸಿತು; ಭೂಮಿ ಹಸಿರಾಯ್ತು. ತೃಪ್ತವಾಯ್ತು! ಮಧುಮಯವಾಯ್ತು! ಭೂಮಿ ಎಲ್ಲ ಜೀವಿಗಳನ್ನು ಪ್ರೀತಿಸುತ್ತದೆ. ಎಲ್ಲ ಜೀವಿಗಳು ಭೂಮಿಯನ್ನು ಪ್ರೀತಿಸುತ್ತವೆ. ಈ ಇಬ್ಬರ ಪರಸ್ಪರ ಪ್ರೇಮದ ಮಧ್ಯದಲ್ಲಿ ಮಧುದರ್ಶನ! ಋಷಿಯ ದೃಷ್ಟಿಯಲ್ಲಿ ಎಲ್ಲವೂ ಪ್ರಿಯ. ಪರಮ ಪ್ರಿಯ. ನಾವು ಪ್ರೇಮ ಮಾಡುತ್ತೇವೆ. ಆದರೆ ಆ ಪ್ರೇಮ ಸೀಮಿತ; ಹೊಲಕ್ಕೆ, ಮನೆಗೆ, ಹೆಂಡತಿ ಮಕ್ಕಳಿಗೆ ಸೀಮಿತ. ಯಾಕೆ? ನಮ್ಮ ದೃಷ್ಟಿ ಬಹಳ ಸಂಕುಚಿತ. ನಮ್ಮ ಮನೆಯ ಸುತ್ತ ಒಂದು ಗಿಡ ಬೆಳೆಸಿದರೆ ಸಾಕು, ಅರಣ್ಯ ನಷ್ಟ ಆದರೂ ನಮಗೆ ಅದರ ಪರಿವೆ ಇರುವುದಿಲ್ಲ. ಹಾಗೆ ನಮ್ಮ ಭಾವ ಬೇರೆ. ಋಷಿಗಳ ಸಂತರ ಜ್ಞಾನಿಗಳ ಭಾವ ಹಾಗೂ ದರ್ಶನ ಬೇರೆ!

ಈ ಭೂಮಿಯನ್ನು ಮಧು ಎಂದು ನೋಡಬೇಕು. ಪ್ರೀತಿಸಬೇಕು. ಇದು ಪೌರ್ವಾತ್ಯ ಎಂದು ಪ್ರೀತಿಸುವುದಲ್ಲ. ಇದು ಪಾಶ್ಚಾತ್ಯ ಎಂದು ಪ್ರೀತಿಸುವುದಲ್ಲ. ಯಾವ ಸಾಗರಗಳೂ ಹಿಂದೂ ಅಲ್ಲ, ಕ್ರಿಶ್ಚಿಯನ್ ಅಲ್ಲ, ಮುಸ್ಲಿಂ ಅಲ್ಲ. ಸಾಗರಗಳು ಸಾಗರ! ಬೆಟ್ಟಗಳು ಬೆಟ್ಟ. ಭೂಮಂಡಲ ಭೂಮಂಡಲ! ಭಗವಂತನ ಅದ್ಭುತವಾದ ಮಧುಬಿಂದು!

ಯಶ್ಚಾಯಂ ಅಸ್ಯಾಂ ಪೃಥಿವ್ಯಾಂ

ಮಧುವಾಗಿರುವಂಥ ಈ ವಿಶ್ವದೊಳಗೆ ಕೇವಲ ಪೃಥ್ವಿ ಕಾಣಿಸಲಿಲ್ಲ, ಋಷಿಗೆ, ಜ್ಞಾನಿಗೆ, ಪೃಥ್ವಿಯ ಕಣಕಣದೊಳಗೆ 'ತೇಜೋಮಯಃ ಅಮೃತಮಯಃ ಪುರುಷಃ' ಅತ್ಯಂತ ತೇಜೋವಂತನಾದಂಥ ಕಾಲಸ್ಪರ್ಶ ಇಲ್ಲದ ಅಮೃತಮಯವಾದಂಥ ಪುರುಷತತ್ವ ಕಂಡಿತು. ಶರೀರದೊಳಗೆ ಅದೇ ತೇಜೋಮಯ, ಅದೇ ಅಮೃತಮಯ ಪುರುಷ! ಯಾವ ಪುರುಷಚೇತನ ಮಧುಮೂಲದಲ್ಲಿ ಇತ್ತೋ ಅದೇ ಭವ್ಯ ಭಗವಂತ. ಈ ಭೂಮಂಡಲದಲ್ಲಿ ಹಾಗೆಯೇ ಈ ದೇಹದೊಳಗೆ ಮಧುತತ್ತ್ವ! ವಿಶ್ವದೊಳಗಿರುವಂಥ ಮಧುವನ್ನು ಆಸ್ವಾದನ ಮಾಡುವವನು ವಿಶ್ವಗತಚೇತನ. ದೇಹದೊಳಗಿರುವಂಥ ಮಧುವನ್ನು ಆಸ್ವಾದನ ಮಾಡುವವನು ದೇಹಗತ ಚೇತನ! ವಿಶ್ವದೊಳಗಿರುವ ಮಧುವನ್ನು ಆಸ್ವಾದನ ಮಾಡುವವನು ಈಶಚೇತನ. ಶರೀರದೊಳಗಿರುವ ಮಧುವನ್ನು ಆಸ್ವಾದ ಮಾಡುವವನು ಜೀವಚೇತನ. ಎಲ್ಲವನ್ನು ಮಧುವಾಗಿ ನೋಡಿದವ ದಾರ್ಶನಿಕ!

Here is the heaven, where the country
Is big and population small;
Where there is more supply of goods
Than the people use;
Where the people love their lives
more than fashions;
Where peoples' armoury is empty and
Their granary is full;
Where they enjoy the food and simple clothing;
Where they are satisfied with their families
And they take delight in the
Small things of life;
Where they can live as close neighbours,
All those people who are of
Different race.

ಲಾವೋತ್ಸೆ ಈ ಭೌತಿಕ ಬದುಕನ್ನು ಸ್ವರ್ಗವನ್ನಾಗಿ ಚಿತ್ರಿಸಿದ. ಭೂಮಂಡಲ ಲಾವೋತ್ಸೆಗೆ ಸ್ವರ್ಗ. ಆತ ಸ್ವರ್ಗೀಯ ಬದುಕಿನ ವರ್ಣನೆ ಮಾಡುತ್ತಾನೆ. ರಾಜ್ಯ, ದೇಶ ಬಹು ದೊಡ್ಡದಾಗಿರಬೇಕು. ಆದರೆ ಜನ ಮಿತವಾಗಿರಬೇಕು. ನಾವು ಎಷ್ಟು ಬಳಸಿದರೂ ಕೂಡ ಕಡಿಮೆ ಬೀಳಬಾರದು. ಅಷ್ಟು ವಸ್ತುಗಳು ಇರಬೇಕು. ಜನ ಜೀವನವನ್ನು ಹೆಚ್ಚು ಪ್ರೀತಿಸುತ್ತಿರ ಬೇಕು. ಆಹಾರವನ್ನು ಸವಿಯುವಲ್ಲಿ ಸಂತೋಷಿಗಳಾಗಿರಬೇಕು. ಬಟ್ಟೆಯನ್ನು ನೇಯುವಲ್ಲಿ ಸ್ವರ್ಗೀಯ ಆನಂದ ಅನುಭವಿಸಬೇಕು! ಅಷ್ಟೇ ಅಲ್ಲ ತಮ್ಮ ಪಾಲಿಗೆ

ಬಂದಿರುವ ಮನೆ, ಹೆಂಡತಿ, ಮಕ್ಕಳು, ಬಂಧು-ಬಾಂಧವರು, ಗೆಳೆಯರು, ಇವರ ಮಧ್ಯದಲ್ಲಿ ಆತನ ಹೃದಯ ಹರ್ಷನಿರ್ಭರವಾಗಬೇಕು. ತಾನು ಮಾಡುವ ಕಾರ್ಯ ದೈವೀಸಾಧನೆ ಎನಿಸಬೇಕು! ಕೊನೆಯದಾಗಿ, ಎಲ್ಲ ಜೀವರಲ್ಲಿ, ಮಾನವರಲ್ಲಿ ಸಮಪ್ರೇಮಿಯಾಗಿರಬೇಕು. ಇದು ಸ್ವರ್ಗ ಲಾವೋತ್ಸೇಯ ಕಣ್ಣಿನಲ್ಲಿ. ಇಂತು ಈ ಭೂಮಂಡಲದ ಬದುಕು ಋಷಿಗೆ ಮಧು. ಲಾವೋತ್ಸೇಗೆ ಸ್ವರ್ಗ!

ಮಧು ವಿಶ್ವ! ಆದರೆ ತಿಳಿಯದ ಮನುಷ್ಯ ಮೇರೆ ಹಾಕಿದ. ದ್ವೇಷ ರಾಗಗಳ ಹುಳಿ ಸುರಿದ. ಭೇದದೃಷ್ಟಿ ಬೀರಿ ಎಲ್ಲ ಸೌಂದರ್ಯವನ್ನೂ ಮರೆ ಮಾಚಿದ. ಉಳಿದ ಜೀವಿಗಳನ್ನು ಹಿಂಸಿಸಿದ. ತನ್ನ ಕುಲವನ್ನು ಅತಿಗೊಳಿಸಿದ. ಬದುಕನ್ನೇ ಸಮಸ್ಯೆ ಮಾಡಿಕೊಂಡ. ದುಃಖ ಹೆಚ್ಚಿತು. ಭೂಮಿ ನರಕವಾಯಿತು ಅವನ ಮಟ್ಟಿಗೆ!

ಲಾವೋತ್ಸೇಯ ಭೂಸ್ವರ್ಗ ಚಿಂತನೀಯ! ದೇಶ ನಿಸ್ಸೀಮ ವಾಗಿರಬೇಕು; ಜನ ಕಡಿಮೆ ಇರಬೇಕು! ಹಾಲು ಹೈನು, ಹಣ್ಣು ಕಾಯಿ ಎಲ್ಲೆಡೆ ಧಾರಾಳವಾಗಿ ಲಭ್ಯವಿರಬೇಕು! ದವಸಧಾನ್ಯಗಳಿಂದ ಕಣಜ ತುಂಬಿರಬೇಕು; ಆದರೆ ಶಸ್ತ್ರಾಸ್ತ್ರಗಳ ಆಗರ ಬರಿದಾಗಿರಬೇಕು! ಎಂಥ ಮಧುದರ್ಶನವಿದು! ದೇವರು ಮನುಷ್ಯನನ್ನು ಭೂಮಿಗೆ ಕಳಿಸುವಾಗ ಹಾಗಿತ್ತು! ಈತ ಬಂದ; ಆಸೆಯ ಭೂತದೊಂದಿಗೆ ನೆಲೆನಿಂತ. ಎಲ್ಲ ಹದಗೆಡಿಸಿದ!

ಈಗ ಮನುಷ್ಯ ಶಸ್ತ್ರಾಸ್ತ್ರಗಳ ಆಗರ ಹೆಚ್ಚಿಸಿದ. ಸರ್ವವಿನಾಶಕ ಅಸ್ತ್ರ ಸಹಸ್ರ! ದುರಾಸೆ ಮನದಲ್ಲಿ. ಸ್ವರ್ಗದ ಕನಸು ಹೇಗೆ ನನಸಾದೀತು? ದೇವರ ಕಣಜ ಈ ಭೂಮಿ. ಒಂದು ಬೀಜ ಹಾಕಿ; ಲಕ್ಷ ಫಲ ಕೈವಶ! ಕಸ ಚೆಲ್ಲಿದರೆ ರಸವಾಗಿ ಕೈಗೆ! ಇಂಥ ಕಣಜ ಬರಿದಾಗಿಸಿದ. ವಿನಾಶಕ ಆಯುಧಗಳಿಂದ ತುಂಬಿದ!

ಮಾನವ ಇಲ್ಲಿ ಬಂದ ಬಳಿಕ ಪ್ರೀತಿಸಲು ಕಲಿಯಬೇಕಿತ್ತು. ವಿಷಯ ಲಾಲಸೆ ಹೆಚ್ಚಿಸಿಕೊಂಡ. ಕಾಮಾದಿಗಳಿಗೆ ಆದ್ಯ ಸ್ಥಾನವಿತ್ತ. ಸಾವಿರ ರಸಗಳು; ವಿವಿಧ ಆಹಾರ ವಸ್ತುಗಳು; ಸುಖವಾಗಿ ಅವುಗಳನ್ನು ದೇವಪ್ರಸಾದವೆಂದು ಭುಂಜಿಸಬೇಕಿತ್ತು. ಹಾಗೆ ಮಾಡಲಿಲ್ಲ. ಹಣ್ಣು ಹುಳಿಗೊಳಿಸಿ ಕುಡಿದ, ಕುಣಿದ, ಹುಚ್ಚನಾದ; ಉನ್ಮತ್ತನಾದ! ಆಪ್ಯಾಯಮಾನ ಆಹಾರಪದಾರ್ಥಗಳ ಕೆಡಿಸಿ ಸತ್ವಹೀನ ರೋಚಕಗಳ ಭುಂಜಿಸಿದ. ಪ್ರೀತಿಯವರ ಸಾದಾ ಆಹಾರ ತಿರಸ್ಕರಿಸಿ ವ್ಯಾಪಾರೀ ಖಾದ್ಯಗಳ ಮೋಹದಲ್ಲಿ ಬಿದ್ದ. ತಾಯಿಹೃದಯದ ವ್ಯಕ್ತಿಗಳಿತ್ತ ಒಲವಿನ ಅಮೃತಾನ್ನವನ್ನು ಉದಾಸಿನ ಮಾಡಿ ನಾಲಗೆಯ ರುಚಿಗೆ ಬಲಿಯಾದ!

ಲಾವೋತ್ಸೆ ಮುಂದುವರಿದು ಹೇಳುತ್ತಾನೆ, ದೇವರು ನಮಗೆ ಬೆಲೆಬಾಳುವ ವಸ್ತು ಹೊದಿಸಿ ಕಳಿಸಿದ. ಕೆಂಪು, ಕಪ್ಪು, ಹಳದಿ, ಬಿಳಿ! ಎಲ್ಲವೂ ಸುಂದರ. ತಾಳುವಂಥದು. ಸುಖಕಾರಿ. ಕಣ್ಣು ಕಿವಿ ಕೈ ಎಲ್ಲ ಅವನ ಕಾಣಿಕೆ. ಎಲ್ಲರಿಗೂ ಸಮನಾಗಿ. ರಾಜನ ಕಣ್ಣು, ಸಾಮಾನ್ಯನ ಕಣ್ಣು ಎಂದೇನಿಲ್ಲ! ಎಲ್ಲವೂ ಸಮರ್ಥ, ಸುಭಗ. ಈ ಬಣ್ಣ, ಈ ಇಂದ್ರಿಯ

ಗಳನ್ನು, ಈ ಅವಯವಗಳನ್ನು ಮನುಷ್ಯ ಪ್ರೀತಿಸಬೇಕು! ಆ ಅವಯವಗಳ ಬಗೆಗೆ ಹೆಮ್ಮೆ ಇರಬೇಕು. ಆಗ ಸ್ವರ್ಗ. ಬಸವಣ್ಣ ಕೂಡ 'ದೇಹವೇ ದೇಗುಲ, ಎನ್ನ ಕಾಲೇ ಕಂಬ' ಎಂದ. ಅವನ ದೃಷ್ಟಿಯಲ್ಲಿ ದೇಹವು ದೇವಾಲಯ. ಒಳಗೆ ದೇವರು! ಅಷ್ಟು ದಿವ್ಯ! ಅಷ್ಟು ಪವಿತ್ರ! ಇಂತು ಜ್ಞಾನಿಗಳಿಗೆ ವಿಶ್ವ ಮಧು! ಜೀವನ ಮಧು!

ನಮಗಿದು ಸ್ವರ್ಗವಲ್ಲ, ಮರ್ತ್ಯ, ನರಕ! ನಮ್ಮ ಅಜ್ಞಾನ, ನಮ್ಮ ಅತ್ಯಾಸೆ, ಸ್ವಾರ್ಥ ಎಲ್ಲ ಹಾನಿಗೂ ಕಾರಣ.

ಹೆಂಡತಿ, ಮಕ್ಕಳು, ಬಂಧು-ಬಾಂಧವರು ಸಂತೋಷ ಕೊಡುತ್ತಾರೆ; ತಮ್ಮ ಪ್ರೇಮ(ವರ್ಷ)ದಿಂದ ನಮ್ಮ ಬದುಕು ಮಧುರಗೊಳಿಸುತ್ತಾರೆ. ನಾವು ಅವರೊಂದಿಗೆ ತೃಪ್ತರಾಗಿರಬೇಕು. ನಾವಿರುವ ಮನೆ ಕುಟೀರವೇ ಇರಲಿ, ಭವ್ಯ ಮಹಲೇ ಇರಲಿ; ಮಹಲಿನ ಮನುಷ್ಯ ಮಹಲನ್ನು ಪ್ರೀತಿಸಿದ ಹಾಗೆ, ಕುಟೀರದ ಮನುಷ್ಯ ಕುಟೀರವನ್ನು ಪ್ರೀತಿಸಬೇಕಾಗುತ್ತದೆ. ಆ ಪ್ರೇಮ ಮನೆ ಕಟ್ಟುತ್ತದೆ, ಕಲ್ಲು ಮಣ್ಣುಗಳನ್ನಲ್ಲ.

ಒಂದು ಮನೆ, ಭವ್ಯ ಮನೆ. ಒಬ್ಬ ಶ್ರೀಮಂತ ಕಟ್ಟಿದ. ಐದು ಅಂತಸ್ತು. ವಿಶಾಲವಾದ ಮನೆ. ಮಾರ್ಬಲ್‌ನಲ್ಲಿ ನಿರ್ಮಾಣ ಮಾಡಿದ. ಅಂದು ವಾಸ್ತುಶಾಂತಿ. ಮನೆಯನ್ನು ಪ್ರವೇಶಿಸಿದ. ಆ ಊರಲ್ಲಿ ಅಂತಹ ಮನೆ ಯಾರದೂ ಇರಲಿಲ್ಲ. ಅಷ್ಟು ಸುಂದರ ಭವ್ಯ ಮನೆ. ಆ ದಿನ ಹುಣ್ಣಿಮೆ. ಹಾಲು ಚೆಲ್ಲಿದ ಬೆಳದಿಂಗಳು. ಅರ್ಧ ರಾತ್ರಿ, ೭೦-೮೦ ವರ್ಷದ ಮುದುಕ. ಮಲಗಲಿಲ್ಲ. ಆನಂದವಾಗಿತ್ತು ಮನೆಯನ್ನು ನೋಡಿ. ಮೇಲೆ ಏರಿದ, ಐದನೇ ಅಂತಸ್ತಿನ ಮೇಲೆ ಹೋಗಿ ನಿಂತ. ಎಲ್ಲಾ ಕಡೆ ಬೆಳದಿಂಗಳಲ್ಲಿ ಊರು. ಆ ತಂಪಾದ ಬೆಳದಿಂಗಳೊಳಗೆ ಹಾಲುಗಲ್ಲಿನ ಮನೆ ಅಂದವಾಗಿ ಕಾಣುತ್ತಿತ್ತು. ಮುದುಕನಿಗೆ ಸ್ವರ್ಗಸಂತೋಷ. ಹಾಗೆ ಅನುಭವಿಸುತ್ತಿರುವಾಗ ಅತನ ದೃಷ್ಟಿ ನೆರೆಮನೆಯತ್ತ ಹರಿಯಿತು. ತನ್ನ ಮನೆಯ ಮಗ್ಗುಲಲ್ಲೇ ಸಣ್ಣದೊಂದು ಕುಟೀರ. ಮೇಲೆಲ್ಲಾ ಚಪ್ಪರ ಹಾಕಿತ್ತು. ಮೇಲೆ ನಿಂತು ನೋಡಿದ. ಅವನಿಗೆ ಅನ್ನಿಸಿತ್ತು. ಆ ಕೆಳಗಿರುವ ಗುಡಿಸಲು ತನ್ನ ಮನೆಗೆ ಶೋಭೆ ಅಲ್ಲ ಎಂದು. ಐದು ಅಂತಸ್ತಿನ ಭವ್ಯ ಮನೆಗೆ ಇಂತಹ ಗುಡಿಸಲು ಕುಂದು, ಕಳಂಕ! ಎಂದ. ಆ ಭವ್ಯ ಮನೆಯ ಸಂತಸ ಶೂನ್ಯವಾಗಿತ್ತು. ಕೆಳಗಿಳಿದ. ಕುಟೀರದ ಯಜಮಾನಿ ವೃದ್ಧೆಯನ್ನು ಕರೆಸಿದ.

ಧಾನ್ಯ ತಂದು ಬೀಸಿ ಕೊಟ್ಟು ಬಂದುದರಲ್ಲಿ ಸಂತೋಷದಿಂದ ಬದುಕಿದವಳು. ಶ್ರೀಮಂತ ಹೇಳಿದ, 'ಇದು ನಿನ್ನ ಗುಡಿಸಿಲು ತಾನೆ? ನನ್ನ ಭವ್ಯ ಮನೆಯ ಕಳೆಯನ್ನೇ ಅದು ಕೆಡಿಸುತ್ತಲಿದೆ. ಅದನ್ನು ಕೆಡಿಸಿ ಬೇರೆ ಒಪ್ಪುವ ಕಟ್ಟಡ ಮಾಡಬೇಕಿದೆ. ಮಾರಾಟಕ್ಕೆ ಕೊಡು.'

ಮುದುಕಿ ಹೇಳಿತು, 'ಸಾಹುಕಾರ್ರೇ, ಈ ಮನೆ ಮಾರಾಟಕ್ಕೆ ಇಲ್ಲ. ನೀವು ಬೇಕಾದಷ್ಟು ಹಣ ಕೊಟ್ಟರೂ ಈ ಸ್ಥಾನ ನಿಮಗೆ ದೊರೆಯುವುದಿಲ್ಲ. ನೀವು ಲಕ್ಷ, ಹತ್ತು ಲಕ್ಷ ಕೋಟಿ

ಕೊಟ್ಟರೂ ಸರಿ, ಆಗುವುದಿಲ್ಲ. ಆದ್ದರಿಂದ ತಾವು ಈ ಪ್ರಯತ್ನವನ್ನು ಬಿಟ್ಟುಬಿಡಿ. ಈ ಕುಟೀರದಲ್ಲಿ ನಿಮ್ಮ ಮಹಲಿನಲ್ಲಿರದ ಅಮೌಲ್ಯ ಸಿರಿ ಇದೆ. ಇಲ್ಲಿ ನನ್ನ ಪತಿಯ ಪ್ರೇಮ ಹರವಿದೆ. ಆತ ದೇಹ ಬಿಟ್ಟು ದಶಕಗಳೇ ಕಳೆದಿವೆ. ಆದರೆ ಆ ಪ್ರೇಮ ಇಲ್ಲಿ ಶಾಶ್ವತ. ಈ ಗುಡಿಸಲು ನನ್ನ ದೃಷ್ಟಿಯಲ್ಲಿ ಅಮೌಲ್ಯ! ಇಂದ್ರ ಭವನ! ದೇವನಿಲಯ! ಗುಡಿಸಲಿಗೆ ಬೆಲೆ ಇಲ್ಲ. ಗುಡಿಸಲು ಕಟ್ಟಿದ ಭೂಮಿಗೆ ಬೆಲೆ ಇಲ್ಲ. ಆದರೆ ಗುಡಿಸಲಲ್ಲಿ ತುಂಬಿರುವ ಪ್ರೇಮಕ್ಕೆ ಬೆಲೆ ಇದೆ. ಸಾಹುಕಾರ್ರೇ, ಆ ಪ್ರೇಮಕ್ಕೆ ನಿಮ್ಮ ಎಲ್ಲ ಸಂಪತ್ತೂ ಒಂದು ಕವಡೆ. ಇನ್ನೊಂದು ಮಾತು ಸಾಹುಕಾರರೇ, ಇಂತಹ ಮನೆಯನ್ನು ಕಟ್ಟಿದ್ದೀರಿ ನೀವು. ಇದು ಮಾರ್ಬಲ್ ಮನೆ. ನನ್ನದು ಸಣ್ಣ ಗುಡಿಸಲು. ಅಂತಹ ಗುಡಿಸಲಿನಲ್ಲಿ ನಾನು ಎಷ್ಟು ಆನಂದವಾಗಿ ಬಾಳಿ ಬದುಕಿದ್ದೇನೆ! ನಿಮಗೆ ಇಂತಹ ಮನೆಯೊಳಗೆ ಸಂತೋಷವಾಗಿ ಬಾಳಿ ಬದುಕುವುದಕ್ಕೆ ಬರುತ್ತಿಲ್ಲವಲ್ಲ?'

ನಮ್ಮದು ಮಹಲು ೧೦೧ ಅಂತಸ್ತು, ಆದರೆ ನಮ್ಮ ಹೃದಯ ಸಂತೋಷಪಡುವಷ್ಟು ದೊಡ್ಡದಿಲ್ಲ. ಸುಸಂಸ್ಕೃತ ಅಲ್ಲ. ಏನು ಇದೆ ಮನೆಯೊಳಗೆ ಅದನ್ನು ಅನುಭವಿಸಿ, ಅನುಭವಿಸಿ ಸಂತೋಷಪಡುವಂಥ ದೃಷ್ಟಿ ಬರಬೇಕು. ಆ ದೃಷ್ಟಿ ಬಂತು ಅಂದರೆ ಈ ಭೂಮಂಡಲವೇ ಸ್ವರ್ಗ, ಆ ಬಳಿಕ ನಾವು ಹೇಗೆ ಬದುಕಬೇಕು ಎಂದರೆ ನಮ್ಮ ನೆರೆಹೊರೆ ಯವರು ಭಿನ್ನಭಿನ್ನ ಒಲವಿನವರಿರಬೇಕು! ಆದರೆ ಅವರೆಲ್ಲಾ ಹತ್ತಿರದವರಾಗಿರಬೇಕು!

ಒಂದು ಗಿಡದೊಳಗೆ ಎಲ್ಲಾ ಬಗೆಯ ಪಕ್ಷಿಗಳು. ಒಂದು ಸಣ್ಣದು, ಒಂದು ದೊಡ್ಡದು. ಒಂದು ಹಾಡುವುದು, ಒಂದು ಕುಣಿಯುವುದು. ಎಲ್ಲಕ್ಕೂ ಗಿಡ ಆಶ್ರಯ. ಒಂದನ್ನೊಂದು ತಿರಸ್ಕರಿಸುವುದಿಲ್ಲ.

ಅರಣ್ಯದ ಮಧ್ಯ ಒಂದು ಮೊಲ. ಒಂದು ದಿವಸ ಭಗವಂತ ಕೇಳಿದ, 'ಮೊಲವೇ, ಪಾಪ! ನೀನು ನಿಷ್ಪಾಪಿ ಪ್ರಾಣಿ, ನಿನ್ನನ್ನು ತಿಂದು ಕ್ರೂರ ಪ್ರಾಣಿಗಳು ಬದುಕುತ್ತಿವೆ. ನಿನ್ನ ಪರಿಸ್ಥಿತಿ ನೋಡಿ ನನಗೆ ಕನಿಕರವೆನಿಸಿದೆ. ನಿನ್ನ ರಕ್ಷಿಸಿಕೊಳ್ಳಲು ಏನಾದರೂ ಬೇಕಿದ್ದರೆ ಕೇಳು, ಕೊಡುವೆ' ಎಂದ. ಆಗ ಮೊಲ ಹೇಳಿತು, 'ಭಗವಂತನೆ, ಅವೆಲ್ಲ ಅಷ್ಟು ಶಸ್ತ್ರ ಇಟ್ಟುಕೊಂಡೂ ನಮ್ಮಷ್ಟು ದೊಡ್ಡ ಸಂಖ್ಯೆಯಲ್ಲಿ ಬದುಕಿಲ್ಲ. ನನ್ನ ಕೈಗೆ ಉಗುರಿಲ್ಲ, ತಲೆಯ ಮೇಲೆ ಕೊಂಬಿಲ್ಲ! ಆದರೆ ನನ್ನ ಕಾಲುಗಳಲ್ಲಿ ಶಕ್ತಿ ಇದೆ. ನನ್ನ ಮನಸ್ಸಿನಲ್ಲಿ ತೃಪ್ತಿ ಇದೆ. ನನ್ನ ದೇಹ ಇಷ್ಟು ವೇಗವಾಗಿ ಓಡಬಲ್ಲದು, ಅದು ನಮ್ಮ ವಂಶವನ್ನು ರಕ್ಷಿಸಿದೆ! ನನ್ನ ಬಗೆಗೆ ನನಗೆ ಸಂತೋಷವಿದೆ. ತೃಪ್ತಿ ಇದೆ. ನಿನ್ನ ಯಾವ ವಸ್ತುವಿನ ಅವಶ್ಯಕತೆ ನನಗಿಲ್ಲ. ನಾನು ಈ ಹಿಂಸಾಪ್ರಾಣಿಗಳೊಂದಿಗೆ ಬದುಕಬೇಕು. ನಮಗೆ ಅಲ್ಲೇ ಸಂತೋಷ !'

ಅಂತಹ ಪ್ರಾಣಿಗಳೂ ಕೂಡ ಹೀಗೆ ಬಯಸುತ್ತವೆ. ಹಾವಿನಂಥ ಪ್ರಾಣಿಗಳು ಈ ಜಗತ್ತನ್ನು ಪ್ರೀತಿಸಿ ಎಲ್ಲ ಪ್ರಾಣಿಗಳೊಂದಿಗೆ ಬಾಳಿ ಕೊಂಡಿವೆ. ಅನವಶ್ಯವಾಗಿ ಆಕ್ರಮಿಸುವ

ಕ್ರೌರ್ಯ ಅವುಗಳಲ್ಲಿಲ್ಲ. ನಾನು ನಾಸ್ತಿಕ. ನೀವು ಆಸ್ತಿಕ. ಅನೇಕ ಧರ್ಮಗಳು. ನಮ್ಮ ನಮ್ಮ ಧರ್ಮಗಳು ಕೂಡಿ ಬಾಳಲು ಕಲಿಸದೆ ಇದ್ದರೆ ಆ ಧರ್ಮ ಏಕೆ? ಯಾವ ಪ್ರಯೋಜನಕ್ಕೆ?

ಒಬ್ಬ ಒಂದು ಧರ್ಮದವ, ಇನ್ನೊಬ್ಬ ಇನ್ನೊಂದು ಧರ್ಮದವ. ಧರ್ಮರಕ್ಷಣೆಗಾಗಿ ಭಯಂಕರವಾದ ಯುದ್ಧ ನಡೆಯಿತು. ಭೂಮಂಡಲ ಉರಿಯಿತು. ಲಕ್ಷಾಂತರ ಕೋಟ್ಯಂತರ ಪ್ರಾಣಿಗಳು ನಷ್ಟವಾದುವು. ಬಳಿಕ ಆ ಇಬ್ಬರೂ ಧಾರ್ಮಿಕ ಮುಖಂಡರು ಸ್ವರ್ಗಕ್ಕೆ ಹೋದರು. ಭಗವಂತನನ್ನು ಸಂಧಿಸಿದರು. "ಇಲ್ಲಿ ಏಕೆ ಬಂದಿರಿ?" ಎಂದು ಕೇಳಿದ ದೇವರು. ಇಬ್ಬರು ಹೇಳತೊಡಗಿದರು, "ಭಗವಾನ್, ನಿನಗಾಗಿ ಇಂತಹ ಭಯಂಕರ ಯುದ್ಧವನ್ನು ಮಾಡಿದೆ ನಾನು. ಪ್ರಾಣದ ಪರಿವೆ ಇರದೆ ನಿಮ್ಮ ರಕ್ಷಣೆಗಾಗಿ, ನಿಮ್ಮ ಧರ್ಮದ ರಕ್ಷಣೆಗಾಗಿ ಹೋರಾಡಿದೆ." ಭಗವಂತ ಹೇಳಿದ, "ನನಗಾಗಿ ನೀವು ಯುದ್ಧ ಮಾಡಿದಿರೋ? ಯಾವ ಜಗತ್ತನ್ನು ನಾನು ಕಷ್ಟಪಟ್ಟು ನಿರ್ಮಾಣ ಮಾಡಿದೆ ಆ ಸುಂದರ ಜಗತ್ತನ್ನೇ ವಿನಷ್ಟಗೊಳಿಸಿ ಬಂದಿರಲ್ಲ! ನಿಮ್ಮದು ಯಾವ ಧರ್ಮ ಅದು? ನನ್ನ ಸಾಮ್ರಾಜ್ಯವನ್ನು ನಷ್ಟಗೊಳಿಸಿ, ನನ್ನನ್ನು ರಕ್ಷಿಸುವಂಥ ಧರ್ಮ ಅದು ಯಾವುದು?"

ಭಗವಂತನು, ನಾವು ಕೂಡಿ ನಕ್ಕು ನಲಿದು ಇರುವುದನ್ನು ಬಯಸುತ್ತಾನೆಯೇ ವಿನಾ ನಾವು ಬಡಿದಾಡುವುದನ್ನಲ್ಲ. 'ಸಕಲ ಜೀವರಿಗೆ ಲೇಸ ಬಯಸುವ' ಎಂಬ ಬಸವಣ್ಣನ ಮಾತಿನಲ್ಲಿ 'ಸಕಲ' ಎಂದರೆ ಯಾರು? ಕೇವಲ ಲಿಂಗಾಯತರೆ? 'ಸರ್ವೇ ಜನಾಃ ಸುಖಿನೋ ಭವಂತು' ಸರ್ವೇ ಜನವೆಂದರೆ ಯಾರು? ಕೇವಲ ಹಿಂದುಗಳೆ? 'ನೆರೆಯವರ ಪ್ರೀತಿಸು' ಎಂದ ಕ್ರಿಸ್ತ. ನೆರೆಯವರು ಯಾರು? ಕೇವಲ ಕ್ರಿಶ್ಚಿಯನ್ನರೆ? ಅಲ್ಲ. ಎಲ್ಲರೂ! ಆ ದೃಷ್ಟಿ ಇರಿಸಿದರೆ ಮಧುದರ್ಶನ!

ಮಧುವನ್ನು ಈ ತನ್ನ ಆನಂದಸ್ವರೂಪದ ಬಿಂದುವಾಗಿ ಈ ಆಕಾಶದೊಳಗೆ ಚೆಲ್ಲಿದ ದೇವರು. ಅಂತಹ ಬಿಂದುವೇ ಭೂಮಂಡಲವಾಗಿ ಮಾರ್ಪಟ್ಟಿತು! ಈ ಜಗತ್ತನ್ನು ಮಧು ಎಂದು ಪ್ರೀತಿಸುವುದು.

ಈ ಜಗತ್ತು ನಮ್ಮನ್ನು ಮಧು ಎಂದು ಅಪ್ಪಿಕೊಳ್ಳುವುದು. ಇದು ಭಗವಚ್ಜೀವನ! ಭಗವಚ್ಚಿಂತನೆಯಿಂದ ಇಂಥ ಬದುಕು ರೂಪುಗೊಳ್ಳಬೇಕು. ಈ ಸಮಗ್ರ ಪೃಥ್ವಿ ಮಧು. ಎಲ್ಲ ವ್ಯಕ್ತಿಗಳೂ ಅದೇ ಮಧು! ನಿಮ್ಮನ್ನು ಕಂಡರೆ ನನಗೆ ಸಂತೋಷ ಆಗುತ್ತಿದ್ದರೆ ನನಗೆ ನೀವು ಮಧು! ನನ್ನನ್ನು ಕಂಡು ನಿಮಗೆ ಸಂತೋಷ ಆಗುತ್ತಿದ್ದರೆ ನಿಮಗೆ ನಾನು ಮಧು! 'ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ.' ಆವಾಗ ನನ್ನದೂ ನಿಮ್ಮದೂ ಶ್ರೇಯವಾಗುತ್ತದೆ! ಹೀಗೆ ಪರಸ್ಪರ ಶ್ರೇಯ ಉಂಟಾದಾಗ ಈ ಜಗತ್ತು ಸ್ವರ್ಗವಾಗುತ್ತದೆ! ಇನ್ನೊಂದು ಸ್ವರ್ಗಕ್ಕಾಗಿ ತವಕಿಸುವ ಪ್ರಶ್ನೆ ಬರುವುದಿಲ್ಲ. ಜೀವನವನ್ನು ಸ್ವರ್ಗೀಯ, ದಿವ್ಯ ಜೀವನವನ್ನಾಗಿ ಪರಿವರ್ತಿಸಿಕೊಳ್ಳುವುದು ಮನುಷ್ಯನ ಕೈಯೊಳಗಿದೆ! ಆದರೆ ಚಿಂತನೆಯ ಕೊರತೆಯಿಂದಾಗಿ ವಿಫಲನಾಗಿದ್ದಾನೆ.

ನಾವು ಶಬ್ದ ಕೇಳೋಣ, ರೂಪ ನೋಡೋಣ, ರಸವನ್ನು ಅನುಭವಿಸೋಣ, ಆದರೆ ಆ ಶಬ್ದ, ರಸ, ರೂಪ, ದಿವ್ಯ ಆಗಿರಬೇಕು! ಹೀಗೆ ದಿವ್ಯತೆಯನ್ನು ಪ್ರತಿ ವಿಷಯದಲ್ಲಿ ತುಂಬಿ ಆಸ್ವಾದನೆ ಮಾಡಿಕೊಂಡಿರುವುದು ಜ್ಞಾನಿಗಳಿಗೆ ಗೊತ್ತಾಗಿತ್ತು. ಆದ್ದರಿಂದ ಜ್ಞಾನಿಗಳು ಭಗವಂತನನ್ನು ಎಷ್ಟು ಪ್ರೀತಿಸಿದರೋ, ಜಗತ್ತನ್ನೂ ಅಷ್ಟೇ ಪ್ರೀತಿಸಿದರು. ನಾವು ತಪ್ಪು ತಿಳಿದುಕೊಂಡಿದ್ದೇವೆ. ಅಧ್ಯಾತ್ಮದಲ್ಲಿ ಪ್ರವೇಶ ಮಾಡಿದ ಬಳಿಕ ಜಗತ್ತೆಲ್ಲ ಹೇಯವಾಗಿಬಿಡುತ್ತದೆ ಎಂದು ಭಾವಿಸಿದ್ದೇವೆ. ಹಾಗಿಲ್ಲ. ಅಧ್ಯಾತ್ಮದಲ್ಲಿ ಹೆಜ್ಜೆ ಹಾಕಿದರೆ ಎಲ್ಲವೂ ದಿವ್ಯವಾಗಿ ಕಾಣುತ್ತದೆ. ನಮ್ಮ ಸುತ್ತಲಿನ ಮನೆಮಾರು, ಎಲ್ಲಾ ಕಡೆ ಭಗವಂತನ ಪ್ರಸಾದದ ಅವತರಣ ಉಂಟಾಗುತ್ತದೆ! ಇದು ಇಂದಿನ ಮಧುಬಿಂದು. ಭಗವಚ್ಚಿಂತನ. ಅಂದರೆ ವಿಶ್ವ, ವಿಶ್ವದೊಳಗಿರುವ ಜೀವ, ಎರಡೂ ಮಧುಬಿಂದುಗಳು.

□

ಬಸವನ ಭಕ್ತಿ ಕೊಟ್ಟಣದಮನೆ
ಸಿರಿಯಾಳನ ಭಕ್ತಿ ಕಸಬುಗೇರಿ
ಸಿಂಧುಬಲ್ಲಾಳನ ಭಕ್ತಿ ಪರದಾರದ್ರೋಹ
ಉಳಿದಾದ ಅಟಮಟ ಉದಾಸೀನ ದಾಸೋಹವ ಮಾಡುವವರ
ದೈನ್ಯವೆಂಬ ಭೂತ ಸೋಂಕಿತು
ಮಣ್ಣಿನ ಮನೆಯ ಕಟ್ಟಿ
ಮಾಯಾ ಮೋಹಿನಿಯೆಂಬ ಮಹೇಂದ್ರಜಾಲದೊಳಗಾಗಿ
ಮಾಡುವ ಮಾಟ
ಭಕ್ತನಲ್ಲಿ ಉಂಡು ಉದ್ದಂಡವೃತ್ತಿಯಲ್ಲಿ ನಡೆವವರು ಶಿವನಲ್ಲ
ಇವರು ದೇವಲೋಕ ಮರ್ತ್ಯಲೋಕಕ್ಕೆ ಹೊರಗು
ಶ್ರೀಗಿರಿ ಚೆನ್ನಮಲ್ಲಿಕಾರ್ಜುನಾ
ನನ್ನ ಭಕ್ತಿ ನಿನ್ನೊಳಗೈಕ್ಯವಾಯಿತ್ತಾಗಿ ನಿರ್ವಯಲಾದೆ ಕಾಣಾ

ಅಕ್ಕಮಹಾದೇವಿ

ನಾ ಕಂಡಂತೆ ಪೂಜ್ಯಪಾದರು

ಪ್ರೊ. ವೀರಭದ್ರ

ಒಂದು ನಾಡಿನ ಪುಣ್ಯದಿಂದಾಗಿ ಆ ನಾಡಿನಲ್ಲಿ ಅತಿಶ್ರೇಷ್ಠ ಕವಿಗಳು, ಶಿಲ್ಪಿಗಳು, ಗಾಯಕರು, ಚಿತ್ರಕಾರರು, ನಟರು, ಕಲಾವಿದರು, ಸಮಾಜಸುಧಾರಕರು ಜನ್ಮತಾಳುತ್ತಾರೆ. ಮತ್ತು ಆ ನಾಡಿನ ಹಾಗೂ ಆ ನಾಡಿನ ಈ ಅತಿಶ್ರೇಷ್ಠರ ಪುಣ್ಯವಿಶೇಷದಿಂದಾಗಿ-ಲೌಕಿಕ ಪಾರಲೌಕಿಕಗಳ ಸೇತುವೆಯಂತೆ — ಶ್ರೀ ಸುತ್ತೂರು ವೀರಸಿಂಹಾಸನಾಧೀಶ್ವರ, ರಾಜಗುರುತಿಲಕ, ಜಗದ್ಗುರು ಶ್ರೀ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಂತಹ ದಿವ್ಯಪುರುಷೋತ್ತಮರು ಅವತರಿಸುತ್ತಾರೆ. ಶ್ರೀ ಶ್ರೀಗಳವರ ಪೂಜ್ಯ ಪಾದಸ್ಪರ್ಶದಿಂದ ನಮ್ಮ ನಾಡು ಧನ್ಯವಾಗಿದೆ. ಶ್ರೀ ಶ್ರೀಗಳವರ ಪೂಜ್ಯಪಾದಗಳನ್ನು ಸ್ಪರ್ಶಿಸಿ ನಾವು ಧನ್ಯರಾಗಿದ್ದೇವೆ.

ತ್ರಿವೇಣೀ ಸಂಗಮ

ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಯವರು — ಬಸವಣ್ಣನ ಭಕ್ತಿ, ಸಿದ್ಧರಾಮನ ಕರ್ಮಯೋಗಿತ್ವ, ಅಲ್ಲಮನ ಜ್ಞಾನ–ಮುಪ್ಪುರಿಗೊಂಡ ಮಹಾಮೂರ್ತಿಯಾಗಿದ್ದಾರೆ. ಭಕ್ತಿಯೋಗ ಕರ್ಮಯೋಗ ಜ್ಞಾನಯೋಗಗಳ ತ್ರಿವೇಣೀ ಸಂಗಮವೆನಿಸಿದ್ದಾರೆ. ಶಾಂತ ಪ್ರಶಾಂತ ಮುಖಮಂಡಲದ ಮೇಲೆ ರಾರಾಜಿಸುವ ವಿಭೂತಿ ತ್ರಿರೇಖೆಗಳು ಈ ತ್ರಿವೇಣೀ ಸಂಗಮದ ಸಂಕೇತದಂತಿವೆ.

ಶ್ರೀ ವಟವೃಕ್ಷ

ಭೂವ್ಯೋಮಗಳನ್ನು ಏಕಗೊಳಿಸುವ ವಟವೃಕ್ಷ ಗಿಣಿಗಳಿಗೆ ಕೋಗಿಲೆಗಳಿಗೆ ಕಾಕ-ಘೂಕಗಳಿಗೆ, ಕ್ರಿಮಿ-ಕೀಟಗಳಿಗೆ, ನಾಗ-ನಾಗಿಯರಿಗೆ, ಅಷ್ಟೇಕೆ–ಬ್ರಹ್ಮರಾಕ್ಷಸರಿಗೂ ಆಶ್ರಯವೀಯುತ್ತ–ದೂರ ದೂರ ದಾರಿ ಕ್ರಮಿಸಿ, ಶ್ರಾಂತರಾಗಿ ಬಂದ ಪಾಂಥರಿಗೆ ತಣ್ಣೆಳಲನ್ನೆರೆದು, ನವಚೈತನ್ಯವನ್ನು ತುಂಬಿ, ಮುಂದಿನ ಗುರಿಯತ್ತ ಸಾಗಲು ಸ್ಫೂರ್ತಿಯನ್ನೊದಗಿಸಿ ತಂಗಾಳಿಯನ್ನು ಎಣ್ದೆಸೆಗಳಿಗೂ ತೀಡುತ್ತಿರುತ್ತದೆ. ಇದು ಸಾಧಾರಣ ಆಲದ ಮರ-ವಟವೃಕ್ಷದ ಚಿತ್ರ.

ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಯವರು ಅಸಾಧಾರಣ ಶ್ರೀ ವಟವೃಕ್ಷ. ತಮ್ಮ ಅನನ್ಯ ಕರುಣೆಯ ಕೊಂಬೆ-ರೆಂಬೆಗಳನ್ನು – ಶ್ರಾಂತ ಸಮಾಜದ ಮೇಲೆಲ್ಲಾ ಹರಡಿ ಅಶೇಷವೂ ವಿಶೇಷವೂ ವಿಶಿಷ್ಟವೂ ಆದ ಜೀವ ಚಾಲಕ ಶಕ್ತಿಕೇಂದ್ರವಾಗಿದ್ದಾರೆ. ಸಂಜೀವಿನಿ

ಸ್ವರೂಪರಾಗಿದ್ದಾರೆ. ಇವರ ಆಶ್ರಯಕ್ಕೆ ಬಂದ ಸಾಧಾರಣರು ಅಸಾಧಾರಣರಾಗಿದ್ದಾರೆ; ಸಾಮಾನ್ಯರು ಅಸಮಾನ್ಯರೆನಿಸಿದ್ದಾರೆ; ಕ್ಲೈಬ್ಯರು ಧೀರೋದಾತ್ತರಾಗಿದ್ದಾರೆ; ಬ್ರಹ್ಮರಾಕ್ಷಸರು ಭ್ರಾತೃಪ್ರೇಮಿಗಳಾಗಿದ್ದಾರೆ. ಇವರೊಲಿದ ಕೊರಡುಗಳು ಕೊನರಿವೆ, ಇವರೊಲಿದ ಬರಡುಗಳು ಹಯನಾಗಿವೆ, ಇವರೊಲಿದವರಿಗೆ ಸಕಲ ಪಡಿಪದಾರ್ಥಗಳು ಇದಿರಾಗಿವೆ.

ಕರುಣಾಸಾಗರ

ತಾಯಿಗೆ ಮಕ್ಕಳು ಹೇಗೋ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರಿಗೆ ವಿದ್ಯಾರ್ಥಿಗಳೆಂದರೆ ಹಾಗೆ. ಇವರ ಪಂಚೇಂದ್ರಿಯಗಳು, ಪಂಚ ಪ್ರಾಣಗಳು–ವಿದ್ಯಾರ್ಥಿಗಳೆ. ಕರುಣಾಪೂರಿತ ವಾತ್ಸಲ್ಯಮಯ ತಾಯ ಹೃದಯದಿಂದ, ಅಮೃತಹಸ್ತದಿಂದ, ಅತ್ಯಂತ ಮಮತೆಯಿಂದ ಆ ಕಾಲದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿ ಘಮಘಮಿಸುವ ಅವಿರಳ ತುಪ್ಪ, ಅಮೃತ ಸದೃಶ ಸಿಹಿ ಭಕ್ಷ್ಯಭೋಜ್ಯಗಳನ್ನು ಕೈಯಾರೆ ಊಡಿಸುತ್ತಿದ್ದರೆಂದು ಕೇಳಬಲ್ಲೆ. ಹೀಗೆ ವಿದ್ಯಾರ್ಥಿಗಳನ್ನು ಬೌದ್ಧಿಕ ಮಲ್ಲರನ್ನಾಗಿ ಮಾಡಿದ ಮಾತೃಹೃದಯದ ವಾತ್ಸಲ್ಯಮೂರ್ತಿಗಳು, ಸಮಾಜವನ್ನು ದಟ್ಟವಾಗಿ ಕವಿದ ಮೌಢ್ಯದ ಕೆಟ್ಟ ಕತ್ತಲನ್ನು ಕಂಡು ಕನಿಕರಿಸಿ– ಜ್ಞಾನಪ್ರಕಾಶವನ್ನು ಹರಡುತ್ತಿರುವ ಅನೇಕ ವಿದ್ಯಾ ಕೇಂದ್ರಗಳನ್ನು ಸಂಸ್ಥಾಪಿಸಿದ ಕರುಣಾಸಾಗರ–ಇವರು.

ಮೃತ್ಯುಂಜಯ

ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಯವರು ಕಲಿಯುಗದ ಮಾರ್ಕಂಡೇಯ. ಇವರಿಗೆ ಸಮಾಜವೇ ಲಿಂಗ. ಇವರಿಗೆ ಪೂಜೆ ಸಮಾಜ ಸೇವೆ. ಇವರು ಸದಾ ಸಮಾಜ ಸೇವೆಯಲ್ಲಿಯೇ ಲಿಂಗಾಲಿಂಗನದ ದಿವ್ಯಾನುಭವವನ್ನು ಅಹರ್ನಿಶಿ ಪಡೆಯುತ್ತಿರುವ ದಿವ್ಯ ಮೂರ್ತಿ. ಹಲವು ವರ್ಷಗಳ ಹಿಂದೆ ಸಮಾಜಸೇವಾನಿಮಿತ್ತ ಹುಬ್ಬಳ್ಳಿಗೆ ಹೋಗುವ ಹಾದಿಯಲ್ಲಿ–ಲೌಕಿಕದ ರಸ್ತೆ-ರಸ್ತೆಯನ್ನು ಬೆಸುಗೆ ಹಾಕಿದ ಸೇತುವೆಯ ಮೇಲೆ-ಲೌಕಿಕ ಪಾರಲೌಕಿಕಗಳ ಸೇತುವೆಯಂತಿರುವರೆಂಬುದನ್ನು ಬಗೆಯದೆ, ಕಲಿಯುಗದ ಮಾರ್ಕಂಡೇಯ ರೆಂಬುದನ್ನರಿಯದೆ-ಅಕರುಣಾಮೂರ್ತಿ ಯಮ ಥಟ್ಟನೆ ಅಡ್ಡಬಂದು – ಈ ಮಹಿಮಾನ್ವಿತರ ಸರ್ವಾಂಗಗಳಿಂದ ಅಗೋಚರವಾಗಿ ಹೊರಸೂಸುತ್ತಿರುವ ಪಂಚಾಕ್ಷರೀ ಮಂತ್ರಮಹಿಮೆಗೆ– ಹೆದರಿ ಹಾರಿಹೋದ ಯಮನನ್ನು ಸೋಲಿಸಿದ ಕಲಿಯುಗದ ಮಾರ್ಕಂಡೇಯ, ಮೃತ್ಯುಂಜಯನ ಅಪರಾವತಾರರಾದ ಶ್ರೀ ಶ್ರೀಗಳವರ ಕೃಪಾ ಛತ್ರದಲ್ಲಿರುವ ನಾವೆಲ್ಲರೂ ಓವ್ಹೋ ಏನೆಂಥ ಧನ್ಯರು!

ಅರುವತ್ತು

ಸ್ವಾಮೀಜಿಯವರಿಗೆ ಅರುವತ್ತು ತುಂಬಿ ಇದೀಗ ನಾಲ್ಕು ತುಂಬಿ ಐದಕ್ಕೆ ಬಿದ್ದಿದೆ. ಕಾಲಮಾನದಿಂದ ಅರುವತ್ತು ಎಂದರೆ ಅರು ಹತ್ತು ವರ್ಷಗಳಷ್ಟೆ. ಅಳವಾಗಿ

ಪರ್ಯಾಲೋಚಿಸಿ ನೋಡಿದರೆ ಅರುವತ್ತು ತುಂಬಿದವರಿಗೆ ಷಷ್ಟ್ಯಬ್ದಿ ಸಮಾರಂಭವನ್ನು ಆಚರಿಸುವುದರ ಉದ್ದಿಶ್ಯ ಅರಿವಾಗುತ್ತದೆ. ಅರುವತ್ತು ಪ್ರಾಯದ ತನಕ ಲೌಕಿಕದ ಈ ಬಾಧೆಗಳಲ್ಲಿ, ಕಷ್ಟಕೋಟಲೆಗಳಲ್ಲಿ, ವಿಧಿ-ವಿಧಾನಗಳಲ್ಲಿ, ಬಂಧನ ನಿರ್ಬಂಧನಗಳಲ್ಲಿ, ತೊಡಕು ಕೆಡುಕುಗಳಲ್ಲಿ ಸಿಲುಕಿ ನರಳಿದ ಜೀವಕ್ಕೆ ಇನ್ನೀಕ್ಷಣದಿಂದ – ಈ ಎಲ್ಲವುಗಳಿಂದ ನಿವೃತ್ತಿ ಹೊಂದಿ-ಪಾರಲೌಕಿಕದ ಕಡೆಗೆ, ಪಾರಮಾರ್ಥಿಕದ ಕಡೆಗೆ-ಪರಲೋಕದ ಕಡೆಗೆ, ಪರಮಾತ್ಮನ ಕಡೆಗೆ 'ಅರುವು' 'ಹತ್ತು'ತ್ತದೆ. ಅರುವು ಎಂದರೆ ಅರಿವು. ಎಂದರೆ ತಿಳಿವಳಿಕೆ ಹತ್ತುತ್ತದೆ– ಎಂಬುದರ ಸಂಕೇತವಾಗಿ ಈ ಷಷ್ಟ್ಯಬ್ದಿ ಸಮಾರಂಭವಷ್ಟೆ. ನಾವು ಲೌಕಿಕರು. ನಾವು ನಮ್ಮ ಲೌಕಿಕ ದೃಷ್ಟಿಗನುಗುಣವಾಗಿ ಈ ಸಮಾರಂಭವನ್ನು ಏರ್ಪಡಿಸಿದ್ದೇವೆ. ನಮ್ಮೆಲ್ಲರ ಮನಸ್ಸನ್ನು ನೋಯಿಸಲು ಇಚ್ಛಿಸದ ಪರಮ ಕರುಣಾಮೂರ್ತಿ ಸ್ವಾಮೀಜಿಯವರು ಈ ಸಮಾರಂಭಕ್ಕೆ ಒಪ್ಪಿರುವುದು ನಮ್ಮ ಸುಕೃತವೇ ಸರಿ. ಶ್ರೀ ಶ್ರೀಗಳವರಿಗೆ 'ಅರುವು+ಹತ್ತು'ವ ಕಾಲ ಅರುವತ್ತು - ಎಂಬುದು ನಮ್ಮ ಭ್ರಮೆ. ಯಾವ ಸುಮುಹೂರ್ತದಂದು ಇವರ ಭವ್ಯಕಾಯದ ಮೇಲೆ ದಿವ್ಯ ಕಾವಿ ಆವರಿಸಿತೋ ಅಂದೇ, ಆ ಕ್ಷಣದಿಂದೇ ಇವರಿಗೆ ಪಾರಮಾರ್ಥಿಕ ಅರುವು+ಹತ್ತಿದೆ. ಶ್ರೀಗಳವರು ಲೌಕಿಕ ಜಲಸಂಗದಲ್ಲಿರುವ ಅಲೌಕಿಕ ಕಮಲಸದೃಶರು.

ಅನುಕ್ಷಣ ಧ್ಯಾನಿ

ಶ್ರೀ ಸ್ವಾಮೀಜಿಯವರು ರಾಜಕಾರಣಿಗಳೊಡನೆ ಸಂಭಾಷಿಸುತ್ತಿರಲಿ, ಅಧಿಕಾರಿಗಳೊಡನೆ ಸಮಾಲೋಚಿಸುತ್ತಿರಲಿ, ವಿದ್ಯಾರ್ಥಿಗಳೊಡನೆ ಭಾಷಿಸುತ್ತಿರಲಿ – ಸಂಪೂರ್ಣ ಮನಕೊಟ್ಟು ಮಗ್ನರಾಗಿರುತ್ತಾರೆ. ಆದರೂ ಇವರ ಸಂಪೂರ್ಣ ಮನಸ್ಸು ಏಕಾಗ್ರತೆಯಿಂದ ಪಂಚಾಕ್ಷರೀ ಮಂತ್ರ ಜಪಿಸುತ್ತಲೇ ಇರುತ್ತದೆ. ಸಂಭಾಷಿಸುವಾಗ ಹೀಗಾದರೆ, ಇನ್ನು ಮೌನಿಯಾಗಿದ್ದಾಗ ಲಂತೂ ಸಾಕ್ಷಾತ್ ಪರಶಿವನ ಸಾಕ್ಷಾತ್ಕಾರಗೊಳಿಸಿ ಕೊಂಡ ಮಹಾಮುನಿಯೇ ಸರಿ. ನಡೆಯಲಿ, ನೋಡಲಿ, ನುಡಿಯಲಿ–ಏನೇ ಮಾಡುತ್ತಿರಲಿ–ಪರಮಾತ್ಮನಲ್ಲಿ ಧ್ಯಾನಮಗ್ನವಾಗಿರುತ್ತದೆ ಇವರ ಚಿತ್ತ. ಇಂಥ ಮಹಾನುಭಾವರು, ಮಹಾನುಭಾವಿಗಳು ಚಿರಕಾಲವಿರಲಿ, ಚಿರಾಯುವಾಗಲಿ ಎಂದು ಆ ಪರಮಾತ್ಮನಲ್ಲಿ ವಿನಮ್ರನಾಗಿ ಪ್ರಾರ್ಥಿಸುತ್ತ, ಈ ಚಿನ್ಮಯ ಮೂರ್ತಿಯ ತಾರಕಮಂತ್ರವನ್ನು ನಾನು ನುಡಿದು ಈ ನುಡಿ ಕಾಣಿಕೆಯನ್ನು ಸಲ್ಲಿಸುತ್ತೇನೆ.

ಯತ್ರೈವ ಯತ್ರೈವ ಮನೋಮದೀಯಮ್ |
ತತ್ರೈವ ತತ್ರೈವ ತವ ಸ್ವರೂಪಮ್ ||
ಯತ್ರೈವ ಯತ್ರೈವ ಶಿರೋಮದೀಯಮ್ |
ತತ್ರೈವ ತತ್ರೈವ ಪದದ್ವಯಂ ತೇ ||

ಕೃಪೆ : 'ಘನ–ಮನ' (ಜೆಎಸ್ಎಸ್ ಗ್ರಂಥಮಾಲೆ ಪ್ರಕಟಣೆ)

ಶಬರಶಂಕರ ವಿಲಾಸ ಟೀಕು : ತೃತೀಯಾಶ್ವಾಸ

ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು

(ಮುಂದುವರಿದಿದೆ)

ಮ॥ಸ್ರ॥ ಶುಕ ಭಾರದ್ವಾಜ ಶಾಂಡಿಲ್ಯ ರುರು ಕಪಿಲಸತ್ಕೌಶಿಕಾಗಸ್ತ್ಯ ಯುಕ್ತಂ
ಪ್ರಕಟೋದ್ಯತ್ತಾಪಸಾವಾಸಮಮೆನೆ ನಭಮಂ ಋಕ್ಷರಾಜಾನ್ವಿತಂನಾ ॥
ಗಕದಂಬಾನಂತವಿಭ್ರಾಜಿತ ಮಹಿಪುರಮಂ ಕರ್ಣಭೀಷ್ಮಾದ್ಭುತ ಧ್ಯಾ ।
ನಕಠೋರ ಪಿಂಗಚಕ್ಷುರ್ಬಲಮನಮಮ ಪೋಲ್ತೊಪ್ಪುತಿರ್ದತ್ತರಣ್ಯಂ ॥ ೨೯ ॥

ಟೀಕೆ ॥ ಶುಕ ಯುಕ್ತಂ, ಶುಕ – ಗಿಳಿ, ಭರದ್ವಾಜ – ಹುಲಿಯ ಕಣ್ಣು ಚುಚ್ಚುವ ಕರಿಯ ಕಬ್ಬುಲ – ಹಕ್ಕಿ, ಶಾಂಡಿಲ್ಯ – ಬೆಲವತ್ತದ ಮರ ಅಥವಾ ಸುಂಡಿಲ ಹಕ್ಕಿ, (ಹಾರುವ ಹಕ್ಕಿಯೆಂಬರ್), ರುರು – ಜಿಂಕೆ, ಕಪಿ – ಕೋತಿ, ಲಸತ್ – ರಾತ್ರಿಯಲ್ಲಿ ವಿಜೃಂಭಿಸುವ, ಕೌಶಿಕ – ಗೂಗೆ, ಅಗಸ್ತ್ಯ – ಅಗಸೆ ಮರಗಳಿಂದ, ಯುಕ್ತಂ –ಕೂಡಿದ, ಅರಣ್ಯಂ – ಕಾಡು, ಶುಕ – ವ್ಯಾಸಪುತ್ರನಾದ ಶುಕಮುನಿ, ಭಾರದ್ವಾಜ – ಭಾರದ್ವಾಜ ಮುನಿಯ ಪುತ್ರನು, ಶಾಂಡಿಲ್ಯ – ಶಾಂಡಿಲ್ಯ ಮುನಿಯ ಪುತ್ರನು, ರುರು – ಕೃಷ್ಣಮೃಗ, ಕಪಿಲ – ಸಾಂಖ್ಯಮುನಿ, ಸತ್ಕೌಶಿಕ – ಸತ್ಪುರುಷನಾದ ವಿಶ್ವಾಮಿತ್ರ, ಅಗಸ್ತ್ಯ – ಕುಂಭಸಂಭವ ಮುನಿಗಳಿಂದ, ಯುಕ್ತಂ – ಕೂಡಿದ್ದೆನಿಸಿ, ಪ್ರಕಟೋದ್ಯತ್ತಾ – ಪ್ರಸಿದ್ಧವಾಗಿ ಕಾಣಿಸುವ, ತಾಪಸಾವಾಸಮಂ – ಋಷ್ಯಾಶ್ರಮವೋಲ್ತು, ಹೋಲಿ – ಒಪ್ಪುತಿರ್ದತ್ತು, ಪ್ರಕಾಶಿಸುತಲಿತ್ತು – ಋಕ್ಷರಾಜಾನ್ವಿತ, ಋಕ್ಷರಾಜ – ಹೆಗ್ಗರಡಿಗಳಿಂದ ಕೂಡಿದ ಅರಣ್ಯ, ಋಕ್ಷ – ನಕ್ಷತ್ರಗಳಿಂದಲೂ, ರಾಜ – ಚಂದ್ರನಿಂದಲೂ, ಅನ್ವಿತಂ – ಕೂಡಿದ್ದೆನಿಸಿ, ನಭವಂ – ಆಕಾಶವನ್ನು, ಪೋಲ್ತು – ಒಪ್ಪುತಿರ್ದುದು, ನಾಗಕದಂಬಾನಂತ ವಿಭ್ರಾಜಿತಂನಾಗ – ಆನೆಗಳಿಂದಲೂ –ಕದಂಬ – ಕಡಹದ ಮರಗಳಿಂದಲೂ, ಅನಂತ – ಅನೇಕಗಳಾದ, ಹಕ್ಕಿಗಳಿಂದಲೂ, ಭ್ರಾಜಿತಂ – ಬೆಳಗುತಲಿರುವ ಅರಣ್ಯಂ, ನಾಗ – ಸರ್ಪಗಳ, ಕದಂಬ – ಗುಂಪಿನಿಂದಲೂ, ಅನಂತ – ಆದಿಶೇಷನಿಂದಲೂ, ವಿಭ್ರಾಜಿತಂ – ಬೆಳಗುತಲಿರುವುದೆನಿಸಿ ಅಹಿಪುರಮಂ – ಭೋಗವತಿ, ನಗರವತಿ – ನಗರವನ್ನು, ಪೋಲ್ತೊಪ್ಪುತಿರ್ದುದು. ಕರ್ಣಭೀಷ್ಮಾದ್ಭುತಧ್ವಾನ ಕಠೋರಂ, ಕರ್ಣ – ಕಿವಿಗಳಿಗೆ, ಭೀಷ್ಮ – ಭಯಂಕರವಾದ ಅದ್ಭುತ ಆಶ್ಚರ್ಯಕರವಾದ, ಧ್ವಾನ – ಶಬ್ದದಿಂದ, ಕಠೋರಂ – ಕಠಿನವಾದ, ಅರಣ್ಯಂ ಕರ್ಣ – ರಾಧಾಪುತ್ರನ, ಭೀಷ್ಮ – ಗಂಗಾಪುತ್ರನ, ಅದ್ಭುತ –

ವಿಸ್ಮಯಕರವಾದ, ಧ್ಯಾನ – ಸಿಂಹನಾದದಿಂದ, ಕಠೋರಂ – ಕಠಿನವಾದುದೆನಿಸಿ, ಪಿಂಗಚಕ್ಷುರ್ಬಲವಂ – ಪಿಂಗಚಕ್ಷುಃ, ಪಿಂಗನೇತ್ರನ – ದುರ್ಯೋಧನನ, ಬಲಮಂ – ಸೈನ್ಯವನ್ನು, ಪೋಲ್ತೊಪ್ಪುತಿರ್ದುದು ಅಮಮ – ಆಶ್ಚರ್ಯವು.

ತಾ ॥ ಅರಣ್ಯವು ಋಷ್ಯಾಶ್ರಮದಂತೆಯೂ, ಆಕಾಶದಂತೆಯೂ, ಭೋಗವತಿಯಂತೆಯೂ, ದುರ್ಯೋಧನನ ಸೈನ್ಯದಂತೆಯೂ ಒಪ್ಪಿಗೆಯಾಗಿತ್ತೆಂದು ಅರ್ಥಶ್ಲೇಷ ಮೂಲಕ ಪೂರ್ಣೋಪಮಾಲಂಕಾರವು ॥ ೨೯ ॥

ಕಂ॥ ಮರುಜನಿಮಾಣಿಕದ ಬಾ ।
ಸರೆಪರಿಸದ ಮೊರಡಿ ಪರಿವ ಸಿದ್ಧರಸದ ಬ ।
ಲ್ದೊರೆ ಬಜ್ರಗವಿಪಸಿರ್ಗ ।
ಲ್ಲರೆ ಸಸಿಗಲ್ಗೋಡು ಮೆರಗು ಮಾಗಿರಿ ತಟದೋಳ್ ॥ ೩೦ ॥

ಟೀಕೆ ॥ ಆ ಗಿರಿತಟ ಪರಿಸರದೋಳ್ – ಆ ಬೆಟ್ಟದ ತಡಿಯ ಬಳಿಯಲ್ಲಿ, ಮರುಜವನೆ – ಮರಜ, ನೀರಿಲ್ಲದ ಜೌಳು ನೆಲಗಳಲ್ಲಿ ಹುಟ್ಟಿದ, ವೈಡೂರ್ಯ – ಮಣಿಗಳ, ವನೆ – ಮನೆ(ಕಣಿ)ಯೂ, ಮಾಣಿಕದ – ಪದ್ಮರಾಗ ಮಣಿಯ (ಕೆಂಪಿನ), ಬಾಸರೆ – ಹಾಸು ಅರೆಯ (ಹಾಸುಗಲ್ಲು), ಪರಿಸದ – ಸ್ಪರ್ಶವೇದಿ ಶಿಲೆಯ (ಸೋಂಕಿದರೆ ಕಬ್ಬುನವಂ ಬಂಗಾರವಂ ಗೈಯ್ವ ಕಲ್ಲು), ಮೊರಡಿ – ಗುಡ್ಡವೂ, ಪರಿವ – ಹರಿಯುತಲಿರುವ, ಸಿದ್ಧರಸದ – ಶುದ್ಧವಾಗಿ ಸಿದ್ಧಕರವಾದ (ಸೋಂಕಿದರೆ ತಾಮ್ರವಂ ಬಂಗಾರವಂ ಮಾಳ್ಪ ಪಾದರಸದ), ಬಲ್ದೊರೆ – ಬಲವಾದ ತೊರೆಯೂ, ಬಜ್ರಗವಿ – ವಜ್ರಗಳ ಗುಹೆಯೂ, ಪಸಿರ್ಗಲ್ಲರೆ – ಪಚ್ಚೆಗಳ ಬಂಡೆಯೂ, ಸಸಿಗಲ್ಗೋಡು, ಸಸಿಗಲ್ – ಚಂದ್ರಕಾಂತ ಶಿಲೆಯ, ಕೋಡು – ಶಿಖರವೂ, ಮೆರಗುಂ – ಹೊಳೆಯುತ್ತಿರುವವುದು ॥ ಅತಿಶಯೋಕ್ತ್ಯಲಂಕಾರಂ – ಉದಾತ್ತಾಲಂಕಾರಮುಂ ॥

ಕಂ॥ ಇದು ದವಶಿಖಿಯಿದು ಕಿಂಶುಕ ।
ಮಿದು ಕಾರ್ಮುಗಿಲಿದು ತಮಾಲಮಿದು ಮದಗಜಮಿಂ ।
ತಿದು ಗಂಡಶೈಲಮೆಂದಂ ।
ಬುದ ತಿಳಿವಡಶಕ್ಯಮೆನಿಪುದಾ ಪೆರ್ಗಾಡೋಳ್ ॥ ೩೧ ॥

ಟೀಕೆ ॥ ಇದು ದವಶಿಖಿ – ಕಾಡುಕಿಚ್ಚು ಇದು, ಕಿಂಶುಕಂ – ಪೂತ ಮುತ್ತುಗದ ಮರ ಇದು, ಕಾರ್ಮುಗಿಲು – ನೀಲಮೇಘವು ಇದು, ತಮಾಲಂ – ಹೊಂಗೆಯ ಮರವು ಇದು, ಮದಗಜಂ – ಮದಿಸಿದ ಆನೆ ಇದು, ಗಂಡಶೈಲಂ – ಬೆಟ್ಟದಿಂ ದುರುಳಿದ ದೊಡ್ಡ ಗುಂಡು ಎಂದೆಂಬುದ, ಎಂಬ ಭೇದವನ್ನು ಹೀಗೆ ಸಾದೃಶ್ಯದಿಂದ ಕೊಂಡು, ತಿಳಿವಡೆ – ವಿವೇಕಿಸುವದಕ್ಕೆ, ಆ ಪೆರ್ಗಾಡೋಳ್ – ಆ ದೊಡ್ಡ ಕಾಡಿನಲ್ಲಿ, ಅಶಕ್ಯಂ – ಅಸಾಧ್ಯಂ ಎನಿಪುದು.

ತಾ ॥ ಇಲ್ಲಿವೇರ್ ಎಂಬ ಪದ ಸಾರಸ್ಯದಿಂದ ಮಹಾರಣ್ಯದಲ್ಲಿ ಮರಗಳ ಸಾಂದ್ರತೆಯಿಂದ ವಿಶೇಷ ಬೆಳಕಿಲ್ಲದಿರುವಿಕೆಯು, ದವಾಗ್ನಿ ಕಿಂಶುಕಗಳಿಗೂ, ನೀಲಮೇಘ ತಮಾಲಗಳಿಗೂ, ಗಜಗಂಡ ಶೈಲಗಳಿಗೂ, ರೂಪಸಾದೃಶ್ಯದಿಂದ ಭೇದ ತಿಳಿಯದೆ ಇರುವಷ್ಟು ಸಂದೇಹಕ್ಕೆ ಕಾರಣವಾಗಿರ್ಪುದು ॥ ಸಂದೇಹಾಲಂಕಾರಂ ॥

ಮ॥ ಸ್ರ॥ ಬೆಳವಾಲಂ ಮತ್ತಿಬೇಲಂ ಪುಣೀಸಿಯಣಿಲೆದಿಂಡಾಲಮಂಕೋಲೆಬೇವಿಂ ॥
ಗಳಮೆಕ್ಕಂ ಕಕ್ಕೆ ಮಾವಂಬಟಿ ಬಿದಿರರುಟಾಳಂಬಕಂ ಚಂದನಂ ಗು ।
ರ್ಗುಳ ಮೀಚಲ್‌ಬನ್ನಿಗೇರ್ಮುತ್ತುಗ ಮರುಳಿಪತಂಗಂ ಪುಲೀಗಿಲ್ತಮಾಲಂ ।
ಮೊಳಗಾಚನ್ನೆಲ್ಲಿನೇರಿಲ್ತದುಕುಪನೆಗಳೊಪ್ಪಿರ್ಕು ಮಾಕಾಡೊಳೆತ್ತಂ ॥ ೩೨ ॥

ಟೀಕೆ ॥ ಬೆಳವಾಲಂ – ಬೆಳೆಯುವ ಆಲದಮರ, ಮತ್ತಿ – ಅರ್ಜುನ ವೃಕ್ಷ, ಬೇಲಂ – ಕಪಿತ್ಥವೃಕ್ಷ, ಪುಣೀಸಿ – ಹುಣಿಸೇಮರ, ಅಣಿಲೆ – ಚಳ್ಳೆಯ ಮರ, ದಿಂಡಾಲಂ – ದಿಂಡುಗದ ಮರ, ಅಂಕೋಲೆ – ಊಡುಗದ ಮರ, ಬೇವು – ಪಿಚುಮಂದ ವೃಕ್ಷ, ಇಂಗಳು – ಕಾರೆಗಿಡ, ಎಕ್ಕಂ – ಅರ್ಕವೃಕ್ಷ, ಕಕ್ಕೆ – ರಾಜವೃಕ್ಷ, ಮಾವು – ಆಮ್ರವೃಕ್ಷ, ಅಂಬಟಿ – ಅಮಟಿಯ ಗಿಡ, ಬಿದುರು – ಮೇಣು, ಅರುಟಾಳಂ – ಆರೆಗಿಡ, ಬಂಕಂ – ವಕುಳವೃಕ್ಷ, ಚಂದನಂ – ಗಂಧದಮರ, ಗರ್ಗುಳಂ – ಧೂಪದ ಮರ, ಈಚಲ್ – ಹೆಂಡದ ಮರ, ಬನ್ನಿ – ಶಮೀವೃಕ್ಷ,ಗೇರ್ – ಭಲ್ಲಾತಕ ವೃಕ್ಷ, ಮುತ್ತುಗಂ – ಪಲಾಶವೃಕ್ಷ, ಅರುಳಿ – ಬೂರುಗದ ಮರ, ಪತಂಗಂ – ಬಣ್ಣದ ಮರ, ಪುಲೀಗಿಲ್ – ಮದ್ದಿನ ಮರ, ತಮಾಲಂ – ಹೊಂಗೆಯ ಮರ, ಮೊಳಗು – ಕಾಡುಮೆಣಸಿನ ಗಿಡ, ಆಚನ್ನೆಲ್ಲಿ – ಧಾತ್ರೀವೃಕ್ಷ, ನೇರಿಲ್ – ಜಂಬೂವೃಕ್ಷ, ತದುಕು – ಭಾರಂಗಿ ಮರ, ವನೆ – ಬಸುರಿ ಮರಗಳು, ಆ ಕಾಡೊಳು, ಎತ್ತಂ – ಎಲ್ಲಿಯೂ, ಒಪ್ಪಿ, ಇರ್ಕುಂ – ಇರುವುದು ॥ ೩೨ ॥

ಮ॥ ಸ್ರ॥ ಗರುಡಂ ಕಬ್ಬಕ್ಕಿ ಕಂಕಂ ಗೊರವ ಮೊರಲೆ ಪೇರ್ಬಕ್ಕಿ ಪಾರಾವತಂ ಹೆಂ ।
ಗುರುಟಿವಂ ಟಿಟ್ಟಿಭಂ ತೊಂಡಿಗನುರುಳಿಗನಿರ್ಬಾವನಂ ಚಾತಕಂ ತಿ ॥
ತ್ತಿರಿ ಚೆಂಬೋತಂ ಪಿಕಂ ಮೀಂಗುಲಿ ಮರಕುಟಿಗಂ ಗಿಜಗಂ ಗುಬ್ಬಿ ಘೂಕಂ ।
ಸರಟುಸಾಳ್ವಂ ಪಸುಬಂ ಪರಡಿಶಿಖಿಶುಕಂ ತದ್ವನಾಂತಸ್ಥಮಿರ್ಕುಂ ॥ ೩೩ ॥

ಟೀಕೆ ॥ ಗರುಡು – ಕ್ಷೇಮಕಾರಿ ಹಕ್ಕಿ, ಕಬ್ಬಕ್ಕಿ – ಕೊಕ್ಕರೆ, ಕಂಕಂ – ಹದ್ದು, ಗೊರವ – ಭೈರವನ ಹಕ್ಕಿ, ಮೊರಲೆ – ಕೂಗುವಕ್ಕಿ, ಪೇರ್ಬಕ್ಕಿ – ದೊಡ್ಡಕ್ಕಿ, ಪಾರಾವತಂ – ಪಾರಿವಾಳ, ಹೆಂಗುರು – ಪಕ್ಷಿವಿಶೇಷ, ಟೀವಂ – ಪಕ್ಷಿವಿಶೇಷ, ಟಿಟ್ಟಿಭಂ – ಲಕುಮುಕಿಯ ಹಕ್ಕಿ, ತೊಂಡಿಗಂ – ಗಿಳಿ ಅಥವಾ ಗಿಡುಗ, ಉರುಳಿ – ಪರಟಿ ಹಕ್ಕಿ, ಇರ್ಬಾಯನಂ – ಸಾಳುವದ ಹಕ್ಕಿ, ಚಾತಕಂ – ತಿಂಗಳ ಹಕ್ಕಿ, ತಿತ್ತಿರಿ – ಕಪಿಂಜಲ ಪಕ್ಷಿ, ಚೆಂಬೋತಂ – ಚೆಂಬರವಾಯಸ, ಪಿಕಂ – ಕೋಗಿಲೆ, ಮೀಗುಲಿ – ಚುಕ್ಕೆಹಕ್ಕಿ, ಮರುಕುಟಿಗಂ – ಮರಕುಟಿಗನ ಹಕ್ಕಿ, ಗೀಜಗಂ – ಸಿಂಗರದ ಹಕ್ಕಿ, ಗುಬ್ಬಿ – ಗುಬ್ಬಚ್ಚಿ, ಘೂಕಂ – ಗೂಗೆ, ಸುರಟಂ – ಸಪ್ಪಳ ಹಕ್ಕಿ, ಶ್ವಾಳಂ – ಶಬರನ ಹಕ್ಕಿ, ಪಸುಬಂ – ಬಣಜಿಗ ಹಕ್ಕಿ, ಪರಡಿ

– ಚಾಚುಲು ಹಕ್ಕಿ, ಶಿಖಿ – ನವಿಲು, ಶುಕಂ – ಅರಗಿಳಿ, ಇವು ತದ್ವನಾಂತಸ್ಥಂ – ಆ ಕಾಡಿನೊಳಗೆ, ಇರ್ಕುಂ – ಇರುವುದು ॥ ೩೩ ॥

ಮ॥ ಶರಭನಿಭಾರಿಸೈರಿಭಮಿಭಂ ಬನಪಂದಿ ತರಕ್ಷು ಖಡ್ಗಿ ಶಂ।
ಬರಮೃಗ ಮೇಷಮೇಣಮಜಭೇದನಮೃಕ್ಷಮಗೌಕಸಂ ಮೊಲಂ ॥
ಮರನರಿ ಪೂವೆತ್ತಿನಕುಲಂ ಮರವಾವುಗಳೆಂ ಬಿವಾಗಳುಂ।
ಕರಮೆನೆತೆರ್ಪೆನಂ ಮೆರೆದುದಾ ವಿಪಿನಂ ವಿಪನದ್ಧಕಂದರಂ ॥ ೩೪ ॥

ಟೀಕೆ ॥ ಶರಭಂ – ಶರಭ ಮೃಗ, ಇಭಾರಿ – ಸಿಂಗ, ಸೈರಿಭಂ – ಕಾಡುಕೋಣ – ಇಭಂ – ಕಾಡಾನೆ, ಬನಪಂದಿ – ಕಾಡುಹಂದಿ, ತರಕ್ಷು – ಹುಲಿ, ಖಡ್ಗಿ – ಗಂಡಕಮೃಗ, ಶಬರ – ದುಪ್ಪಿ, ಮೃಗ – ಹುಲ್ಲೆ, ಮೇಷಂ – ಮೇಕೆ, ಏಣಂ – ಚುಕ್ಕೆ ಇಲ್ಲದ ಜಿಂಕೆ, ಅಜಭೇದನಂ – ತೋಳ, ಯಕ್ಷಂ – ಕರಡಿ, ಅಗೌಕಸಂ – ಮಂಗ, ಮೊಲಂ – ಶಶ, ಮರನರಿ – ಕಳ್ಳನರಿ, ಪೂವೆತ್ತಿ – ಪುನುಗಿನ ಬೆಕ್ಕು, ನಕುಲಂ – ಮುಂಗಿಲಿ, ಮರವಾವು – ಮರದ ಹಾವುಗಳು ಎಂಬ ಇವು ಆಗಳುಂ – ಯಾವಾಗಲೂ, ಕರಂ – ಅತಿಶಯವಾಗಿ, ಎಸೆದು, ಇರ್ಪಿನಂ – ಇರುವಂತೆ, ವಿಪಿನದ್ಧಕಂದರಂ – ತೆರೆಯಲ್ಪಟ್ಟ ಗವಿಗಳುಳ್ಳ ಅಥವಾ ಮುಚ್ಚಲ್ಪಟ್ಟ ಗವಿಗಳುಳ್ಳ, ಆವಿಪಿನಂ – ಆ ಕಾಡು ಮೆರೆದುದು ॥ ೩೪ ॥

ಕಂ॥ ಜ್ಯೋತಿರ್ಲತೆಗಳ ರುಚಿ ಸಂ।
ಜಾತಂ ಫಣಿಗಣಫಣಾಮಣಿಪ್ರಭೆ ಬಿಡದು ॥
ದ್ಯೋತಿಪುದದಲ್ಲದಾಖ।
ದ್ಯೋತಶಶಾಂಕಾಂಶುಪುಗದು ತತ್ಕಾನನದೋಳ್ ॥ ೩೫ ॥

ಟೀಕೆ ॥ ಜ್ಯೋತಿರ್ಲತೆಗಳ – ಬೆಳಗುತ್ತಿರುವ ಬಳ್ಳಿಗಳ, ರುಚಿ – ಕಾಂತಿಯ, ಸಜಾತಂ – ಗುಂಪೂ, ಫಣಿಗಣಫಣಾಮಣಿಪ್ರಭ – ಫಣಿಗಣ ಸರ್ವಸಮೂಹದ, ಫಣ – ಹೆಡೆಗಳಲ್ಲಿರುವ, ಮಣಿ – ರತ್ನಗಳ, ಪ್ರಭೆ – ಕಾಂತಿಯು, ಬಿಡದೆ – ಯಾವಾಗಲೂ, ಉದ್ಯೋತಿಪುದು – ಪ್ರಕಾಶಗೊಳಿಸುತ್ತಿರುವವು. ಅದಲ್ಲದೆ – ಅದೇ ಹೊರತು, ತತ್ಕಾನನದೋಳ್ – ಆ ಕಾಡಿನಲ್ಲಿ , ಖದ್ಯೋತಶಶಾಂಕಾಂಶು, ಖದ್ಯೋತ – ಸೂರ್ಯನ, ಶಶಾಂಕ – ಚಂದ್ರನ, ಅಂಶು – ಕಿರಣವೆ, ಪುಗದು – ಪ್ರವೇಶಿಸುದು.

ತಾ ॥ ತೇಜೋಲತೆಗಳ ಬೆಳಕೂ ನಾಗರತ್ನ ಪ್ರಭೆಯೂ ಬೆಳಗುತ್ತಿವೆ, ಚಂದ್ರಸೂರ್ಯಕಾಂತಿಗಳಿಲ್ಲ ಎಂಬುದರಿಂದ ಗಿಡಗಳ ನೆಳಲು ಘನವಾಗಿ ಮುಚ್ಚಿಕೊಂಡಿತ್ತೆಂಬ ಅರ್ಥವು ಗಮ್ಯವಾಗುವುದು.

ವ ॥ ಮತ್ತಮಲ್ಲಿ ಬಿತ್ತರಮಾದ ಸಿಂಗರಂ ಚಿತ್ರತುಬಿನದದಿಂ ಮನದನ್ನನಂ ಸಂದು ಮಿಗೆ ನೆರ್ಮಿ ಕುಳ್ಳಿರ್ದ ಶಶಿಕಾಂತದೊಡ್ಡುಂಗಲ್ಲೋಳ್ತನ್ನ ಪಡಿನೆಳಲಂ ಕಂಡು ಕೈಸಾರ್ದುನಿಂದ ಸಪತ್ನಿ ಎಂದು ಬಗೆದು ಮುಳಿದು ಮುಗಿಲ್ವಟ್ಟಿಗೆ ಮೀರಿ ಪಾರುವ ಬಿಜ್ಜೋದರಿ ಬಿಗಿದುಟ್ಟ ಸುವರ್ಣಾಂಬರದ ಸೆರಂಗುನಿಶಿತಮೆನೆ ಕೊಂಕಿದ ನಿಜಕಂಟಕ ದೋಳ್ತೊಡರ್ದು

ಸರ್ರನೆ ಪರಿದು ಸಿಲ್ಕಿ ಪಸರಿಸೆ ಪವನನ ಲೇಪವಿನೊಲೆದು ಗಿರಿ ವರನೆಗಳ್ತಿಗೆ ನೇಮಿಸಿದ ಕೇತುಪಟದಂತೆಸೆಯೆ, ತದ್ವಿಜವೀರ್ಪ ದಂಡಾಕಾರಮಂ ತಾಳ್ದು ಬಾಂದಳಮಂ ಮುಟ್ಟಿ ನಿಮಿರ್ದುನಿಂದ ವೇಣುಕಾಡದಿಂ – ಕರಿಮುರಿದ ಪೇರ್ಗೊಂಬಿ ಎರುಂಬಿ ನೊಳೆದೆತುಗುವಪಾಲ ಪಗಿನದೊಳ್ಮಿಗೆ ನೆಗೆವ ಗಗನಚರಿಯ ಸಿಡುಜಡೆತೊಡಂ ಕಿಡಿಗಿಲ್ದು ತೆಗೆಯಲ್ಬಾರವಿರೆ ಪಾರುಗೆಟ್ಟು ಬಿಡಿಸಲೊಡರ್ಮೊವ ತನ್ನಿತಂಬಿನಿಗೆ ಕುಳ್ಳಿರಲ್ಕೊಂಬನಿಂಬುಗೊಟ್ಟು ಸೆಳೆಮಿಂಚಂ ತಳೆದ ಕಾರ್ಮುಗಿಲ ಪಿರಿಯ ಸಿತಿಯನೊಳಕೊಂಡು ಕೆಲದೋಳ್ಕಂಗೊಳಿಪ ತರುಣತಮಾಲದಿಂ, ಪರಿಸರದೋಳ್ಪಂಚು ವೆತ್ತಿಂಚರದಿಂ ತನ್ನ ಚೆನ್ನ ಕಿನ್ನರಿಯೋಳ್ಪುರಿಗೂಡಿ ಪಾಡುವ ಕಿನ್ನರಿಯ ಸರಸಸಂಗೀತಮಂ ಕೇಳ್ದು ಗಡಣಂಗೊಂಡು ಪಡೆಯೆತ್ತಿ ನಲಿವ ನಾಗಂಗಳಂ ಕೊನೆಕೊಂಬುಗಳೋಳ್ತಳೆದು ಮಿನುಗುವಡೆದ ಪೆಡೆವಣೀದುರುಗಲಿಂ ತಳ್ತು ಮಾಣಿಕ್ಯದ ಮರಂಗಳು ತಿರಂದಂಬೆತ್ತ ಚಂದನ ಧರಾರುಹಂಗಳಿಂ, ಶಶಿಶಿಲಾಸದನದೋವರಿಯ ಪೂವಾಸಿನೋಲ್ಪವಿ ಸುಸಿಲೆಸಗು ಖಚರದಂಪತಿಗಳ ರವದ ಕಳಕಳಮಂ ಕೇಳ್ದು ಘಳಿಲನೆ ತಲೆಯೆತ್ತಿ ನಲಿದುಲಿ ದಳವಿಗಳೀದೆಳಸುವ ಪರಿವಿಡಿಯ ಪಾರಿವಂಗಳಂ ತಳೆದು ಮದನಾಗಮದ ಮಂತಣ ಶಾಲೆಯಂತೆ ಮನೋಜ್ಞಮಾದ ಕುರವಕಾನೋಕಹದಿಂ ಮನಃಪ್ರಿಯನೊಡನೆ ಮನಬಂದ ಬಂಧದಿಂತನು ಕರಗಿತನಿಸುಸಿಲ ಸೊಗದ ಸೊಗಸನನುಭವಿಸಿ ಸಸಿಕರಂ ಸೋಂಕಿದ ಸಸಿಗಲ್ಲ ಪುತ್ತಳಿಯಂತೆ ಬೆಮರ್ತುಸುರಸುದತಿಯೊರೆವರಸಿದ ಬೆಮರ ಪರಿಮಳಂ ತಳೆದು ಪರಿಸರದ ಸುರಯಿಯಲರ್ಗಳನುಳಿದು ಪರಿಮರಿಗೊಂಡೆರಗಿದ ಪರಮೆವಧುಗಳಿಂಪಣ್ಣ ಜಂಬೂಕುಜದಂತೆ ಕಮನೀಯಮಾದ ಶೋಕದ್ರುಮದಿಂ, ರೆತಿಮದನರನೋಜೆಯಿಂ ಪೂಜಿಸಲ್ಕೆ ವೂದಿರಿಯಲೇರಿದೇರುಜವ್ವನದ ಸೊಂಪೆಸೆವ ಕಿಂಪುರುಷ ನಿತಂಬಿನಿಯ ಸದಿಲ್ಗೆಳಲ್ವ ಕಡುನಿಡಿವಾದ ಕೇಶಪಾಶದಿಂ ತೊಡರ್ದು ತಳಿರ್ತ ತಮಾಲತೆತಳ್ತಂತೆ ಪಂಪನಾಳ್ದಚಂಪಕ ಕುಜಂಗಳಿಂ, ಕಾಲನ್ನ ನಗಲ್ದಗಲ್ಕೆಯುರಿಪಮಂ ಸೈರಿಸಲಾರದೆ ಹರಣಂಗಳೆಯಲುಜ್ಜಗಿಸಿ ತುರುಗಿತೀವಿದಕೆಂ ಬೊಗರನಾಳ್ದ ಪೂದೊಡಂಬೆಯ ಮೊಗ್ಗರಮಂ ಕಂಡು ದವಶಿಖಿಯ ಕೆಂಡದೊಟ್ಟೆಲ್ಗೆತ್ತು ಪೊಕ್ಕ ಸಿದ್ಧ ಸೀಮಂತಿನಿಯ ನೊಳಕೊಂಡು ಮದನ ಪ್ರತಾಪಲಕ್ಷ್ಮಿಯಂ ಪೊತ್ತಂತೆ ಚಿತ್ತಂಗೊಳ್ವ ಕಿಂಶುಕನಿಕುಂಜದಿಂ, ಕಣ್ಬೊಲಂದಪ್ಪ ಕಡೆ ಸರಿದು ತನ್ನನರಸಿತೊಳಲ್ವ ಕಾದಲನಂ ಕಾದಲೆಯಿಂ ಕಾಡಲೆಳಸಿ ಘಳೀಲನೆ ಬಿಳಲ್ವಿಡಿದರ್ದು, ನಿಡುಗೊಂಬಿ ನೆಲೆದುರುಗಳ ಪೊದರೆಪೊರಯೋಳ್ಪೈಗರೆದಿರ್ದ ಗಂಧರ್ವಸುಂದರಿ ನೆಲೆವಡಿ ದಕ್ಷಿಣ ರೂಪಯಕ್ಷಿಣಿಯಂತೆಸೆಯೆ ಮಿಸುಪ ವಟ ವಿಟಪಿಯಂ ಬಾಂಬಟ್ಟೆಯೋಲ್ಬಿರುವಿಸಿಲ್ಬೆನ್ನಂ ಸುಡೆ ಬಿಂಕಗುಂದಿ ಬಳಲ್ದು ಬರ್ಪ ಗರುಡ ದಂಪತಿಗೆ ತಂಪಂ ಪರಪಲೆಂದು ವಿಪಿನಲಕ್ಷ್ಮಿವಿಳಾಸದಿಂ ಬೀಸಲ್ನಿಡುದೋಳ್ಗಳಂ ನೆಗಪಿ ಪಿಡಿದ ವಿಜ್ಜನಮೆನಿಸಿ ರಂಜಿಪ ಪರ್ಣಪಾಳಿಯನೇಳ್ಗೆವೆತ್ತ ತಾಳಭೂರುಹದಿಂ ಪೆಂಪುವೆತ್ತ ಪರಿಮಿತ ಪರಿಪೂರ್ಣ ಪುಷ್ಪಗುಚ್ಛಂಗಳಿನತಿನಿಬಿಡತೆಯನಪ್ಪಗೆಯ್ದು

ರವಿಶಂಕರಂಗಳೆಡೆಯಾಟಕ್ಕೆ ತೆರಪುಗೊಡದೆ ತಮದ ತವರ್ಮನೆಯೆನಿಸಿ ವಿಚಿತ್ರತರ ಖಗಮೃಗಂಗಳ್ಗೆ ವಿಹರಣಸ್ಥಲಮಾಗಿ ಮಹಾಗಹನಮೊಪ್ಪಿರ್ದುದಲ್ಲಿ ॥

ಟೀಕೆ ॥ ಮತ್ತಂ – ಮತ್ತು, ಅಲ್ಲಿ, ಬಿತ್ತರಮಾದ – ವಿಸಾರವಾದ, ಸಿಂಗರು – ಶೃಂಗಾರವನ್ನು, ಪೆತ್ತು – ಪಡೆದು, ಬಿನದದಿಂ – ವಿನೋದದಿಂದ, ಮನದ ಅನ್ನನಂ – ಪ್ರಿಯನನ್ನು, ಸಂದು – ಸೇರಿ, ಮಿಗೆ – ಹೆಚ್ಚಾಗಿ, ನೆರ್ಮಿ ನೆಚ್ಚಿ , ಕುಳ್ಳಿರ್ದ – ಕುಳಿತಿರುವ, ಶಶಿಕಾಂತದ – ತಂಗಲ್ಲದ, ಒಡ್ಡಿಂ ಗಲ್ಲೋಳ್ – ನಿಲುವುಗಲ್ಲಿನಲ್ಲಿ ತನ್ನ ಪಡಿನೆಳಲೋಳ್ – ಪ್ರತಿಚ್ಛಾಯೆಯನ್ನು, ಕಂಡು – ನೋಡಿ, ಕೈಸಾರ್ದು – ಹತ್ತಿರ ಸೇರಿ, ನಿಂದ, ಸಪತ್ನಿ – ಸವತಿ ಎಂದು ಬಗೆದು, ಊಹಿಸಿ, ಮುಳಿದು – ಸಿಟ್ಟುಗೊಂಡು, ಮುಗಿಲ್ವಟ್ಟಿಗೆ – ಮೇಘದ ದಾರಿಗೆ, ಮೀರಿ – ಅತಿಕ್ರಮಿಸಿ, ಪಾರುವ – ಹಾರುವ, ಬಿಚ್ಚೋದರಿ – ವಿದ್ಯಾಧರಿ, ಬಿಗಿದು – ಬಿಗಿಯಾಗಿ, ಉಟ್ಟ – ಉಟ್ಟುಕೊಂಡಿರುವ, ಸುವರ್ಣಾಂಬರದ – ಚಿನ್ನದ ಸರಿಗೆ ಸೀರೆಯ, ಸೆರಂಗು – ಕೊನೆಯು, ನಿಶಿತಮೆನೆ – ಹರಿತವಾದ್ದೆಂಬಂತೆ, ಕೊಂಕಿದ – ಸೊಟ್ಟಗಿರುವ, ನಿಜಕಂಟಕದೋಳ್ – ತನ್ನ ಮುಳ್ಳಿನಲ್ಲಿ, ವೊಡರ್ದು – ಸಿಕ್ಕಿಕೊಂಡು, ಸರ್ರನೆ – ಶಬ್ದಿಸಿ, ಪರಿದು – ಹರಿದು, ಸಿಲ್ಕಿ – ಸಿಕ್ಕಿ, ಪರಿಹರಿಸಿ – ಪ್ರಸರಿಸಿ (ಹರಡಿಕೊಂಡು), ಪವನನ – ಗಾಳಿಯ, ಲೇಪದಿಂ – ಸೋಂಕಿನಿಂದ, ಒಲೆದು – ಕದಲಾಡಿ, ಗಿರಿವನ – ಇಂದ್ರಕೀಲದ, ನೆಗಳ್ತೆಗೆ – ಪ್ರಖ್ಯಾತಿಗಾಗಿ, ನೇಮಿಸಿದ – ಕಟ್ಟಳೆಗಾಗಿರಿಸಿದ, ಕೇತುಪಟದಂತೆ – ವಸ್ತ್ರದ ಹಾಗೆ, ಎಸೆಯೆ – ಶೋಭಿಸಲು, ತದ್ಧ್ವಜ – ಆ ಧ್ವಜದ, ದೀರ್ಘದಂಡ – ಉದ್ದವಾದ ಕೋಲಿನ, ಆಕಾರಮಂ – ರೂಪವನ್ನು ತಾಳ್ದು, ಬಾಂದಳಮಂ – ಆಕಾಶವನ್ನು ಮುಟ್ಟಿ, ನಿಮಿರ್ದು – ನೆಟ್ಟಗೆ ನಿಂದ, ವೇಣುಕಾಣದಿಂ – ಬಿದುರಿನ ಕೊಳಲಿನಿಂದಲು, ಕರಿ – ಆನೆ, ಮುರಿದ – ಪೆರ್ಗೊಂಬಿನ, ಇರುಂಬುನೊಳು – ಸಂದಿನಲ್ಲಿ, ಒರೆರತು – ಜನಿದು, ಉಗುವ – ಹೊರಡುವ, ಪಾಲ – ಪಾಲಿನ, ಪಗಿನದೋಳ್ – ಬಂಕೆಯಲ್ಲಿ, ಮಿಗೆ – ಅತಿಶಯವಾಗಿ, ನೆಗೆವ – ಹಾರುತ್ತಿರುವ, ಗಗನಚರಿಯ – ಖೇಚರಿಯ, ನಿಡುಜಡೆ – ನೀಳವಾದ ಜಡೆಯು, ತೊಡಂಕಿ – ಸಿಕ್ಕಿ, ಬಿಗಿಲ್ತು – ಬಿಗಿಯಾಗಿ, ತೆಗೆಯಲ್ ಬಾರದೆಯಿರ – ಪಾರು– ಹಾರುವಿಕೆ, ಕೆಟ್ಟು – ಬಿಡಿಸಲ್ – ಅವಂಬಿಸಿಕೊಳ್ಳುವದಕ್ಕೆ, ಒಡರ್ಚುವ – ಯತ್ನಂಗೈವ ತನ್ನಿತಂಬಿನಿಗೆ – ಆ ಹೆಣ್ಣಿಗೆ, ಕುಳ್ಳಿರ್, ಕೊಂಬಂ – ಶಾಖವನ್ನು, ಇಂಬು – ಹಿತವಾಗುವಂತೆ, ಕೊಟ್ಟು ಸೆಳೆಮಿಂಚಂ ತಳೆದ – ಕಾರ್ಮುಗಿಲ ಕಪ್ಪುಮೋಡದ, ಪಿರಿಯ – ದೊಡ್ಡದಾದ, ಸಿರಿಯಂ – ಕಾಂತಿಯನ್ನು, ಒಳಕೊಂಡು – ಪಡೆದು, ಕೆಲದೋಳ್ – ಪಕ್ಕದಲ್ಲಿ ಕಂಗೊಳಿಪ, ತರುಣ – ಎಳಸಾದ, ತಮಾಲದಿಂ – ಹೊಂಗೆಯ ಮರದಿಂದಲೂ – ಪರಿಸರದೋಳ್ – ಹತ್ತಿರದಲ್ಲಿ – ಸುಚುವೆತ್ತ – ಶ್ರಾವ್ಯತೆಯನ್ನು ಪಡೆದ, ಇಂಚರದಿಂ – ಮಧುರ ಧ್ವನಿಯಿಂದ, ತನ್ನ ಚನ್ನ – ಚನ್ನಾದ, ಕಿನ್ನರಿಯೋಳ್ – ಮಿಟ್ಟ ತಂಬೂರಿಯಲ್ಲಿ ಶ್ರುತಿಗೂಡಿ – ಸರ್ವಸಾಮರ್ಥ್ಯವೆತ್ತು, ಪಾಡುವ, ಕಿನ್ನರಿಯ – ಸರಸ ಸುಖದಿಂದ ಕೂಡಿದ, ಸಂಗೀತಮಂ – ಗಾನವನ್ನು, ಕೇಳ್ದು, ಗಣಂಗೊಂಡು

– ಗುಂಪು ಸೇರಿ, ಪಣಿ – ಹೆಡೆಯನ್ನು ಎತ್ತಿ, ನಲಿವ – ಸಂತೋಷಿಸುವ, ನಾಗಂಗಳೋಳ್ – ನಾಗಸರ್ಪಗಳನ್ನು, ಕೊನೆಯ – ಕೊಂಬುಗಳಲ್ಲಿ, ತಳೆದ ಮಿಸಪ್ರ – ಪ್ರಕಾಶವಂ ಪಡೆದ, ಪಣೀ – ಮಣಿಯ, ತುರುಗಲಿಂ – ಗುಂಪಿನಿಂದ, ತಳ್ತು – ವ್ಯಾಪ್ತಮಾಗಿ, ಮಾಣಿಕ್ಯದ – ಕೆಂಪಿನ, ಮರಂಗಳಂತೆ – ಇರೆ, ಅಂದಂಬೆತ್ತು – ಸೊಗಸನ್ನು ಪಡೆದ, ಚಂದನ – ಶ್ರೀಗಂಧದ, ಧರಾರುಹಂಗಳಿಂ – ಮರಗಳಿಂದಲೂ, ಶಶಿಶಿಲಾ – ಚಂದ್ರಕಾಂತಿ ಮಣಿಗಳ, ಸದನದ – ಮನೆಯ, ಓವರಿಯ – ಒಪ್ಪಾರದ, ಪೂವಾಸಿನೋಳ್ – ಹೂವಿನ ಹಾಸಿಗೆಯಲ್ಲಿ, ಸವಿ – ಸುಖವಾದ, ಸುಸಿಲ್ – ರತಿಯನ್ನು, ಎಸಗುವ – ಮಾಡುವ, ಖಚರ – ದೇವತೆಗಳ, ದಂಪತಿಗಳ – ಹೆಣ್ಣುಗಂಡಿರ, ಗಳರವದ – ಕಂಠಧ್ವನಿಯ, ಕಳಕಳಮಂ – ಕೋಲಾಹಲವನ್ನು ಕೇಳ್ದು, ಘಳಿಲನೆ – ಬೇಗನೆ, ತಲೆ – ತಲೆಯನ್ನು, ಎತ್ತಿ ನಲಿದು, ಉಳಿದು – ಶಬ್ದಿಸಿ, ಅಳವಿಗಳಿದು – ಆಪರಿಮಿತವಾಗಿ, ಎಳಸುವ – ಬಯಸುವ, ಪರಿವಿಡಿಯ – ಸಲುಗೊಂಡ, ಪಾರಿವಂಗಳಂ – ಕಪೋತಪಕ್ಷಿಗಳನ್ನು, ತಳದು, ಮದನಾಗಮದ – ಕಾಮಶಾಸ್ತ್ರದ, ಮಂತಣಶಾಲೆಯ – ಆಲೋಚನಾಗೃಹದಂತೆ, ಮನೋಜ್ಞಂ – ಮನೋಹರವಾದ, ಕುರವಕ – ಗೋರಂಟದ, ಅನೋಕಹದಿಂ – ಗಿಡದಿಂದಲು, ಮನ್ಮನಪ್ರಿಯರ – ಇಷ್ಟಪುರುಷನ ಒಡನೆ, ಮನಂಬಂದ – ಬೇಕಾದ, ಬಂಧದಿಂ – ಅನುಕೂಲಮುದ್ರೆಯಿಂದ, ತನು – ಮೈ ಕರಗಿ ಕೃಶವಾಗಿ, ತನಿ – ಪೂರ್ಣವಾದ ತನು, ಸುಸಿಲ – ರತಿಯ, ನೋಗದ – ಸುಖದ ಸೊಗಸಂ ಅನುಭವಿಸಿ, ಶಶಿಕರಂ – ಚಂದ್ರಕಿರಣವು ಸೋಂಕಿದ, ಸಸಿಗಲ – ತಂಗಲ್ಲಿನ ಪುತ್ತಳಿಯಂತೆ – ಗೊಂಬೆಯ ಹಾಗೆ, ಬೆಮರ್ತು – ಬೆವರಿ, ಸುರಸುದತಿ – ದೇವಸ್ತ್ರೀ, ಒರಸಿದ ತೊಡೆದ ಬೆಮರ ಸ್ವೇದೋದಕ, ಪರಿಮಳಂ – ಕಂಪನ್ನು ತಳೆದು ಪರಿಸರದ ಬಳಿಯಣ ಸುರಯಿಯ – ಸುರಗಿಮರದ, ಅಲರ್ಗಳಂ – ಪುಷ್ಪಗಳನ್ನು, ಉಳಿದು –ಬಿಟ್ಟು, ಪರಿಮರಿಗೊಂಡು – ಗುಂಪಾಗಿ, ಎರಗಿದ – ಬಂದುಬಿದ್ದ, ಪರಮೆ – ಭ್ರಮರದ, ವಧುಗಳಿಂ – ಹೆಂಗಳಿಂದ, ಪಣ್ಣ – ಫಲಿಸಿದ, ಜಂಬೂಕುಜದಂತೆ – ನೇರಳೆಯ ಮರದ ಹಾಗೆ, ಕಮನೀಯಂ – ಮನೋಹರವು, ಆದ ಅಶೋಕದ್ರುಮದಿಂ – ಅಗಸೆಯ ಮರದಿಂದಲೂ, ರತಿಮದನರಂ, ಓಜಿಯಂ – ಕ್ರಮದಿಂದ, ಪೂಜಿಸಲ್ಕೆ, ಪೂದಿರಿಯಲ್ – ಪುಷ್ಪಗಳಂ ಕೊಯ್ವುದಕೆ, ಏರಿದ – ಹತ್ತಿದ, ಏರುಜವ್ವನದ – ಏರುತ್ತಿರುವ ಪ್ರಾಯದ, ಸೊಂಪು – ಸುಖವು, ಎಸೆವ – ಶೋಭಿಸುವ ಕಿಂಪುರುಷರ, ನಿತಂಬಿನಿಯ – ಸ್ತ್ರೀಯಳ, ಸಡಿಲ್ದು – ಸಡಿಲಾಗಿ, ಎಳಲ್ವ – ಎಳದಾಡುವ, ಕಡುನಿಡಿದು – ಬಹಳ ಉದ್ದವು ಆದ, ಕೇಶಪಾಶದಿಂ – ಜಡೆಯಿಂದ, ತೊಡರ್ದು – ತೊಂದರೆಗೊಂಡು, ತಳಿರ್ತ – ಚಿಗುರಿದ, ತಮಾಲಲತೆ – ಹೊಂಗೆಯ ರೆಂಬೆ, ತಳ್ತಂತೆ – ಚಿಗುರಿದ ಹಾಗೆ, ಪೆಂಪಂ – ಉತ್ಕರ್ಷವನ್ನು, ಆಳ್ದ – ಪೋಷಿಸಿದ, ಚಂಪಕ – ಸಂಪಗೆಯ, ಕುಜಂಗಳಿಂ – ಮರಂಗಳಿಂದಲೂ, ಕಾದನ್ನನಂ – ಪ್ರಣಯ ಕಲಹವಾಡಿದ ಪ್ರಿಯಪುರುಷನನ್ನು, ಅಗಲ್ದ – ಬಿಟ್ಟು ಬಂದ, ಅಗಲೆಯ – ವಿರಹದ, ಉರಿಪಮಂ –

ಜ್ವಾಲೆಯನ್ನು, ಸೈರಿಸಲ್ – ತಡೆಯಲು, ಆರದೆ – ಶಕ್ತಿಯಿಲ್ಲದೆ, ಹರಣಂ – ಪ್ರಾಣವನ್ನು, ಕಳೆಯಲ್ – ಕಳಕೊಳ್ಳುವದಕ್ಕೆ, ಉಜ್ಜುಗಿಸಿ – ಉದ್ಯೋಗಿಸಿ, ತರುಗಿ – ತುಂಬಿ, ತೀವಿದ – ಪೂರ್ಣವಾದ, ಕೆಂಬೊಗರನು – ಆರುಣಕಾಂತಿಯನ್ನು, ಆಳ್ದು, ಪೂದೊಡಂಬೆಯ – ಪುಷ್ಪಗುಚ್ಛದ, ಮೊಗರವಂ – ಮುಂಭಾಗವನ್ನು ಕಂಡು, ದವಶಿಖಿಯ – ಕಾಡುಗಿಚ್ಚಿನ, ಕೆಂಡದ – ಅಂಗಾರದ, ಒಟ್ಟಲ್ – ರಾಶಿಯೆಂದು, ಗೆತ್ತು – ಭ್ರಾಂತಿಪಟ್ಟು, ಪೊಕ್ಕ ಹೊಗಸಿದ್ದ, ಸೀಮಂತಿನಿಯಂ ಸಿದ್ಧರ ಸ್ತ್ರೀಯನ್ನು, ಒಳಕೊಂಡು – ಒಳಗಿಟ್ಟುಕೊಂಡು, ಮದನ – ಕಾಮನ, ಪ್ರತಾಪ – ಪರಾಕ್ರಮದ, ಲಕ್ಷ್ಮಿಯಂ – ಸಂಪತ್ತನ್ನು ಪೊತ್ತಂತೆ, ಚಿತ್ತಂಗೊಳ್ವ – ಮನೋಹರವಾದ, ಕಿಂಶುಕ – ಮುಳ್ಳುಮುತ್ತುಗದ, ನಿಕುಂಜದಿಂ – ಹೊದರುಗಳಿಂದಲೂ, ಕಣ್ಬೊಲಂ – ದೃಷ್ಟಿಗೋಚರವನ್ನು, ತಪ್ಪಿ – ಕಡೆಗಿ, ಸರಿದು – ಹೋಗಿ, ತನ್ನಂ – ಅರಸಿ, ವುಡಿಕಿತೂಳಲ್ವ – ತಿರುಗುವ, ಕಾದಲನಂ – ವಿಟನನ್ನು, ಕಾದಲ್ಮೆಯಿಂ – ಪ್ರಣಯಕೋಪದಿಂದ, ಕಾಡಲು – ಕಾಡಿಸಲು, ಎಳಸಿ – ಬಯಸಿ ಘಳಿಲನೆ, ಬಿಳಲ್ – ಬಿಳಲನ್ನು (ಗಿಡದ ಇಳೆಬಿದ್ದ ನಾರಿನ), ಶಿಶಿ ಪಿಡಿದು ಅಡರ್ದು – ಏರಿ, ನಿಡುಗೊಂಬಿನ – ಉದ್ದವಾದ ರೆಂಬೆಯು, ಎಲೆದರುಗಲ – ಎಲೆಗಳ ಗುಂಪಿನ, ಪೊದರೆ – ಹೊದೆಯ, ಪೊರೆಯೋಳ್ – ಸಂದಿನಲ್ಲಿ, ಮೈಗರೆದು – ಅವಿತುಕೊಂಡು, ಇರ್ದು – ಇದ್ದ, ಗಂಧರ್ವ ಸುಂದರಿ – ಗಂಧರ್ವ ಚಲುವೆಯು, ನೆಲೆವಡೆದು – ನಿಂತು, ದಕ್ಷಿಣರೂಪ – ಯಕ್ಷಿಣಿಯಂತೆ, ದೇವತೆಯ ಹಾಗೆ ಎಸೆಯುತ್ತಿರಲು ಮಿಸುಪ ವಟವಿಟಪಿಯಂ – ಆಲದ ಮರದಿಂದಲೂ, ಬಾಂಬಟ್ಟೆಯೋಳ್ – ಆಕಾಶ ಮಾರ್ಗದಲ್ಲಿ, ಬಿರುವಿಸಲ್ – ಬಲವಾದ ಬಿಸಿಲು, ಬೆನ್ನಂ ಸುಡೆ –ಬಿಂಕವು ಕುಂದಿ, ಬಳಲ್ದು – ಬರ್ವ ಗರುಡದಂಪತಿಗೆ, ತಂಪಂ – ತಣೂವನ್ನು, ಪರಪಲೆಂದು – ಹರಡಿಸಬೇಕೆಂದು, ವಿಪಿನಲಕ್ಷ್ಮಿ – ವನದೇವತೆಯು, ವಿಲಾಸದಿಂದ – ಬೀಸಲು, ನಿಡುತೋಳ್ಗಳನ್ನು, ನೆಗಪಿ – ಎತ್ತಿಪಿಡಿದ, ನಿಜ್ಜನಂ – ಬೀಸಣಿಗೆ, ಎನಿಸಿ ರಂಜಿಪ, ಪರ್ಣ – ಎಲೆಗಳ, ಪಾಳಿಯಿಂ – ವರಸೆಯಿಂದ, ಏಳ್ಗೆವೆತ್ತ – ಪ್ರಸಿದ್ಧಿಗೆ ಬಂದ, ತಾಳಭೂರುಹದಿಂ – ತಾಳೆಯ ಮರದಿಂದಲು, ಪೆಂಪಂ – ವೃದ್ಧಿಯಂ, ವೆತ್ತು – ಹತ್ತು, ಅಪರಿಮಿತ – ಗಣನೆಯಿಲ್ಲದ, ಫಲವರ್ಣ – ಪುಷ್ಪಗುಚ್ಛಂ, ಪಳಿಂ – ಪಣ್ಣು, ಎಲೆ ಗೊಂಚಲ್ಗಳಿಂದ, ಅತಿಬಿಡತೆಯಂ – ಮಹಾಘನತೆಯಿಂ, ಅಪ್ಪುಗೈಯ್ದು, ಒಪ್ಪವಿಟ್ಟ ರವಿಶಶಿಗಳ ಕರಂಗಳ – ಕಿರಣಗಳ, ಎಡೆಯಾಟಕ್ಕೆ – ಪ್ರಸರಣಕ್ಕೆ, ತೆರಪು – ಅವಕಾಶವನ್ನು ಕೊಡದೆ, ತಮದ – ಕತ್ತಲೆಯ, ತವರ್ಮನೆ – ಗೃಹವೆನಿಸಿ, ವಿಚಿತ್ರತರವಾದ, ಖಗ – ಹಕ್ಕಿಗಳಿಗು, ಮೃಗಗಳಿಗು, ವಿಹರಣಸ್ಥಲಂ – ವಿಹಾರಸ್ಥಾನವು, ಆಗಿ ಮಹಾಗಮನಂ – ದೊಡ್ಡ ಕಾಡು, ಒಪ್ಪಿ ಇದ್ದರು ಅಲ್ಲಿ ॥

(ಮುಂದುವರಿಯುವುದು)

ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳ ಕೊನೆಯ ಪ್ರವಚನ

ಧರ್ಮಣ್ಣ ಮ. ಕುಂಬಾರ

ಪೂಜ್ಯ ಶ್ರೀ ಸಿದ್ಧೇಶ್ವರ ಅಪ್ಪಗಳ ಕೊನೆಯ ಪ್ರವಚನವು ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲೂಕ ಕಾಖಂಡಕಿ ಗ್ರಾಮದಲ್ಲಿ ನವೆಂಬರ್ 2022ರಂದು ಪ್ರಾರಂಭವಾಗಿ ಒಂದು ತಿಂಗಳ ಕಾಲ ನಿರಂತರವಾಗಿ ಪ್ರವಚನ ನಡೆಯಿತು. ಅಪ್ಪಗಳು ಪ್ರವಚನ ಮಾಡಿದ ಸ್ಥಳವು 12 ನೆಯ ಶತಮಾನದಲ್ಲಿ ಕಲ್ಯಾಣ ಕ್ರಾಂತಿಯಾದಾಗ ಷಟ್‌ಸ್ಥಲ ಜ್ಞಾನಿ ಶ್ರೀ ಚನ್ನಬಸವಣ್ಣನವರು ಮತ್ತು ಅವರ ಸಂಗಡಿಗರು ಶರಣರು ಕಲ್ಯಾಣದಿಂದ ಉಳವಿಗೆ ಬರುವಾಗ ಭೇಟಿ ನೀಡಿದ್ದ ಗ್ರಾಮವೆಂಬ ಐತಿಹ್ಯವಿದೆ.

ಶ್ರೀ ಚನ್ನಬಸವಣ್ಣನವರು ಮತ್ತು ಶರಣರು ಕಲ್ಯಾಣದಿಂದ ಉಳವಿಯ ಕಡೆಗೆ ಪ್ರಯಾಣಿಸುತ್ತಿರುವಾಗ ಸಾಯಂಕಾಲದ ಸಮಯವಾಗಿದ್ದುದರಿಂದ ಅವರಿಗೆ ಪೂಜೆಯ ಸಮಯವಾಗಿತ್ತು. ಕಾಖಂಡಕಿ ಗ್ರಾಮದ ಹತ್ತಿರವಿರುವ ದಟ್ಟ ಅರಣ್ಯದಲ್ಲಿರುವ ಆಲದ ಮರದ ಕೆಳಗೆ ಅವರೆಲ್ಲರೂ ಪೂಜೆಗೆ ಕುಳಿತರು. ಆದರೆ ಪೂಜೆಗೆ ಅಲ್ಲೆಲ್ಲೂ ನೀರು ಸಿಗಲಿಲ್ಲ. ಆಗ ಷಟ್‌ಸ್ಥಲಜ್ಞಾನಿ ಶ್ರೀ ಚನ್ನಬಸವಣ್ಣನವರು ಶಿವನನ್ನು ನೆನೆಯುತ್ತ ಧ್ಯಾನವನ್ನು ಮಾಡಿದಾಗ ಶರಣರು ಕುಳಿತ ಸ್ಥಳದ ಹತ್ತಿರ ಭೂಮಿಗೆ ಆಕಾಶದಿಂದ ಗುಡುಗು ಸಿಡಿಲು ಅಪ್ಪಳಿಸಿ ಭೂಮಿಯಲ್ಲಿ ಹೊಂಡ ನಿರ್ಮಾಣವಾಗಿ ನೀರು ಚಿಮ್ಮಿತು. ಶರಣರು ಸಂತಸದಿಂದ ಲಿಂಗ ಪೂಜೆಯನ್ನು ಮಾಡಿಕೊಂಡು ಉಳವಿಯ ಕಡೆಗೆ ಪ್ರಯಾಣ ಮುಂದುವರೆಸಿದರು ಎಂದು ಪ್ರತೀತಿ ಇದೆ. ಅಂದಿನಿಂದ ಸಿಡಿಲು ಹೊಡಿದು ಹೊಂಡವು ಉತ್ಪತ್ತಿಯಾದ ಸ್ಥಳವನ್ನು ಗ್ರಾಮಸ್ಥರು **"ಚನ್ನಬಸಪ್ಪನ ವಾರಿ"** ಎಂದು ಕರೆಯುತ್ತಾ ಬಂದಿದ್ದಾರೆ. ಪ್ರತಿ ವರ್ಷ ಶ್ರಾವಣ ಮಾಸದಂದು ಊರಿನ ಗೌಡರು ಮತ್ತು ಗ್ರಾಮಸ್ಥರು ಸೇರಿಕೊಂಡು ಅಲ್ಲಿ ಜಾತ್ರಾ ಮಹೋತ್ಸವವನ್ನು ಮಾಡುತ್ತಾರೆ.

ಕಾಖಂಡಕಿ ಗ್ರಾಮಸ್ಥರು ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳ ಹತ್ತಿರ ಹೋಗಿ ನಮ್ಮ ಗ್ರಾಮದಲ್ಲಿ ಪ್ರವಚನವನ್ನು ಮಾಡಬೇಕೆಂದು ವಿನಂತಿಸಿದಾಗ ಶ್ರೀಗಳು ನಾನು ಪ್ರವಚನ ಮಾಡುವುದಾದರೆ ಶ್ರೀ ಚನ್ನಬಸವಣ್ಣನವರು ಶಿವಪೂಜೆ ಮಾಡಿದ ಸ್ಥಳದಲ್ಲಿ ಪ್ರವಚನ ಮಾಡುತ್ತೇನೆ ಎಂದು ಅಪ್ಪಣೆ ಮಾಡಿದರು.

ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳ ಶಿಷ್ಯರಾದ ಶಿವಯೋಗಿ ಮಹಾಸ್ವಾಮಿಗಳು ಹಾಗೂ ಊರ ಹಿರಿಯರು ಕೂಡಿಕೊಂಡು ದಟ್ಟ ಅರಣ್ಯವನ್ನೇ ಒಂದು ಆಶ್ರಮದಂತೆ ಮಾಡಿದರು. ಅಲ್ಲಿ ಸಾವಿರಾರು ಜನರು ಕುಳಿತು ಶ್ರೀಗಳವರ ಪ್ರವಚನ ಕೇಳುವಂತೆ ಒಂದು ಮಂಟಪವನ್ನು ಕಟ್ಟಿದರು. ಶ್ರೀಗಳು ಉಳಿದುಕೊಳ್ಳಲಿಕ್ಕೆ ಒಂದು ಆಶ್ರಮವನ್ನೇ ಕಟ್ಟಿದರು. ಇಂದು ಅದು ಅನುಭವಮಂಟಪದಂತೆ ಬೆಳೆದು ಬಂದಿದೆ. ಇದು ಶ್ರೀ ಚನ್ನಬಸವಣ್ಣನವರು ಮಾಡಿದ ಲಿಂಗಪೂಜೆಯ ಫಲ ಎಂದು ಭಕ್ತರು ಹೇಳುತ್ತಾರೆ. 12ನೆಯ ಶತಮಾನದಿಂದ ಇಲ್ಲಿಯವರೆಗೆ ಆ ಹೊಂಡದ ನೀರು ಎಂದೂ ಬತ್ತಿಲ್ಲ ಎಂದೂ ಹೇಳುತ್ತಾರೆ. ಅಲ್ಲಿರುವ ಆಲದಮರವು ಇಂದು ಒಂದು ಎಕರೆ ಜಾಗದಲ್ಲಿ ಬೆಳೆದುನಿಂತಿದೆ.

ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ನವೆಂಬರ್ 22 ರಂದು ಪ್ರವಚನ ಪ್ರಾರಂಭ ಮಾಡಿದರು. ಪ್ರತಿ ದಿವಸ ಸುತ್ತಮುತ್ತ ಹಳ್ಳಿಯ ಸಾವಿರಾರು ಜನರು ಪ್ರವಚನ ಕೇಳಲು ಬೆಳಿಗ್ಗೆ 5 ಘಂಟೆಗೆ ಬರುತ್ತಿದ್ದರು. ಬೆಳಗ್ಗೆ 6 ಘಂಟೆಗೆ ಪ್ರವಚನ ಪ್ರಾರಂಭವಾದರೆ 7 ಘಂಟೆಯವರೆಗೆ ಜನರು ಪ್ರಶಾಂತವಾಗಿ ಕುಳಿತು ಶ್ರೀಗಳವರ ಜ್ಞಾನದ ನುಡಿಮುತ್ತುಗಳನ್ನು ಕೇಳುತ್ತಿದ್ದರು. ಬೆಳಗ್ಗೆ ಪ್ರವಚನ ಪ್ರಾರಂಭವಾದಾಗ ಮರದಲ್ಲಿದ್ದ ಪ್ರಾಣಿ–ಪಕ್ಷಿಗಳೂ ಸಹ ಶಾಂತವಾಗಿ ಪ್ರವಚನ ಕೇಳುತ್ತಿರುವಂತೆ ಯಾವ ಶಬ್ದವೂ ಆಗುತ್ತಿರಲಿಲ್ಲ. ಪ್ರವಚನ ಮುಗಿದ ತಕ್ಷಣ ಜನರು ಎದ್ದು ಹೋಗುವಂತೆ ಮರದಲ್ಲಿದ್ದ ಸಾವಿರಾರು ಪಕ್ಷಿಗಳು ಚಿಲಿಪಿಲಿ ಎಂದು ಕೂಗುತ್ತ ಆಹಾರ ಹುಡುಕುತ್ತ ಹಾರಿ ಹೋಗುತ್ತಿದ್ದವು. ಇದನ್ನು ಪ್ರವಚನಕ್ಕೆ ಬಂದ ಭಕ್ತರು ಪ್ರತ್ಯಕ್ಷ ನೋಡಿದ್ದಾರೆ.

ಶ್ರೀ ಅಪ್ಪಗಳವರ ಪ್ರವಚನ ಮುಗಿದ ನಂತರ ಎಲ್ಲ ಭಕ್ತರಿಗೂ ಮಹಾಪ್ರಸಾದದ ವ್ಯವಸ್ಥೆ ಇರುತ್ತಿತ್ತು ; ದಿನನಿತ್ಯ ಭಕ್ತರು ಹಾಗೂ ದಾನಿಗಳು ವಿವಿಧ ಬಗೆಯ ಪ್ರಸಾದವನ್ನು ಮಾಡಿಸುತ್ತಿದ್ದರು.

ಶ್ರೀಗಳ ಕೃಪಾದೃಷ್ಟಿ : ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ಚನ್ನಬಸವಣ್ಣನವರ ಪಾವನ ಸಾನ್ನಿಧ್ಯದ ಮುಂದೆ ಹಚ್ಚಿದ ನಂದಾದೀಪ ನಮ್ಮ ನಾಡನ್ನು ಬೆಳಗಲಿ, ಆ ಬೆಳಕಿನಲ್ಲಿ ನಾವು ಬಾಳೋಣ. ಶ್ರೀಗಳವರು ಆಲದಮರದ ಕೆಳಗೆ ಕುಳಿತು ವಿಶ್ರಾಂತಿ ಮಾಡಿದ ಜಾಗ ಪಾವನವಾಯಿತು.

ಹಲವು ಮಾತೇನು ನಿನೊಲಿದು ಪಾದವನಿಟ್ಟ
ನೆಲವೆ ಸುಕ್ಷೇತ್ರ ಜಲವೆ ಪಾವನತೀರ್ಥ
ಸುಲಭ ಶ್ರೀಗುರುವೇ ಕೃಪೆಯಾಗು

ಶ್ರೀ ಸಿದ್ಧೇಶ್ವರ ಅಪ್ಪಗಳು ನಮ್ಮ ಮುಂದೆ ಇಂದಿಲ್ಲ ಎಂದು ಚಿಂತಿಸಬೇಕಿಲ್ಲ. ಅವರು ದೇವಮಾನವರಾಗಿ ಮುಕ್ತರಾದವರು. ಜೀವನ್ಮುಕ್ತರಾಗುವ ಮಾರ್ಗ ತೋರಿಸಿದ ಅಮರ ಜೀವಿಗಳು.

ಮಾನವರಾಗಿ ಹುಟ್ಟಿ, ಶಿವಸಂದೇಶ ಬೀರಿ, ಮಾನವನ ಉದ್ಧಾರಕ್ಕೆ ಮಹತ್ಕಾರ್ಯ ಮಾಡಿ ಮಹಿಮಾಪುರುಷರಾದ ಶ್ರೇಷ್ಠ ಮಾನವರಲ್ಲಿ ಅವರೊಬ್ಬರು ಅಮರಾತ್ಮರು, ಅವರು ಲಿಂಗಪೂಜೆ ಮಾಡಿದ ಸ್ಥಾನ ಪುಣ್ಯಭೂಮಿ, ಅವರು ಸೇವೆಗೈದ ನೆಲ ಸುಕ್ಷೇತ್ರ, ಅವರು ಇದ್ದ ವಾಸ ಸದ್ಭಕ್ತರ ಹೃದಯದಲ್ಲಿ, ಜನಸಮೂಹದ ನೆನಪಿನಲ್ಲಿ, ದಾನಿಗಳ ಔದಾರ್ಯದಲ್ಲಿ, ನಿಷ್ಕಾಮ ಕರ್ಮದ ಜೀವಿಗಳಲ್ಲಿ, ನಿರ್ಮಲಹೃದಯದ ಸಜ್ಜನರಲ್ಲಿ ಅವರ ಸ್ಮರಣೆ ಒಂದು ದಿವ್ಯ ಭಾವವಾಗಿ ಉಳಿದಿದೆ. ಅವರ ನಡೆನುಡಿಗಳ ಏಕತೆ, ಬುದ್ಧಿಭಾವಗಳ ಸಮರಸ ಸಮದೃಷ್ಟಿಯ ಸ್ವರೂಪದರ್ಶನವನ್ನು ನೆನೆದೊಡೆಯೇ ಅವರ ದಿವ್ಯದರ್ಶನ ನಮ್ಮ ಕಣ್ಣು ಮುಂದೆ ಮತ್ತು ಅವರ ಮೌನ ಸ್ವರೂಪ ನಮ್ಮ ಭಾವದೆದುರು ಬಂದು ನಮ್ಮನ್ನು ಎಚ್ಚರಿಸುತ್ತದೆ. ಅದೊಂದು ದಿವ್ಯಾನುಭವ. ಸಕ್ಕರೆಯ ಸಿಹಿಯಂತೆ ಉಪ್ಪಿನ ರುಚಿಯಂತೆ ಅನುಭವಿಸಿಯೇ ತಿಳಿಯಬಹುದಾದ ಅನುಭಾವದ ಧರ್ಮಸಂಧಾನ. ಅವರ ನಡೆ ಪಾವನ, ನುಡಿ ಪಾವನ, ಅವರು ತೋರಿದ ಬೆಳಕು ಸುಜ್ಞಾನ, ಕತ್ತಲೆಯಿಂದ ಬೆಳಕಿನೆಡೆಗೆ, ಅಜ್ಞಾನದಿಂದ ಸುಜ್ಞಾನದ ಕಡೆಗೆ, ಮೃತ್ಯುವಿನಿಂದ ಅಮೃತತ್ವದ ಕಡೆಗೆ ಒಯ್ಯುವ ಪ್ರಯೋಗದ ಪ್ರತ್ಯಕ್ಷ ಪ್ರದರ್ಶನ. ಅವರ ಭವ್ಯ ಬದುಕಿನ ರಸಪಾಕ. ಅವರ ಸ್ಮರಣೆ ನಮಗೆ ಸದಾ ದಾರಿದೀಪ.

ಶ್ರೀ ಶಿವಯೋಗಿ ಮಹಾಸ್ವಾಮಿಗಳು : ವಿಜಯಪುರ ಜಿಲ್ಲೆಯ ಕಾಖಂಡಕಿ ಗ್ರಾಮದಲ್ಲಿ ಕೃಷಿಕರು ಮತ್ತು ಗೌಡಕಿ ಮನೆತನದ ಶ್ರೀ ಮಲ್ಲನಗೌಡರು ಹಾಗೂ ಶ್ರೀಮತಿ ನಿರ್ಮಲಾ ಗೌಡತಿ ದಂಪತಿಗಳ ಪುಣ್ಯಗರ್ಭದಲ್ಲಿ ಶ್ರೀ ಶಿವಯೋಗಿ ಮಹಾಸ್ವಾಮಿಗಳು ಜನಿಸಿದರು. ತಾಯಿಯ ಬಯಕೆಗಳಿಂದ ಗರ್ಭದಲ್ಲಿಯ ಕೂಸಿನ ಲಕ್ಷಣಗಳು ಗೊತ್ತಾಗುತ್ತವೆ ಎಂಬ ವಾಡಿಕೆಯ ಪ್ರಕಾರ, ತಾಯಿಯವರು ಯಾವಾಗಲೂ ಶಿವಪೂಜೆ, ಶಿವಧ್ಯಾನದಲ್ಲಿ ಮಗ್ನರಾಗಿರುತ್ತಿದ್ದರು. ತಂದೆತಾಯಿಯವರ ಬಯಕೆಯಂತೆ 1981ರ ನವೆಂಬರ್ 12ರಂದು ಗಂಡುಮಗು ಜನಿಸಿತು. ಅವರೇ ಶ್ರೀ ಶಿವಯೋಗೀಶ್ವರ ಮಹಾಸ್ವಾಮಿಗಳು ಇವರ ಮೂಲ ಹೆಸರು ಸಂದೀಪಗೌಡರು. ಅವರು ಚಿಕ್ಕವಯಸ್ಸಿನಲ್ಲಿಯೇ ಆಧ್ಯಾತ್ಮಿಕ ಚಿಂತಕರಾಗಿದ್ದರು. ಇವರು ಇಂಜಿನಿಯರಿಂಗ್ ಪದವೀಧರರು. ತಮ್ಮ 20ನೆಯ ವಯಸ್ಸಿನಲ್ಲಿ ಕುಟುಂಬವನ್ನು ಸಂಪೂರ್ಣವಾಗಿ ತ್ಯಾಗಮಾಡಿ ಗುರುಗಳಾದ ಜ್ಞಾನಯೋಗಿ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳ ಗರಡಿಯಲ್ಲಿ ಪಳಗಿ ಆಧ್ಯಾತ್ಮದ ಲೋಕಕ್ಕೆ ಸಿದ್ಧರಾದರು. ಸದಾಕಾಲ ಪಾಠ ಪ್ರವಚನಗಳಲ್ಲಿ ಕಾಲ ಕಳೆಯುತ್ತ ಗುರುವಿಗೆ ತಕ್ಕ ಶಿಷ್ಯರಾಗಿ ಬೆಳೆಯಲಾರಂಭಿಸಿದರು. ಇವರನ್ನು ಗುರುಗಳು ಅಚ್ಚುಮೆಚ್ಚಿನ ಶಿಷ್ಯರಾಗಿ ಸ್ವೀಕರಿಸಿ, ಜಂಗಮದೀಕ್ಷೆಯನ್ನು ಕೊಟ್ಟು ಶ್ರೀ ಶಿವಯೋಗೀಶ್ವರ ಮಹಾಸ್ವಾಮಿಗಳು ಎಂದು ಹೊಸ ಅಭಿಧಾನವನ್ನು ನೀಡಿದರು.

ಶ್ರೀ ಸಿದ್ಧೇಶ್ವರ ಅಪ್ಪಗಳ ತಪೋಬಲದಿಂದ ಕಾಖಂಡಕಿ ಗ್ರಾಮದಲ್ಲಿ ನಡೆದ ಮೂರೂ ಮಹತ್ಕಾರ್ಯಗಳೆಂದರೆ:

* ಶ್ರೀ ಚೆನ್ನಬಸವಣ್ಣನವರ ವಾರಿ ಇದ್ದ ಸ್ಥಳಕ್ಕೆ ಗುರುದೇವ ಆಶ್ರಮವೆಂದು ಮರುನಾಮಕರಣವಾಯಿತು ;
* ಶ್ರೀ ಸಂದೀಪಗೌಡರಿಗೆ ಜಂಗಮದೀಕ್ಷೆ ಕೊಟ್ಟು ಶ್ರೀ ಶಿವಯೋಗೀಶ್ವರ ಮಹಾಸ್ವಾಮಿಗಳು ಎಂದು ಹೆಸರಿಟ್ಟರು ;
* ಕಾಖಂಡಕಿ ಗ್ರಾಮಕ್ಕೆ 'ಕಲ್ಯಾಣ ಕಾಖಂಡಕಿ' ಎಂದು ಮರುನಾಮಕರಣವಾಗಿ ಶ್ರೀಗಳವರ ಕೃಪೆಯಿಂದ ಕಾಖಂಡಕಿ ಗ್ರಾಮ ಒಂದು ಪುಣ್ಯಕ್ಷೇತ್ರವಾಯಿತು;

ಶ್ರೀ ಅಥಣಿ ಗಚ್ಚಿನಮಠದ ಶ್ರೀ ಶಿವಯೋಗಿ ಸ್ವಾಮಿಗಳೇ ಪುನಃ ನಮ್ಮ ಕನ್ನಡ ನಾಡಿಗೆ ಹುಟ್ಟಿಬಂದರು ಎಂದು ಅನಿಸುತ್ತದೆ. ಶ್ರೀ ಶಿವಯೋಗೀಶ್ವರ ಮಹಾಸ್ವಾಮಿಗಳು ಬಿಳಿಯ ಬಟ್ಟೆಯ ಬದಲು ಜೇಬಿಲ್ಲದ ಕಾವಿಯ ಬಟ್ಟೆಯನ್ನು ಧರಿಸಿದರು.

ಗುರು–ಶಿಷ್ಯ ಬಾಂಧವ್ಯ : ಅಪ್ಪಗಳ ನೆಚ್ಚಿನ ಶಿಷ್ಯರಾದ ಶ್ರೀ ಶಿವಯೋಗಿ ಮಹಾ ಸ್ವಾಮಿಯವರು ಶಾಂತಿದೂತರಾಗಿ ತಮ್ಮ ಪಾತ್ರವನ್ನು ಯಥಾಯೋಗ್ಯವಾಗಿ ನಿರ್ವಹಿಸುತ್ತಿದ್ದರು. ವೈರಾಗ್ಯನಿಧಿಯಾದ ಅವರನ್ನು ಜನಜಾಗೃತಿ ದೃಷ್ಟಿಯಿಂದ ಶ್ರೀ ಸಿದ್ಧೇಶ್ವರ ಅಪ್ಪಗಳು ಬೇರೆ ಬೇರೆ ಸ್ಥಳಗಳಿಗೆ ಆಗಾಗ ಕಳಿಸುತ್ತಿದ್ದರು. ನಂತರ ಕಾಖಂಡಕಿ ಗ್ರಾಮದಲ್ಲಿ ಶ್ರೀ ಚನ್ನಬಸವಣ್ಣನವರ ವಾರಿಗೆ ಶ್ರೀಗಳು ದಯಮಾಡಿಸಿದರು. ಎಲ್ಲವೂ ಗುರುಗಳ ಅಪ್ಪಣೆಯಂತೆ ನಡೆಯಿತು. ಇವೆಲ್ಲಕ್ಕೂ ಮಹಾಸನ್ನಿಧಿಯವರ ಸಂಕಲ್ಪ, ಕರುಣೆ ಮತ್ತು ಪ್ರೇರಣೆಯೇ ಪರಿಣಾಮ ಎನ್ನಬಹುದು.

ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ
ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ
ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಸದಂತೆ
ಇರಿಸು ಕೂಡಲಸಂಗಮದೇವಾ

ಶ್ರೀ ಶಿವಯೋಗೀಶ್ವರ ಮಹಾಸ್ವಾಮಿಗಳು ಶ್ರೀ ಚನ್ನಬಸಪ್ಪನ ವಾರಿಗೆ ಬಂದಾಗ ಅಲ್ಲಿ ಚಿನ್ಮಯಜ್ಞಾನಿ ಶ್ರೀ ಚನ್ನಬಸವಣ್ಣನವರ ಗದ್ದುಗೆ ಮತ್ತು ಆಲದಮರ ಹೊರತುಪಡಿಸಿ ಇನ್ನೇನೂ ಇರಲಿಲ್ಲ. ಸುತ್ತಮುತ್ತ ಮುಳ್ಳು ಕಂಟಿಗಳಿಂದ ಕೂಡಿದ ಮರಗಿಡಗಳು ಬೆಳೆದಿದ್ದವು. ಶ್ರೀ ಶಿವಯೋಗೀಶ್ವರ ಸ್ವಾಮಿಗಳು ದಯಮಾಡಿಸಿದಂದಿನಿಂದ ಕೊರಡು ಕೊನರುವಂತೆ, ಬರಡು ಹೈನಾಗುವಂತೆ, ಕುರುಡಂಗೆ ಕಣ್ಣು ಬರುವಂತೆ, ಈ ಕಾಡು ಸುಕ್ಷೇತ್ರವಾಯಿತು. ಈಗ ಆಶ್ರಮವು ಸರ್ವಾಂಗ ಸುಂದರವಾಗಿ ಬೆಳೆಯುತ್ತಿದೆ.

ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ಮಹಾತಪಸ್ವಿಗಳು. ಅವರ ಕರುಣೆಯೇ ರಕ್ಷಾಮಣಿಯಾಗಿ ಎಲ್ಲ ಕಾಲದಲ್ಲಿಯೂ ಶ್ರೀ ಶಿವಯೋಗೀಶ್ವರ ಮಹಾಸ್ವಾಮಿಗಳಿಗೆ ಸ್ಫೂರ್ತಿಯನ್ನು ಮತ್ತು ಶಕ್ತಿಯನ್ನು ದಯಪಾಲಿಸುತ್ತಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ಶ್ರೀ ಸಿದ್ಧೇಶ್ವರ ಅಪ್ಪಗಳ ಸೇವೆಯ ಫಲವಾಗಿ ಶಿವಯೋಗೀಶ್ವರ ಮಹಾಸ್ವಾಮಿಗಳವರಿಗೆ ಸರ್ವಸ್ಥಿತಿ ಕೃಪಾಪ್ರಸಾದ ಪ್ರಾಪ್ತವಾಗಿದೆ. ಇಂದಿಗೂ ಶ್ರೀ ಸಿದ್ಧೇಶ್ವರ ಅಪ್ಪಗಳ ನಾಮಸ್ಮರಣೆಯೇ ಅವರ ದಿನಚರಿಯಾಗಿದೆ. ಶ್ರೀಗಳವರ ಜ್ಞಾನವೇ ಅವರ ಉಸಿರು. ಶ್ರೀ ಸಿದ್ಧೇಶ್ವರ ಅಪ್ಪಗಳನ್ನು ಅವರು ಯಾವಾಗಲೂ ತಮ್ಮ ಹೃದಯಮಂದಿರದಲ್ಲಿ ಪ್ರತಿಷ್ಠಾಪಿಸಿಕೊಂಡಿದ್ದಾರೆ. ಅವರ ಉತ್ಸಾಹಭರಿತ ನಿಲುವೇ ಇದಕ್ಕೆ ಪ್ರತ್ಯಕ್ಷ ಸಾಕ್ಷಿ. ಶ್ರೀ ಸಿದ್ಧೇಶ್ವರ ಅಪ್ಪಗಳ ಪವಿತ್ರ ಪ್ರಕಾಶದ ಆಶ್ರಯದಲ್ಲಿ ತಾವು ಸಂಕಲ್ಪಿಸಿದ ಕಾರ್ಯಗಳನ್ನು ಅವರು ಬಹು ಯಶಸ್ವಿಯಾಗಿ ಪೂರೈಸುತ್ತಿದ್ದಾರೆ. ಅವರಿಗೆ ಸಮಾಜಜೀವನದಲ್ಲಿ ವಿಶೇಷ ಪ್ರೇರಣೆಸಿಕ್ಕಿದೆ. ಅವರಲ್ಲಿ ಅಭೂತಪೂರ್ವ ವ್ಯಕ್ತಿತ್ವವಿದೆ. ತ್ಯಾಗವೇ ಮುಖ್ಯ ಗುಣವಾಗಿದ್ದ ಮಹಾಸನ್ನಿಧಿಯವರ ಬಗೆಗೆ ಅವರು ತುಂಬಾ ಅಭಿಮಾನ ಹೊಂದಿದ್ದಾರೆ.

ಶ್ರೀ ಸಿದ್ಧೇಶ್ವರ ಅಪ್ಪಗಳವರ ನೆರಳಾಗಿ ಅವರ ನಡೆನುಡಿದ ಹಾದಿಯಲ್ಲೇ ನಡೆದು ನಿಷ್ಠೆಯಿಂದ ಅವರ ಸೇವೆ ಮಾಡಿದ ಶ್ರೀ ಶಿವಯೋಗೀಶ್ವರ ಮಹಾಸ್ವಾಮಿಗಳು ಲಿಂಗಪೂಜಾ ಮಹಿಮರು. ಅವರಿಬ್ಬರ ಆತ್ಮಗಳ ಸಂಯೋಗವೆ ಇಂದು ಅತ್ಯಂತ ಸಕ್ರಿಯವಾಗಿ ಶಕ್ತಿರೂಪಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ಏನನ್ನಾದರೂ ಸಾಧಿಸಬಲ್ಲ ದಿವ್ಯಶಕ್ತಿ ಅಲ್ಲಿ ನೆಲೆನಿಂತಿದೆ ಎಂದೆನಿಸುತ್ತದೆ. ಇದರಿಂದ ಆಶ್ರಮಕ್ಕೆ ಬರುವ ಭಕ್ತರ ಮನ ತಣಿಯುತ್ತದೆ. ಅಪ್ಪಗಳ ಕೃಪಾದೃಷ್ಟಿಯಿಂದ ಶ್ರೀ ಶಿವಯೋಗೀಶ್ವರ ಮಹಾಸ್ವಾಮಿಗಳು ಎಲ್ಲ ಸಂಪ್ರದಾಯಗಳನ್ನೂ ಚಾಚೂ ತಪ್ಪದೇ ನಡೆಸಿಕೊಂಡು ಬಂದಿರುತ್ತಾರೆ.

ಶ್ರೀ ಪೂಜ್ಯ ಸಿದ್ಧೇಶ್ವರ ಅಪ್ಪಗಳು ಅನುಭವಮಂಟಪವಾದರೆ, ಪೂಜ್ಯ ಶಿವಯೋಗಿ ಅಪ್ಪಗಳು ಪ್ರವಚನದ ಜೈತ್ರಯಾತ್ರೆಯಾದರು. ಇವತ್ತಿಗೂ ಗುರುದೇವ ಆಶ್ರಮದಲ್ಲಿ ದಿನನಿತ್ಯ ಪ್ರವಚನ ಹಾಗೂ ದಾಸೋಹಗಳು ಅನೂಚಾನವಾಗಿ ನಡೆದುಕೊಂಡು ಬರುತ್ತಿವೆ. ಶಿವಯೋಗೀಶ್ವರ ಮಹಾಸ್ವಾಮಿಗಳ ಜೀವನದ ಮಹಾಚೈತನ್ಯ ಪ್ರಕಟವಾಗುತ್ತಿದೆ.

ಮಂಗಲಮೂರ್ತಿಯಾದ ಶ್ರೀ ಸಿದ್ಧೇಶ್ವರ ಅಪ್ಪಗಳು ದೇವಮಾನವರು. ಅವರ ಕಾಲಾವಧಿಯಲ್ಲಿ ನಾವು ಬಾಳಿ ಬದುಕಿದ್ದು ನಮ್ಮ ಪುಣ್ಯವಲ್ಲದೇ ಮತ್ತೇನು. ಅವರ ಪಾದಸ್ಪರ್ಶದಿಂದ ಎಷ್ಟೋ ಗ್ರಾಮದ ನೆಲ ಪುಣ್ಯಕ್ಷೇತ್ರವಾಯಿತು. ಅನುಭಾವದಿಂದೊಡ ಗೂಡಿದ ಅವರ ಮಾತು ಹೃದಯದ ಕಂಪನ್ನು ಇಂಪನ್ನು ಸೂಸುವ ಭಾವ ಮಂದಾರವಾಯಿತು. ಅಂಥ ಪುಣ್ಯಪುರುಷರು ಉಸಿರಾಡಿಸಿದ ವಾತಾವರಣವೇ ಇಂದು ಸ್ವರ್ಗದ ಆನಂದವನ್ನು ತುಂಬಿ ತುಳುಕಿಸುವ, ಬೆಳಗಿಸುವ ಬೆಳದಿಂಗಳಾಗಿದೆ. ಆ ಬೆಳಕು ಭಕ್ತರ ಹೃದಯದ ಹಣತೆಯಲ್ಲಿ ಪರಂಜ್ಯೋತಿಯಾಗಿ ಬೆಳಗುತ್ತಿದೆ. ಆ ಕರುಣಾಳು

ಬೆಳಕು ನಮ್ಮನ್ನು ಸದಾ ಅನುಗ್ರಹಿಸುತ್ತಿದೆ. ಶ್ರೀ ಸಿದ್ಧೇಶ್ವರ ಅಪ್ಪಗಳ ಪುಣ್ಯಸ್ಮರಣೆಯೇ ಇಂದು ಎಲ್ಲರ ಜೀವನದ ನಂದಾದೀಪವಾಗಿದೆ.

ಇಂದು ಲಿಂ. ಶ್ರೀ ಸಿದ್ಧೇಶ್ವರ ಅಪ್ಪಗಳು ನಮ್ಮ ಮಧ್ಯದಲ್ಲಿಲ್ಲ. ಸೂರ್ಯನು ಅಸ್ತಮಿಸುವಾಗ ತನ್ನ ತೇಜಸ್ಸನ್ನು ಅಗ್ನಿಯಲ್ಲಿಟ್ಟು ಹೋಗುವಂತೆ ಪೂಜ್ಯ ಅಪ್ಪಗಳು 2.1.2023 ರಂದು ಲಿಂಗದಲ್ಲಿ ಬೆರೆತು ಹೋದರು, ತಮ್ಮ ದೇಹವನ್ನು ಅಗ್ನಿಗೆ ಅರ್ಪಣೆ ಮಾಡಿಕೊಂಡರು. ತಮ್ಮ ತಪಶ್ಶಕ್ತಿಯನ್ನು ತಮ್ಮ ನೆಚ್ಚಿನ ಶಿಷ್ಯರಾದ ಶ್ರೀ ಶಿವಯೋಗೀಶ್ವರ ಮಹಾಸ್ವಾಮಿಗಳಲ್ಲಿ ಇಟ್ಟುಹೋದದ್ದು ನಾಡಿನ ಪುಣ್ಯವಿಶೇಷ. ಅವರ ಶಿವಸಂಕಲ್ಪಗಳು ಪೂಜ್ಯ ಶ್ರೀ ಶಿವಯೋಗೀಶ್ವರ ಮಹಾಸ್ವಾಮಿಗಳ ಮೂಲಕ ನೆರವೇರುತ್ತಾ ಬಂದಿರುತ್ತವೆ.

ಶ್ರೀ ಸಿದ್ಧೇಶ್ವರ ಅಪ್ಪಗಳವರ ಕೃಪೆಯಿಂದ ಕಾಖಂಡಕಿ ಗ್ರಾಮದಲ್ಲಿ ಇಂದು 12ನೆಯ ಶತಮಾನದ ಶ್ರೀ ಬಸವಣ್ಣನವರ ಅನುಭವ ಮಂಟಪದಂತೆ ಜ್ಞಾನದಾಸೋಹ ಮತ್ತು ಅನ್ನದಾಸೋಹವನ್ನು ಶ್ರೀ ಶಿವಯೋಗೀಶ್ವರ ಮಹಾಸ್ವಾಮಿಗಳು ನಡೆಸಿಕೊಂಡು ಬರುತ್ತಿದ್ದಾರೆ.

ಕಾಯಕ : "ಮಹಾನುಭಾವನೆ! ನಿನ್ನ ಹತ್ತೂ ಬೆರಳಿನಿಂದ ನೂರು ವರುಷ ಕೆಲಸ ಮಾಡು. ಆದರೆ ನಿನ್ನ ಬೆರಳುಗಳಿಗೆ ಒಂದಿಷ್ಟೂ ಮಣ್ಣು ಹತ್ತದಂತೆ ನೋಡಿಕೋ ಪರಮಾತ್ಮನ ಕಾರುಣ್ಯದ ಕೂಸಾಗಿರಬೇಕು. ಈ ಪ್ರಪಂಚವನ್ನೆಲ್ಲಾ ನಾವು ಪ್ರೀತಿಸಬೇಕು ಅದಕ್ಕಾಗಿ ಆಯುಷ್ಯದ ತುಂಬಾ ದುಡಿಯಬೇಕು" ಎಂದರು ಶ್ರೀ ಸಿದ್ಧೇಶ್ವರ ಅಪ್ಪಗಳು.

ಅನುಭಾವ : ಮನುಷ್ಯನೊಬ್ಬ ಸಾಗರದಾಳಕ್ಕೆ ಮುಳುಗುತ್ತಾ ಹೋದಂತೆ ಮುತ್ತು ರತ್ನಗಳು ಸಿಗುತ್ತಾ ಹೋಗುತ್ತವೆ. ಅಧ್ಯಾತ್ಮ ವಿಚಾರದಲ್ಲಿ ಮುಳುಗುತ್ತಾ ಹೋದಂತೆ ಅನುಭಾವದ ಮುತ್ತುರತ್ನಗಳು ಸಿಗುತ್ತವೆಂದವರು ಶ್ರೀ ಶಿವಲಿಂಗೇಶ್ವರ ಪ್ರಭು.

ಭಕ್ತಿಯ ತಿರುಳು : ಗಿಡದ ಹಂಗು ಹಕ್ಕಿಗಿಲ್ಲ, ಹಕ್ಕಿಯ ಹಂಗು ಗಿಡಕ್ಕಿಲ್ಲ, ಗಿಡ ತನ್ನ ಪಾಡಿಗೆ ತಾನು ನಿಂತಿರುತ್ತದೆ, ಹಕ್ಕಿ ತನ್ನ ಪಾಡಿಗೆ ತಾನು ಹಾರುತ್ತದೆ. ಹಾಗಿರಬೇಕು ನಮ್ಮ ಭಕ್ತಿ ಇದುವೇ ನಮ್ಮ ಶ್ರೀ ಶಿವಲಿಂಗೇಶ್ವರ ಪ್ರಭುಗಳ ಶಕ್ತಿ.

ಮರ : ಮರ ಹಳೆಯದು ಆದರೇನು? ಅದು ಬೆಳೆಯುತ್ತಲೇ ಇರುತ್ತದೆ. ಮನುಷ್ಯನ ಆಯುಷ್ಯ ಇರುವವರೆಗೆ ಅವನಲ್ಲಿ ಅಧ್ಯಾತ್ಮ ಅದು ಬೆಳೆಯುತ್ತಾ ಇರಬೇಕು ಎಂದರು ಶ್ರೀ ಶಿವಲಿಂಗೇಶ್ವರ ಪ್ರಭು.

ಗುರು : ಗುರುವಿನ ಉಪದೇಶ ಬಾಗಿಲು ಇದ್ದಂತೆ; ಶಾಸ್ತ್ರಾಭ್ಯಾಸ ಹೆದ್ದಾರಿ ಇದ್ದಂತೆ; ಹೃದಯಸಿಂಹಾಸನ ಶಿವಸಾಕ್ಷಾತ್ಕಾರದ ನಿವಾಸವಿದ್ದಂತೆ; ಸತ್ಸಂಗ ಕೀಲಿ ಇದ್ದಂತೆ ಎಂದ ನಮ್ಮ ಶ್ರೀ ಶಿವಲಿಂಗೇಶ್ವರ ಪ್ರಭು.

□

ಶರಣಾಗತಿಯ 'ಬಾಗಿಲು'

ಡಾ. ಎ. ನಿರಂಜನ್

ಕನಕದಾಸರು (1509–1600) ಕರ್ನಾಟಕದ ಹಾವೇರಿ ಜಿಲ್ಲೆಯ 'ಬಾಡ' ಎಂಬ ಗ್ರಾಮದಲ್ಲಿ ಜನಿಸಿ, ಡಣಾಯಕ ಪದವಿಯಲ್ಲಿ ರಾಜವೈಭವದಿಂದ ಮೆರೆದು ತರುವಾಯ ಭಗವಂತನಿಂದ ಪರೀಕ್ಷೆಗೆ ಒಳಪಟ್ಟು, ಭಕ್ತಿಮಾರ್ಗದತ್ತ ಸಾಗಿ, ದಾಸಪಂಥದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದ ದಾರ್ಶನಿಕ ಕವಿ. ಈ ಸಂಗತಿಯನ್ನು ಸ್ವತಃ ಕನಕದಾಸರೇ 'ದೊರೆತನವ ಬಿಡಿಸಿ ಸುಸ್ಥಿರಮಾರ್ಗವನೆ ತೋರಿ ಪರಿಪಾಲಿಸಿದೆ ಎನ್ನ ಹರಿಯೆ' ಎಂದಿದ್ದಾರೆ. ಉಡುಪಿಯ ಶ್ರೀಕೃಷ್ಣನ ಪರಮಭಕ್ತರಾಗಿದ್ದ ಅವರಿಗೆ ದೇಗುಲ ಪ್ರವೇಶಕ್ಕೆ ಅವಕಾಶ ದೊರಕದಿದ್ದಾಗ ಭಗವಂತನೇ ಕಿಂಡಿಯ ಮೂಲಕ ದರ್ಶನ ನೀಡಿದನೆಂಬ ಐತಿಹ್ಯವಿದೆ. ಅವರ ಕೀರ್ತನೆಗಳು ಭಕ್ತಿಯ ಅನುಭವದ ನೆಲೆ ಮಾತ್ರವಾಗಿರದೆ, ಸಮಾಜದಲ್ಲಿನ ರೂಢಿಗತ ವ್ಯವಸ್ಥೆಯಲ್ಲಿನ ಅಸಮಾನತೆಯನ್ನು ಮೌನವಾಗಿ ಪ್ರಶ್ನಿಸುವ ಸಾಹಿತ್ಯಕ ರೂಪಕಗಳಾಗಿವೆ. 'ಬಾಗಿಲನು ತೆರೆದು ಸೇವೆಯನು ಕೊಡು ಹರಿಯೆ' ಎಂಬ ಕೀರ್ತನೆಯು ಅವರ ಚಿಂತನೆಯ ತಾತ್ವಿಕ ಮತ್ತು ಸಾಮಾಜಿಕ ಆಯಾಮಗಳನ್ನು ಬಿಂಬಿಸುವ ಮಹತ್ವವನ್ನು ಹೊಂದಿದೆ. ಈ ರಚನೆಯನ್ನು – ಭಾಗವತ ಆಧಾರಿತ ಭಕ್ತಿತತ್ವ, ಭಗವದ್ಗೀತೆಯ ಶರಣಾಗತಿ ಸಿದ್ಧಾಂತ ಮತ್ತು ಕವಿಯ ಸಾಮಾಜಿಕ ಅನುಭವ – ಹೀಗೆ ಮೂರು ಆಯಾಮಗಳಲ್ಲಿ ವಿಶ್ಲೇಷಿಸಬಹುದಾಗಿದೆ.

ಬಾಗಿಲನು ತೆರೆದು ಸೇವೆಯನ್ನು ಕೊಡು ಹರಿಯೆ ॥ ಪ ॥
ಕೂಗಿದರು ಧ್ವನಿ ಕೇಳಲಿಲ್ಲವೇ ನರಹರಿಯೆ ॥ ಅ.ಪ. ॥

'ಬಾಗಿಲನು ತೆರೆದು ಸೇವೆಯನ್ನು ಕೊಡು.... ನರಹರಿಯೆ' ಎಂಬ ಭಕ್ತಿಪೂರ್ವಕ ಆಕ್ರಂದನವು ಉಡುಪಿಯ ಶ್ರೀಕೃಷ್ಣ ದೇವಾಲಯದ ಬಾಗಿಲಲ್ಲಿ ನಿಂತ ದಾಸನ ಅಳಲಾಗಿ ಕಾಣಿಸುವುದು ಭಾವನಾತ್ಮಕವಾಗಿ ಹಿತವೆನಿಸಿದರೂ ಅದು ಪಠ್ಯಸತ್ಯವಲ್ಲ. ದೇಗುಲ ಪ್ರವೇಶಕ್ಕೆ ಅರ್ಚಕರ ನಿರಾಕರಣೆ, ವಿಗ್ರಹ ತಿರುಗಿನಿಂತದ್ದು ಮುಂತಾದ ಕಥನಗಳ ಮೂಲಕ ಇಡೀ ಪ್ರಸಂಗವನ್ನು ವ್ಯಾಖ್ಯಾನಿಸುವ ಪ್ರಯತ್ನ ಪಠ್ಯಾತೀತವೂ, ಐತಿಹಾಸಿಕವಾಗಿ ಆಧಾರರಹಿತವೂ ಆಗಿದೆ. ಈ ಕಥೆಗಳು ಕೇವಲ ರೋಚಕ ಕಲ್ಪನೆಗಳಾಗಿದ್ದು, ಅವು ಕೀರ್ತನೆಯೊಳಗಿನ ನಿಜವಾದ ಧ್ವನಿಯನ್ನು ಬಿಂಬಿಸುವುದಿಲ್ಲ. ಇಲ್ಲಿ ಕನಕದಾಸರು ನಿಂತಿರುವುದು ದೇವಾಲಯ

ದ್ವಾರದ ಮುಂಭಾಗದಲ್ಲಲ್ಲ. ಭಕ್ತವತ್ಸಲನಾದ ನರಹರಿಯ ಅನುಗ್ರಹದ ಅಂಚಿನಲ್ಲಿ. 'ನರಹರಿ' ಎಂಬುದು ಸ್ಪಷ್ಟವಾಗಿ ನರಸಿಂಹ ರೂಪವೇ ಆಗಿದೆ. ಕಾಗಿನೆಲೆಯಲ್ಲಿ ನೆಲೆನಿಂತು ಆರಾಧಿತನಾಗಿರುವ ಕರುಣಾಮೂರ್ತಿ ಅವನು. ಇಲ್ಲಿ 'ಬಾಗಿಲು' ಎಂಬುದು ಭಗವದನುಗ್ರಹದ ತತ್ವ ರೂಪವಾಗಿದ್ದು, ಭಕ್ತನ ಶರಣಾಗತಿಯನ್ನು ಸ್ವೀಕರಿಸುವ ದೈವಿಕ ಚೌಕಟ್ಟನ್ನು ಸೂಚಿಸುತ್ತದೆ. 'ಬಾಗಿಲು' ಎಂಬುದು ಕಲ್ಲಿನ ಅಥವಾ ಮರದ ಬಾಗಿಲು ಮಾತ್ರವಲ್ಲ. ಅದು ದಯೆಯ ದ್ವಾರವೂ ಆಗಿದೆ. 'ಸೇವೆಯನು ಕೊಡು' ಎನ್ನುವುದು ಅನುಗ್ರಹದ ಸಾನ್ನಿಧ್ಯದ ಅವಕಾಶಕ್ಕಾಗಿ ಮಾತ್ರ. ಮುಂದಿನ ಚರಣಗಳಲ್ಲಿ ಬರುವ ಗಜೇಂದ್ರನ ಕೂಗು, ಅಜಾಮಿಳನ ನಾಮಸ್ಮರಣೆ, ದ್ರೌಪದಿಯ ಮಾನಸಂರಕ್ಷಣೆ – ಇವೆಲ್ಲವೂ ಅಸದಳವಾದ ದುಃಖದಲ್ಲಿರುವ ಜೀವಿಯೊಂದು ಭಗವಂತನ ದಯಾದ್ವಾರಕ್ಕಾಗಿ ಯಾಚಿಸುತ್ತಿರುವಂತೆ ತೋರುತ್ತದೆ. ಹೀಗಾಗಿ ಈ ಕೀರ್ತನೆಯು ಕೇವಲ ಸಮಾಜದ ನಿರಾಕರಣೆಯಲ್ಲಿ ನಿಲ್ಲುವುದಿಲ್ಲ; ಬದಲಾಗಿ ಶರಣಾಗತಿಯ ತೀವ್ರತೆಯಿದ್ದಾಗ ಭಗವಂತನ ಆಗಮನ ಎಂದಿಗೂ ತಡವಾಗುವುದಿಲ್ಲ ಎಂಬ ದಾರ್ಶನಿಕ ನಂಬಿಕೆಯ ಸಾಕ್ಷ್ಯವಾಗಿದೆ.

ಪರಮಪದದೊಳಗೆ ವಿಷಧರನ ತಲ್ಪದಲಿ ನೀ
ಸಿರಿಸಹಿತ ಕ್ಷೀರವಾರಿಧಿಯೊಳಿರಲು
ಕರಿರಾಜ ಕಷ್ಟದಲಿ ಆದಿಮೂಲ ಎಂದು
ಕರೆಯಲಾಕ್ಷಣ ಬಂದು ಒದಗಿದೆಯೊ ನರಹರಿಯೇ ॥ 1 ॥

ವಿಷ್ಣುವು ವೈಕುಂಠದಲ್ಲಿ, ಆದಿಶೇಷನನ್ನು ಶಯ್ಯೆಯಾಗಿ ಮಾಡಿಕೊಂಡು ಲಕ್ಷ್ಮೀದೇವಿಯೊಡನೆ ಕ್ಷೀರಸಮುದ್ರದಲ್ಲಿ ವಿಶ್ರಮಿಸುತ್ತಿದ್ದರೂ, ಗಜೇಂದ್ರನ ಸಂಕಟದ ಸಮಯದಲ್ಲಿ, 'ಆದಿಮೂಲ' ಎಂದು ಕರೆದ ತಕ್ಷಣವೇ ಬಂದು ಕಾಪಾಡಿದೆಯಲ್ಲಾ, ನೀನು ಭಕ್ತವತ್ಸಲನೇ ಸರಿ ಎನ್ನುತ್ತಾರೆ ಕನಕದಾಸರು. ಅಂತಹ ನೀನು, ನಾನು ನಿನ್ನ ಬಾಗಿಲ ಮುಂದೆಯೇ ನಿಂತು 'ಸೇವೆಯನು ಕೊಡು' ಎಂದು ಆರ್ತನಾಗಿ ಬೇಡುತ್ತಿದ್ದರೂ, ಏಕೆ ತಡಮಾಡುತ್ತಿರುವೆ? ಎಂದು ಪ್ರಶ್ನಿಸುತ್ತಿರುವಂತಿದೆ. ಇಲ್ಲಿ ಪ್ರಸ್ತಾಪಿತವಾಗಿರುವ ಗಜೇಂದ್ರಮೋಕ್ಷ ಪ್ರಸಂಗವು ಶ್ರೀಮದ್ಭಾಗವತದಲ್ಲಿ ವಿಸ್ತಾರವಾಗಿ ಉಲ್ಲೇಖವಾಗಿದೆ. ಗಜೇಂದ್ರನು ಬೇರೆ ಯಾವುದನ್ನೂ ಕುರಿತು ಚಿಂತಿಸದೆ, ಬೇರಾರನ್ನೂ ಪ್ರಾರ್ಥಿಸದೆ, ಪಾಪ–ಪುಣ್ಯಗಳ ವಿಚಾರ ಮಾಡದೆ, 'ನಿನ್ನ ಹೊರತು ನನಗೆ ಬೇರಾರೂ ಗತಿಯಿಲ್ಲ' ಅನ್ಯಥಾ ಶರಣಂ ನಾಸ್ತಿ ಎಂಬ ದೈನ್ಯದ ಕೂಗಿಗೆ ಉತ್ತರವೆಂಬಂತೆ, ಭಗವಂತನು 'ಪರಮಪದ'ದಲ್ಲಿ ಇದ್ದರೂ, ಭುವಿಗೆ ಓಡೋಡಿ ಬಂದು ಗಜೇಂದ್ರನಿಗೆ ಮೋಕ್ಷವನ್ನು ದಯಪಾಲಿಸುತ್ತಾನೆ. ಇದು ಶರಣಾದ ದೀನನ ಆರ್ತನಾದವನ್ನು ಆಲಿಸಿ ಓಡೋಡಿ ಬಂದ ಪರಮಾತ್ಮನ ಅವ್ಯಾಜ ಪ್ರೀತಿಗೆ ಸಾಕ್ಷಿಯಾಗಿದೆ. ಗಜೇಂದ್ರನ ಅಸಹಾಯಕತೆಯ ಈ ಶರಣಾಗತಿಯು ವಿಧಿವಿಧಾನರಹಿತವಾಗಿದ್ದು, ಆತನ ಸಂಪೂರ್ಣ ಅವಲಂಬನೆಯ

ಸ್ಥಿತಿಯನ್ನು ತೋರಿಸುತ್ತದೆ. ಇದುವೇ ಶರಣಾಗತಿಯ ಮೂಲತತ್ತ್ವವಾಗಿದೆ.

ಕಡುಕೋಪದಿಂ ಖಳನು ಖಡುಗವನು ಪಿಡಿದು ನಿ
ನ್ನೊಡೆಯನೆಲ್ಲಿಹನೆಂದು ಕಂಬವನು ಜಡಿಯೆ
ದೃಢಭಕುತಿಯಿಂ ಶಿಶುವು ಬಿಡದೆ ನಿನ್ನನು ಭಜಿಸೆ
ಸಡಗರದಿ ಸ್ತಂಭದಿಂದೊಡೆದೆ ನರಹರಿಯೇ ॥ 2 ॥

ದುಷ್ಟನಾದ ಹಿರಣ್ಯಕಶಿಪು ಅತಿಯಾದ ಕೋಪದಿಂದ ಕತ್ತಿ ಹಿಡಿದು 'ನಿನ್ನ ದೇವರು ಎಲ್ಲಿದ್ದಾನೆ' ಎಂದು ಅರಮನೆಯ ಕಂಬಕ್ಕೆ ಹೊಡೆದು ಪ್ರಶ್ನಿಸಿದಾಗ, ಅಚಲವಾದ ಭಕ್ತಿಯಲ್ಲಿ ನೆಲೆನಿಂತಿದ್ದ ಪ್ರಹ್ಲಾದನು ಭಯರಹಿತನಾಗಿ, ನಿನ್ನ ನಾಮಸ್ಮರಣೆಯನ್ನು ಬಿಡದೆ ಮಾಡುತ್ತಿದ್ದನು. ಅವನ ಅಚಂಚಲವಾದ ಭಕ್ತಿಯನ್ನು ಮೆಚ್ಚಿ, 'ನೀನು ತಡಮಾಡದೆ ಸಡಗರದಿಂದ ಕಂಬವನ್ನು ಒಡೆದು ನರಸಿಂಹರೂಪದಲ್ಲಿ ಪ್ರತ್ಯಕ್ಷನಾದೆಯಲ್ಲವೇ' ಎನ್ನುತ್ತಾರೆ ದಾಸರು. ಈ ಚರಣದಲ್ಲಿ ದುಷ್ಟಶಕ್ತಿಯ ಅಹಂಕಾರ, ಮಗುವಿನ ಮುಗ್ಧ ಭಕ್ತಿ ಮತ್ತು ಅದಕ್ಕೆ ಭಗವಂತನ ಪ್ರತಿಕ್ರಿಯೆಯನ್ನು ಕಾಣಬಹುದಾಗಿದೆ. ಒಟ್ಟಾರೆಯಾಗಿ, ದೇವರನ್ನೂ ಪ್ರಶ್ನಿಸುವ ನೈತಿಕ ಸ್ಥೈರ್ಯ, ದೇವರನ್ನು ನಂಬುವ ನಿರ್ಮಲ ಭಕ್ತಿ, ಭಕ್ತಿ ಇರುವ ಜಾಗದಲ್ಲಿಯೇ ದೇವನು ಪ್ರತ್ಯಕ್ಷವಾಗುವ ಅಮೇಯತೆ ಹಾಗೂ ಭಕ್ತಿಯಲ್ಲಿಯೇ ಭಗವಂತ ಅಡಗಿದ್ದಾನೆ ಎಂಬ ತತ್ತ್ವವನ್ನು ಕನಕದಾಸರು ಪ್ರತಿಪಾದಿಸಿದ್ದಾರೆ. ಇದು ದೇವರ ಸರ್ವವ್ಯಾಪಕತ್ವ ಮತ್ತು ಭಕ್ತಿ ಸಮರ್ಪಣೆಯ ತಾತ್ತ್ವಿಕ ಸಂಕೇತವಾಗಿದೆ.

ಯಮಸುತನ ರಾಣಿಗಕ್ಷಯವಸನವನಿತ್ತೆ
ಸಮಯದಲಿ ಅಜಮಿಳನ ಪೊರೆದೆ
ಸಮಯಾಸಮಯವುಂಟೆ ಭಕ್ತವತ್ಸಲ ನಿನಗೆ
ಕಮಲಾಕ್ಷ ಕಾಗಿನೆಲೆಯಾದಿ ಕೇಶವನೇ ॥ 3 ॥

ಸಭಾಮಧ್ಯದಲ್ಲಿ ಅಪಮಾನಿತಳಾಗುತ್ತಿದ್ದ ದ್ರೌಪದಿಗೆ ಅಕ್ಷಯವಸ್ತ್ರವನ್ನಿತ್ತು ಕಾಪಾಡಿದವನು ನೀನೇ ಅಲ್ಲವೇ? ಮರಣದ ಅಂಚಿನಲ್ಲಿದ್ದ ಪಾಪಿ ಅಜಾಮಿಳನನ್ನು ಕೂಡ ಸಮಯಕ್ಕೆ ಬಂದು ರಕ್ಷಿಸಿದವನು ನೀನೇ ಅಲ್ಲವೇ? ನಿನಗೆ ಇದು ಸಮಯ, ಇದು ಸಮಯವಲ್ಲ ಎಂಬ ಯಾವ ರೀತಿಯ ತಾರತಮ್ಯವೂ ಇಲ್ಲ. ಭಕ್ತನ ಕೂಗು ಕೇಳಿದ ಕ್ಷಣವೇ ದೇವರಿಗೆ ಸಮಯವಾಗುತ್ತದೆ ಎನ್ನುತ್ತಿದ್ದಾರೆ ಕನಕದಾಸರು.

ಇಡೀ ರಚನೆಯು 'ಭಕ್ತನ ಕೂಗಿಗೆ ದೇವರು ತಡಮಾಡುವನೇ' ಎಂಬ ಪ್ರಶ್ನೆಯ ಸುತ್ತ ಸಂಚರಿಸುತ್ತದೆ. ಇದಕ್ಕೆ ಪುರಾಣದ ನಾಲ್ಕು ಮಹಾನ್ ಘಟನೆಗಳ ಮೂಲಕ – ಗಜೇಂದ್ರ, ಪ್ರಹ್ಲಾದ, ದ್ರೌಪದಿ, ಅಜಾಮಿಳ – ಭಕ್ತವಾತ್ಸಲ್ಯಕ್ಕೆ ಉತ್ತರ ಹೇಳಲಾಗಿದೆ. ಈ ನಾಲ್ಕೂ ಪಾತ್ರಗಳಲ್ಲಿ ಭಕ್ತಿತತ್ತ್ವದ ಏಕಸೂತ್ರತೆಯನ್ನು ಕಾಣಬಹುದು. ಗಜೇಂದ್ರನು ಸಂಪೂರ್ಣ ಅಸಹಾಯಕನಾಗಿ, ತನ್ನ ಸ್ವಂತ ಶಕ್ತಿಯೆಲ್ಲವೂ ಸಂಪೂರ್ಣವಾಗಿ ಕುಸಿದು

ಹೋದಾಗ, 'ಆದಿಮೂಲ' ಎಂದು ಕೂಗುತ್ತ ಶರಣಾಗತನಾದಾಗ ಸ್ವಾಮಿಯು ಪ್ರತ್ಯಕ್ಷನಾಗಿ ಕಾಪಾಡುತ್ತಾನೆ. ಪ್ರಹ್ಲಾದನು ನಿರಂತರ ನಿಷ್ಠೆಯಿಂದ, ತಂದೆಯ ಹಿಂಸೆಯನ್ನು ಎದುರಿಸಿದರೂ ಶ್ರೀಮನ್ನಾರಾಯಣನ ನಾಮಸ್ಮರಣೆಯನ್ನು ಬಿಡಲಿಲ್ಲ. ಹಾಗಾಗಿ ಸ್ತಂಭದಿಂದಲೂ ದೇವರು ಪ್ರತ್ಯಕ್ಷನಾಗುತ್ತಾನೆ. ದ್ರೌಪದಿಗೆ ತಾನು ನಂಬಿದ ಎಲ್ಲ ಆಶ್ರಯಗಳೂ ನೆರವಿಗೆ ಬಾರದಾದಾಗ, 'ಕೃಷ್ಣಾ' ಎಂಬ ಶರಣಾಗತಿ ತತ್ತ್ವದಿಂದ ಆಕೆಗೆ ಅಕ್ಷಯವಸನ ಲಭಿಸುತ್ತದೆ. ಅಜಾಮಿಳನು ಜೀವನವಿಡೀ ಅಧರ್ಮದ ಜೀವನವನ್ನೇ ಸಾಗಿಸುತ್ತಿದ್ದರೂ, ಮರಣಕಾಲದಲ್ಲಿ, ಮಗನಿಗಿಟ್ಟಿದ್ದ ದೇವರ ಹೆಸರನ್ನೇ ಅನುದ್ದಿಶ್ಯವಾಗಿ ಕೊನೆಯ ಆಶ್ರಯವಾಗಿ ಕೂಗಿದರೂ ಭಕ್ತನ ಪೂರ್ವಚರಿತ್ರೆಯನ್ನು ಪರಿಗಣಿಸದೆ ಭಗವಂತನು ಪ್ರತ್ಯಕ್ಷನಾಗಿ ರಕ್ಷಿಸುತ್ತಾನೆ. ಭಕ್ತನ, ಭಕ್ತಿಯ ಸ್ವರೂಪ ಮತ್ತು ಆತನ ಸ್ಥಿತಿಗತಿ ಏನೇ ಆಗಿದ್ದರೂ, ತನ್ನ ಭಕ್ತಪರಾಧೀನತೆಗೆ ಯಾವುದೇ ಅಡ್ಡಿಆತಂಕವಾಗಲಿ, ನಿಯಮಗಳಾಗಲಿ, ಭಗವಂತನಿಗೆ ಇಲ್ಲ ಎನ್ನುವುದನ್ನು 'ನ ಮೇ ಭಕ್ತಃ ಪ್ರಣಶ್ಯತಿ' (ನನ್ನ ಭಕ್ತನು ನಾಶವಾಗುವುದಿಲ್ಲ – ಭಾಗವತ) ಮತ್ತು ಭಗವದ್ಗೀತೆಯ ಪ್ರಖ್ಯಾತ ಶರಣಾಗತಿಸೂತ್ರವಾದ 'ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ । ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥ (9.22) – ಭರವಸೆಗಳು ನನ್ನನ್ನೇ ನಂಬಿದವರಿಗೆ ಅನುಗ್ರಹ ನೀಡುವಲ್ಲಿ ತಡಮಾಡುವುದಿಲ್ಲ ಎಂಬ ಸಂದೇಶವೂ ಸಹ ಸಮಯಾಸಮಯವುಂಟೆ ಭಕ್ತವತ್ಸಲ ನಿನಗೆ' ಎಂಬ ಕನಕದಾಸರ ಮಾತಿಗೆ ಪೂರಕವಾಗಿದೆ.

ಕನ್ನಡ ಭಕ್ತಿಮಾರ್ಗದ ಕೈದೀವಿಗೆಯಾದ ದಾಸಸಾಹಿತ್ಯ ಪರಂಪರೆಯಲ್ಲಿ ಕನಕದಾಸರು ಕೇವಲ ಭಕ್ತಕವಿ ಮಾತ್ರವಲ್ಲದೆ, ಸಮಾಜವನ್ನು ತಾತ್ವಿಕ ಬೆಳಕಿನಲ್ಲಿ ಪ್ರಶ್ನಿಸಿದ ಚಿಂತಕರಾಗಿದ್ದಾರೆ. ಅವರ ಕೀರ್ತನೆಗಳು ದೇಗುಲದ ಬಾಗಿಲುಗಳನ್ನು ಮಾತ್ರ ತೆರೆಯಲಿಲ್ಲ, ಸಮಾಜದ ಅಂತರಂಗದ ಬೀಗಗಳನ್ನು ತೆರೆಯುವ ಶಕ್ತಿಯನ್ನೂ ಅವು ಹೊಂದಿವೆ. ಈ ಹಿನ್ನೆಲೆಯಲ್ಲಿ 'ಬಾಗಿಲು' ಎನ್ನುವ ರೂಪಕವು ಅತ್ಯಂತ ಗಾಢವಾದ ಅರ್ಥವನ್ನು ಹೊಂದಿದೆ. ಇಂದಿನ ಸಮಾಜದಲ್ಲಿ 'ಬಾಗಿಲು' ಹೊಸ ಹೊಸ ರೂಪವನ್ನು ತಾಳಿ ತನ್ನ ಕಬಂಧಬಾಹುವನ್ನು ವಿಸ್ತರಿಸಿದೆ. ಜಾತಿಯ ಬಾಗಿಲು, ಹಣದ ಬಾಗಿಲು, ರಾಜಕೀಯದ ಬಾಗಿಲು ಮತ್ತು ಢೋಂಗಿಯ ಬಾಗಿಲು – ಇವೆಲ್ಲವೂ ಕನಕದಾಸರು ಅಂದು ಎತ್ತಿದ್ದ ಪ್ರಶ್ನೆಯನ್ನು ಇಂದಿಗೂ ಇನ್ನಷ್ಟು ತೀವ್ರಗೊಳಿಸುತ್ತವೆ. ಈ ಹಿನ್ನೆಲೆಯಲ್ಲಿ ಕನಕದಾಸರ 'ಬಾಗಿಲು' ಒಂದು ಘಟನೆ ಮಾತ್ರವಾಗಿ ಉಳಿಯದೆ ಭಕ್ತಿಯ ಪ್ರಶ್ನೆಯಾಗಿ, ಭಕ್ತನ–ಭಗವಂತನ ಪ್ರಶ್ನೆಯಾಗಿ, ಸಮಾಜದ ಪ್ರಶ್ನೆಯಾಗಿ ಪ್ರತಿಯೊಂದು ಜೀವಿಯ ಅಂತರಂಗದ ಅಳಲಿನ ಅಭಿವ್ಯಕ್ತಿಯಾಗಿ ಸದಾ ಉಳಿಯುತ್ತದೆ. ಬಾಗಿಲು ಹೊರಗಿಲ್ಲ; ಅದು ನಮ್ಮೊಳಗೇ ಇದೆ. ದೇವಾಲಯದ ಬಾಗಿಲನ್ನು ಬೇಕಾದರೆ ಮುಚ್ಚಬಹುದು. ಆದರೆ ಭಕ್ತಿಯ ಬಾಗಿಲು ಮುಚ್ಚಿದರೆ! ಅದಕ್ಕೆ ದೇವರು ಕಾರಣನಲ್ಲ, ಈ ದೃಷ್ಟಿಯಲ್ಲಿ ಈ 'ಬಾಗಿಲು' ರೂಪಕವು

ನಮ್ಮ ಮುಂದೆ ಮಹತ್ವದ ಪ್ರಶ್ನೆಯೊಂದನ್ನು ಮತ್ತೆಮತ್ತೆ ಎತ್ತುತ್ತಲೇ ಇರುತ್ತದೆ. 'ನೀನು ನಿಜವಾಗಿ ದೇವರನ್ನು ಹುಡುಕುತ್ತಿದ್ದೀಯಾ ಅಥವಾ ನಿನ್ನ ಅಹಂಕಾರವನ್ನು ಉದ್ದೀಪನಗೊಳಿಸುತ್ತಿದ್ದೀಯಾ?' ಈ ಪ್ರಶ್ನೆಗೆ ಪ್ರಾಮಾಣಿಕ ಉತ್ತರವು ಹೊರಬಂದಾಗ ಭಗವಂತನ 'ಬಾಗಿಲು' ತಾನಾಗಿಯೇ ತೆರೆಯುತ್ತದೆ.

ಹರಿಯ ನೆನೆದಿರಲು ಭಯವೆಲ್ಲಿಹುದು ನೇಹಿಗನೆ
ಮೊರೆಯ ಲಾಲಿಸಲೊಡನೆ ಸಲಹುತಿಹ ಬಂಧು।
ಕರೆದವನ ಪೂಜಿಸಲು ಜನ್ಮ ಪಾವನವಕ್ಕು
ಮರೆಯದಿರು ನೀನವನ – ಪುಟ್ಟ ಕಂದ ॥

ಎಂಬ ವಿ.ಬಿ. ಕುಳವರ್ಮ ಕುಂಬ್ಳೆಯವರ ಮುಕ್ತಕದ ಸಾಲುಗಳು ಕನಕದಾಸರ ಮೂಲ ಆಶಯಕ್ಕೆ ಪೋಷಕವಾಗಿವೆ. ಸದಾ ಮನನೀಯವಾಗಿವೆ.

□

ಬಸವನ ಭಕ್ತಿ ಕೊಟ್ಟಣದಮನೆ
ಸಿರಿಯಾಳನ ಭಕ್ತಿ ಕಸಬುಗೇರಿ
ಸಿಂಧುಬಲ್ಲಾಳನ ಭಕ್ತಿ ಪರದಾರದ್ರೋಹ
ಉಳಿದಾದ ಅಟಮಟ ಉದಾಸೀನ ದಾಸೋಹವ ಮಾಡುವವರ
ದೈನ್ಯವೆಂಬ ಭೂತ ಸೋಂಕಿತು
ಮಣ್ಣಿನ ಮನೆಯ ಕಟ್ಟಿ
ಮಾಯಾ ಮೋಹಿನಿಯೆಂಬ ಮಹೇಂದ್ರಜಾಲದೊಳಗಾಗಿ
ಮಾಡುವ ಮಾಟ
ಭಕ್ತನಲ್ಲಿ ಉಂಡು ಉದ್ದಂಡವೃತ್ತಿಯಲ್ಲಿ ನಡೆವವರು ಶಿವನಲ್ಲ
ಇವರು ದೇವಲೋಕ ಮರ್ತ್ಯಲೋಕಕ್ಕೆ ಹೊರಗು
ಶ್ರೀಗಿರಿ ಚೆನ್ನಮಲ್ಲಿಕಾರ್ಜುನಾ
ನನ್ನ ಭಕ್ತಿ ನಿನ್ನೊಳಗೈಕ್ಯವಾಯಿತ್ತಾಗಿ ನಿರ್ವಯಲಾದೆ ಕಾಣಾ

ಅಕ್ಕಮಹಾದೇವಿ

ಶರಣರ ಗುಣಲಕ್ಷಣಗಳು

ಎಚ್.ಎಸ್. ಸಿದ್ಧಗಂಗಪ್ಪ

ಶರಣ ಶಬ್ದವು ಮೂಲತಃ ಸಂಸ್ಕೃತ ಭಾಷೆಗೆ ಸೇರಿದುದು. ಶರಣ ಶಬ್ದವು ವೇದಗಳಲ್ಲಿ, ಮಹಾಭಾರತದಲ್ಲಿ, ವೈದಿಕ ಮತ್ತು ಬೌದ್ಧ ಧರ್ಮಗಳಲ್ಲಿ ವ್ಯಾಪಕವಾಗಿ ಬಳಕೆಯಾಗಿದೆ. ಶರಣ ಪದದಿಂದ ಶರಣಾರ್ಥಿ, ಶರಣಾಗತ, ಶರಣ, ಶರಣೆ, ಶರಣಪಥ, ಶರಣಗೋಷ್ಠಿ, ಶರಣಾನುಭಾವ ಮುಂತಾದ ಪದಗಳು ಬೆಳೆದುಬಂದಿವೆ.

ಕರ್ನಾಟಕದ ಪ್ರಮುಖ ಧರ್ಮವೂ ಭಾರತದ ವಿಶಿಷ್ಟ ಧರ್ಮಗಳಲ್ಲಿ ಒಂದು ಎಂದು ಪರಿಗಣಿತವಾಗಿರುವ ವೀರಶೈವ ಅಥವಾ ಲಿಂಗಾಯತ ಧರ್ಮದಲ್ಲಿಯೂ 'ಶರಣ' ಎಂಬ ಪದಕ್ಕೆ ವಿಶೇಷ ಅರ್ಥವಿದೆ. ಅದು ಈ ಧರ್ಮವನ್ನು ಒಪ್ಪಿಕೊಂಡ ಭಕ್ತರನ್ನು ಮಾತ್ರವಲ್ಲದೆ, ಈ ಧರ್ಮವು ಪ್ರಾರಂಭವಾದ ಹನ್ನೆರಡನೆಯ ಶತಮಾನದ ಒಂದು ಸಾಮಾಜಿಕ–ಧಾರ್ಮಿಕ ಸ್ವರೂಪದ ಆಂದೋಲನದ ಸಂದರ್ಭದಲ್ಲಿ ಅಂದಿನ ಶ್ರೇಣೀಕೃತ ವ್ಯವಸ್ಥೆಯ ವಿವಿಧ ಸಾಮಾಜಿಕ ಸ್ತರಗಳಿಗೆ ಸೇರಿದ ಶ್ರೀಸಾಮಾನ್ಯರು ತಮ್ಮ ಪೂರ್ವಚಹರೆಗಳನ್ನು ಕಳೆದುಕೊಂಡು ಸಮಾನತೆಯ ನೆಲೆಯೊಂದರಲ್ಲಿ ಪಡೆದುಕೊಂಡ ಹೊಸ ವ್ಯಕ್ತಿತ್ವದ ಹೆಸರೂ ಆಗಿದೆ. ಅಂದರೆ ಅವರೆಲ್ಲರೂ ಮೂಲತಃ ಶರಣರು, ಅವರಿಂದ ನಡೆದುದು ಶರಣ ಚಳವಳಿ. ವಚನಗಳಲ್ಲಿ ವಿಪುಲವಾಗಿ ಕಾಣಬಹುದಾದ ಪದ ಎಂದರೆ 'ಶರಣ' ಎನ್ನುವುದೇ. ಈ ಶರಣ ಚಳವಳಿಯ ಕೇಂದ್ರವ್ಯಕ್ತಿಯಾದ ಬಸವಣ್ಣನವರ ವಚನಗಳಲ್ಲಿ ಉಳಿದೆಲ್ಲ ಪದಗಳಿಗಿಂತಲೂ 'ಶರಣ' ಎಂಬ ಪದವೇ ವಿಪುಲ ಸಂಖ್ಯೆಯಲ್ಲಿ ದೊರೆಯುತ್ತದೆ. ಡಾ. ಎಸ್.ಆರ್. ಗುಂಜಾಳ್ ಅವರು ಸಂಪಾದಿಸಿರುವ ಬಸವಣ್ಣನವರ ವಚನ ಪದಪ್ರಯೋಗ ಕೋಶ (1973, ಪ್ರ: ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಉಳವಿ ರಸ್ತೆ, ಧಾರವಾಡ–3) ಇದಕ್ಕೆ ಪುಷ್ಟಿಯನ್ನು ನೀಡುತ್ತದೆ. ಬಸವಣ್ಣನವರ ಸುಮಾರು 950 ವಚನಗಳ ವಿವಿಧ ನುಡಿಗಟ್ಟುಗಳನ್ನು ಪಟ್ಟಿ ಮಾಡಿರುವ ಈ ಪದಕೋಶದಲ್ಲಿ 230 ವಚನಗಳಲ್ಲಿ 'ಶರಣ' ಎಂಬ ಪದ ಹಲವು ಅರ್ಥಚ್ಛಾಯೆಗಳಲ್ಲಿ ಕಾಣಿಸಿಕೊಂಡಿದೆ.

ಎರಡು ಸಾವಿರದ ಆರುನೂರು ವರ್ಷಗಳ ಹಿಂದೆ ಭಗವಾನ್ ಬುದ್ಧನ ಕಾಲದಲ್ಲಿ ಮತ್ತು ಅನಂತರ ಇದೊಂದು ಮಂತ್ರಘೋಷದಂತೆ ಭಾರತಾದ್ಯಂತ ಮೊಳಗಿದ ಪದ 'ಶರಣಂ ಗಚ್ಛಾಮಿ', 'ಸಂಘಂ ಶರಣಂ ಗಚ್ಛಾಮಿ', 'ಧರ್ಮ ಶರಣಂ ಗಚ್ಛಾಮಿ'. ಅಂದರೆ

'ಬುದ್ಧನಲ್ಲಿ ನಾನು ಶರಣು ಹೋಗುತ್ತೇನೆ, ಸಂಘದಲ್ಲಿ ಶರಣು ಹೋಗುತ್ತೇನೆ, ಧರ್ಮದಲ್ಲಿ ಶರಣು ಹೋಗುತ್ತೇನೆ' ಮತ್ತು ಹಲವು ಸ್ತರಗಳಲ್ಲಿ ಬಳಕೆಗೊಂಡಿದ್ದು ಹಾಗೂ ವ್ಯಾಖ್ಯಾನಿತವಾಗಿದ್ದು ಹನ್ನೆರಡನೇ ಶತಮಾನದ ಶರಣ ಚಳವಳಿಯ ಸಂದರ್ಭದಲ್ಲಿ. ಇಲ್ಲಿಯೂ 'ಶರಣ' ಎಂಬ ಪದ ಈ ಒಂದು ಧರ್ಮವನ್ನು ಒಪ್ಪಿಕೊಂಡವನು ಅಥವಾ ಆಶ್ರಯಿಸಿದವನು ಎಂಬ ಅರ್ಥವನ್ನು ಸೂಚಿಸುವುದರ ಜೊತೆಗೆ, ಒಂದು ವಿಶೇಷ ಅರಿವಿನ ಸ್ಥಿತಿಗೆ ಏರಿದ ಮನಸ್ಸಿನ ಲಕ್ಷಣಕ್ಕೆ ಸಂಕೇತವಾಗಿದೆ. ಇಲ್ಲಿ ಶರಣ ಎಂದರೆ ದೈವಕ್ಕೆ ಶರಣು ಹೋದವನು, ಭಕ್ತ ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಶಿವಭಕ್ತ ಎಂಬ ಅರ್ಥದಲ್ಲಿಯೂ ಬಳಕೆಯಾಗುತ್ತಿದೆ. ಶರಣ ಪದದ ಹಿಂದೆ ಶಿವ ಸೇರದೆ ಬಳಕೆಯಾದರೆ ಶಿವಭಕ್ತಿ ಎಂಬ ಅರ್ಥವ್ಯಾಪ್ತಿಯನ್ನು ಪಡೆದುಕೊಳ್ಳುತ್ತದೆ. ಅಲ್ಲದೆ ಷಟ್‌ಸ್ಥಲಗಳಲ್ಲಿ ಐಕ್ಯಸ್ಥಲದ ಉದಾಂತಸ್ಥಲದ ಸಾಧನೆಯ ಒಂದು ಹಂತವಾಗಿ 'ಶರಣಸ್ಥಲ'ವನ್ನು ಪರಿಭಾವಿಸಲಾಗಿದೆ. ಇಂಥ ನೆಲೆಗೆ ಏರಿದ ಶರಣನನ್ನು ಕುರಿತು ಬಸವಣ್ಣನವರು 'ಅರಿದಡೆ ಶರಣ, ಮರೆದಡೆ ಮಾನವ' ಎಂದು ಹೇಳಿರುವುದು ಕಂಡುಬರುತ್ತದೆ.

ಕರ್ಮಯೋಗಿ ಸಿದ್ಧರಾಮ ತನ್ನ ಒಂದು ವಚನದಲ್ಲಿ ಶರಣ ಶಬ್ದಕ್ಕೆ ವಿಶಿಷ್ಟ ಅರ್ಥವನ್ನು ನೀಡಿದ್ದಾನೆ.

ಶರಣ ಎಂಬ ಶಬ್ದವಂತಿಂತಲ್ಲ
[ನೋಣಃ] ಎಂಬ ಸೂತ್ರದಿಂದ ಶರಣನೆನಿಸಿದನು
ಶರ ಎಂದರೆ ಬಾಣ, ನ ಎಂದಂತ ಅಂಥ ಮನ್ಮಥಬಾಣವಿಲ್ಲದವ
[ಅವ]ನೇ ಶರಣ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನ.
ಸಂ. ಆರ್.ಸಿ. ಹಿರೇಮಠ (ಶ್ರೀ ಸಿದ್ಧರಾಮೇಶ್ವರ ವಚನಗಳು, 1137)

ಸಿದ್ಧರಾಮನ ಅಭಿಪ್ರಾಯದಂತೆ ಒಬ್ಬ ಶರಣನಾದವನು ಮನ್ಮಥನ ಬಾಣವಿಲ್ಲದವನು ಎಂದರೆ ಮನ್ಮಥನ ಬಾಣಕ್ಕೆ ಎದುರಾಗದವನು ಅಥವಾ ತುತ್ತಾಗದವನು ಎಂದು ಪರಿಭಾವಿಸಬಹುದು. ಇಲ್ಲಿ ಸಿದ್ಧರಾಮ ನೈತಿಕತೆಗೆ ಪ್ರಾಶಸ್ತ್ಯ ನೀಡಿದ್ದಾನೆ. ಹೆಚ್ಚಿನ ವಚನಕಾರರೆಲ್ಲರೂ ಶರಣರ ಘನವ್ಯಕ್ತಿತ್ವವನ್ನು, ನಾನಾ ಮುಖಗಳನ್ನು, ಗುಣಸ್ವರೂಪಗಳನ್ನು ತಮ್ಮ ನೂರಾರು ವಚನಗಳಲ್ಲಿ ನಿರೂಪಿಸಿದ್ದಾರೆ. ಅವುಗಳಲ್ಲಿ ಕೆಲವು ವಚನಗಳನ್ನು ಗಮನಿಸುವ ಮೂಲಕ ವಚನಕಾರರಲ್ಲಿ ಶರಣ ಪರಿಕಲ್ಪನೆಯನ್ನು ಪರಿಭಾವಿಸಬಹುದು.

ನೀರಿಂಗೆ ನೈದಿಲೆಯೆ ಶೃಂಗಾರ
ಸಮುದ್ರಕ್ಕೆ ತೆರೆಯೆ ಶೃಂಗಾರ
ನಾರಿಗೆ ಗುಣವೆ ಶೃಂಗಾರ
ಗಗನಕ್ಕೆ ಚಂದ್ರಮನೆ ಶೃಂಗಾರ
ನಮ್ಮ ಕೂಡಲಸಂಗನ ಶರಣರಿಗೆ
ನೊಸಲ ವಿಭೂತಿಯೆ ಶೃಂಗಾರ

ಈ ವಚನವು ಶರಣರ ಬಾಹ್ಯ ಲಕ್ಷಣಗಳಲ್ಲಿ ಒಂದಾದ ವಿಭೂತಿಧಾರಣೆಯನ್ನು ಸೂಚಿಸುತ್ತದೆ. ಅಂಗದ ಮೇಲೆ ಲಿಂಗವನ್ನು ಧರಿಸುವುದೂ ಕೂಡ ಒಂದು ಪ್ರಮುಖ ಲಾಂಛನವೇ ಆಗಿತ್ತು. ಲಿಂಗಸಹಿತವಾಗಿ ಶರಣರು ಬಂದರೆ ಸಾಕ್ಷಾತ್ ಸಂಗನೇ ಬಂದುದಾಗಿ ಭಾವಿಸುವುದಾಗಿ ಬಸವಣ್ಣನವರು ಹೇಳಿದ್ದಾರೆ. ಶರಣ ಶಬ್ದ ಬಳಕೆಯಲ್ಲಿರುವ ಬಸವಣ್ಣನವರ ಕೆಲವು ವಚನಗಳನ್ನು ಗಮನಿಸಬಹುದು.

ಅತ್ತಲಿತ್ತ ಹೋಗದಂತೆ
ಹೆಳವನ ಮಾಡಯ್ಯಾ ತಂದೆ
ಸುತ್ತಿ ಸುಳಿದು ನೋಡದಂತೆ
ಅಂಧಕನ ಮಾಡಯ್ಯಾ ತಂದೆ
ಮತ್ತೊಂದ ಕೇಳದಂತೆ
ಕಿವುಡನ ಮಾಡಯ್ಯಾ ತಂದೆ
ನಿಮ್ಮ ಶರಣರ ಪಾದವಲ್ಲದೆ
ಅನ್ಯವಿಷಯಕ್ಕೆಳಸದಂತೆ ಇರಿಸು
ಕೂಡಲಸಂಗಮದೇವಾ

ಬಸವಣ್ಣನವರು ಶರಣರ ಬಗ್ಗೆ ಇಟ್ಟ ಪ್ರೀತಿ, ಗೌರವ ಇಲ್ಲಿ ಅನಾವರಣಗೊಂಡಿದೆ. ಅವರ ಮತ್ತೊಂದು ವಚನ ಹೀಗಿದೆ :

ಅನಂತಕಾಲ ತರು ಗಿರಿಗಳ ಹೊಕ್ಕು ತಪವ ಮಾಡುವುದರಿಂದ
ಒಂದು ದಿನ ಲಿಂಗಪೂಜೆ ಸಾಲದೆ?
ಅನಂತಕಾಲ ಲಿಂಗಪೂಜೆಯ ಮಾಡುವುದರಿಂದ
ಒಂದು ದಿನ ಗುರುಚರಣದ ಸೇವೆ ಸಾಲದೆ?
ಅನಂತಕಾಲ ಗುರುಚರಣದ ಸೇವೆಯ ಮಾಡುವುದರಿಂದ
ಒಂದು ದಿನ ಜಂಗಮಕ್ಕೆ ತೃಪ್ತಿಯ ಮಾಡುವುದು ಸಾಲದೆ?
ಅನಂತಕಾಲ ಜಂಗಮಕ್ಕೆ ತೃಪ್ತಿಯ ಮಾಡುವುದರಿಂದ
ಒಂದು ನಿಮಿಷ ಕೂಡಲಸಂಗಯ್ಯಾ
ನಿಮ್ಮ ಶರಣರನುಭಾವ ಸಾಲದೆ?

(ವಚನ (ಸಂ) ಎಂ.ಎಂ. ಕಲಬುರ್ಗಿ, ವ. 13, ಪು.6)

ಲಿಂಗಪೂಜೆ, ಗುರುಪೂಜೆ, ಜಂಗಮಪೂಜೆ ಮಾಡುವುದಕ್ಕಿಂತಲೂ ಒಂದು ನಿಮಿಷ ಶರಣರ ಅನುಭಾವದ ನುಡಿಗಳನ್ನು ಕೇಳಿದರೆ ನನ್ನ ಜನ್ಮ ಸಾರ್ಥಕವಾಗುತ್ತದೆ ಎಂದು ಬಸವಣ್ಣನವರು ಹೇಳಿದ್ದಾರೆ. ಅವರು ಒಂದು ಕಡೆ 'ಕೂಡಲಸಂಗನ ಶರಣರೊಡನೆ ಸರಸವಾಡಿದಡೆ ಅದು ವಿರಸ ಕಾಣಿರಯ್ಯಾ' ಎಂದಿದ್ದಾರೆ.

ಸಮಾಜದಲ್ಲಿ ಗೌರವ ಸ್ಥಾನವನ್ನು ಪಡೆಯಬೇಕಾದರೆ ಶರಣನಾದವನು ಹೇಗಿರಬೇಕು ಎಂಬ ಸರಳ ಸೂತ್ರವನ್ನು ಬಸವಣ್ಣನವರು ತಮ್ಮ ವಚನದಲ್ಲಿ ಅಭಿವ್ಯಕ್ತಿಗೊಳಿಸಿದ್ದಾರೆ.

ಅವರ ವಿಚಾರಗಳನ್ನು ಶರಣರು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ 'ಶರಣ' ಎಂಬ ಪದಕ್ಕೆ ಅರ್ಥ, ಬೆಲೆ ಬರುತ್ತದೆ.

ಛಲ ಬೇಕು ಶರಣಂಗೆ ಪರಧನವನೊಲ್ಲೆನೆಂಬ
ಛಲ ಬೇಕು ಶರಣಂಗೆ ಪರಸತಿಯನೊಲ್ಲೆನೆಂಬ
ಛಲ ಬೇಕು ಶರಣಂಗೆ ಪರದೈವವನೊಲ್ಲನೆಂಬ
ಛಲ ಬೇಕು ಶರಣಂಗೆ ಲಿಂಗಜಂಗಮನೆಂಬ
ಛಲ ಬೇಕು ಶರಣಂಗೆ ಪ್ರಸಾದ ದಿಟವೆಂಬ
ಛಲವಿಲ್ಲದವರ ಮೆಚ್ಚ ಕೂಡಲಸಂಗಮದೇವ (ವಚನ., ವ.ಸಂ. 196, ಪು. 46)

ಈ ಸರಳವಾದ ವಚನದಲ್ಲಿ ವಿಶೇಷವಾದ ಅರ್ಥ ಅಡಗಿದೆ. ಇದಕ್ಕೆ ಮತ್ತೆ ವಿವರಣೆಯ ಅಗತ್ಯವಿಲ್ಲವೆನಿಸುತ್ತದೆ.

ಸತ್ತ ಬಳಿಕ ಮುಕ್ತಿಯ ಪಡೆದಹೆನೆಂದು ಪೂಜಿಸಿ ಹೋದಡೆ
ಆ ದೇವರೇನ ಕೊಡುವನು?
ಸಾಯದೆ ನೋಯದೆ ಸ್ವತಂತ್ರನಾಗಿ ಸಂದುಭೇದವಿಲ್ಲದಿಪ್ಪ
ಗುಹೇಶ್ವರಾ ನಿಮ್ಮ ಶರಣ

ಅಲ್ಲಮನ ಈ ವಚನ, ಸತ್ತ ಮೇಲೆ ಮುಕ್ತಿಯನ್ನು ಪಡೆಯಬೇಕು ಎಂದು ದೇವರನ್ನು ಪ್ರಾರ್ಥಿಸುತ್ತಾ ಹೋದರೆ, ಆ ದೇವರು ಏನನ್ನು ತಾನೆ ಕೊಟ್ಟಾನು? ಸಾಯುವುದಕ್ಕೆ ಮೊದಲು ಬದುಕಿ, ಇದ್ದಾಗ ಯಾವ ನೋವನ್ನೂ ಅನುಭವಿಸದೆ, ಯಾವುದೇ ಅಪಚಾರವಾಗದಂತೆ, ಯಾವುದೇ ರೀತಿಯ ವ್ಯತ್ಯಾಸವಾಗದಂತೆ ಸಮಾಧಾನದ ಮನಸ್ಸಿನಿಂದ ಕೂಡಿರುವವನೇ ನಿಜವಾದ ಶರಣ. ಸತ್ತ ಮೇಲೆ ಮುಕ್ತಿ ಪಡೆಯುವುದಕ್ಕಿಂತ ಅವನಿಗೆ ಬದುಕಿದ್ದಾಗಲೇ ಮುಕ್ತನಾಗಿರಬೇಕು ಎಂಬ ಸಂಕಲ್ಪ. ಇಂಥ ಶರಣರಿಗೆ ಯಾವ ಕೊರತೆಗಳೂ ಇಲ್ಲ, ಭೇದಭಾವಗಳೂ ಇಲ್ಲ. ಅವರಿದ್ದ ಜಾಗವೇ ಕೈಲಾಸ.

ಶರಣರು ಸನ್ಯಾಸಿಗಳಂತೆ ಸರ್ವಸಂಗ ಪರಿತ್ಯಾಗಿಗಳಲ್ಲ. ಶರಣನ ಸ್ವರೂಪವನ್ನು ಜ್ಞಾನನಿಧಿ ಚೆನ್ನಬಸವಣ್ಣನವರು ಹೀಗೆ ಸಾದರಪಡಿಸುತ್ತಾರೆ.

ಬೇಕೆನಲಾಗದು ಶರಣಂಗೆ, ಬೇಡೆನಲಾಗದು ಶರಣಂಗೆ,
ಬಂದ ಸುಖವನತಿಗಳೆಯಲಾಗದು ಶರಣಂಗೆ,
ಇದು ಕಾರಣ, ಕೂಡಲ ಚೆನ್ನಸಂಗಯ್ಯಾ ನಿಮ್ಮ ಶರಣರು
ಉಂಡು ಉಪವಾಸಿಗಳು, ಬಳಸಿ ಬ್ರಹ್ಮಚಾರಿಗಳು.

(ವಚನ, ಸಂ. ಡಾ. ಎಂ.ಎಂ. ಕಲಬುರ್ಗಿ, ಚೆ.ವ. 193, ಪು.207)

ಎಲ್ಲ ಮನುಷ್ಯರೂ ಸಾಮಾನ್ಯ ಸ್ವರೂಪವನ್ನು ಉಳ್ಳವರಾದರೂ ಅವರು ಜೀವನದಲ್ಲಿ ಅಳವಡಿಸಿಕೊಂಡ ಸಂಸ್ಕಾರ, ಆ ಸಂಸ್ಕಾರದ ಮೇಲೆ ಶರಣನಾಗುವ ಅಥವಾ ಆಗದಿರುವ

ಸ್ಥಿತಿ ಲಭಿಸುತ್ತದೆ. ಚೆನ್ನಬಸವಣ್ಣನವರು ಮತ್ತೊಂದು ವಚನದಲ್ಲಿ ಶರಣರನ್ನು ಕುರಿತು ಹೀಗೆ ನಿರೂಪಿಸಿದ್ದಾರೆ :

ಲೋಕವನು ಹೊದ್ದ, ಲೌಕಿಕವ ಬೆರಸ, ಏಕಗ್ರಾಹಿ ಶರಣ
ಲಿಂಗವ ಪೂಜಿಸಿ ಅನ್ಯವನರಿಯದ ಅಚ್ಚಲಿಂಗೈಕ್ಯ
ಕೂಡಲಚೆನ್ನಸಂಗಾ ನಿಮ್ಮ ಶರಣ
(ವಚನ, ಸಂ. ಡಾ. ಎಂ.ಎಂ. ಕಲಬುರ್ಗಿ, ಚೆ.ವ. 246, ಪು.221)

ಚೆನ್ನಬಸವಣ್ಣನವರ ದೃಷ್ಟಿಯಲ್ಲಿ ಶರಣನಾದವನು ಲೋಕಕ್ಕೆ ಅಂಟಿದವನಲ್ಲ. ಆಸೆ, ಅಧಿಕಾರ, ಪದವಿ, ಐಶ್ವರ್ಯ ಇವುಗಳಿಗೆ ಅಂಟಿಕೊಂಡವನಲ್ಲ. ಲೋಕದ ವ್ಯವಹಾರವನ್ನು ಆಧ್ಯಾತ್ಮಿಕ ವ್ಯವಹಾರಗಳಿಗೆ ಬೆರೆಸಿ ಹಾಳು ಮಾಡುವವನಲ್ಲ. ಭಕ್ತಿಯ ಲೋಕದಲ್ಲಿ ಇದ್ದು ಇವರು ನನ್ನ ಅಣ್ಣ, ಇವರು ನನ್ನ ಬಂಧು ಇಂಥ ಲೌಕಿಕದ ಸಂಬಂಧವನ್ನು ಬಳಸಿ ವ್ಯವಹಾರ ಮಾಡುವುದಿಲ್ಲ. ಅಷ್ಟೇ ಅಲ್ಲ, ಅವನು ಶಿವನೊಬ್ಬನನ್ನೇ ಪ್ರೀತಿಸಿದ ಭಕ್ತ. ಯಾರು ಯಾರನ್ನೋ ಯಾವುದು ಯಾವುದನ್ನೋ ದೇವರು ಎಂದು ಭ್ರಮಿಸದೆ ತನ್ನ ಕೂಡಲಚನ್ನಸಂಗ ದೇವನೊಬ್ಬನನ್ನೇ ಒಲಿದ ಭಕ್ತ. ತನ್ನ ಇಷ್ಟಲಿಂಗವನ್ನು ಬಿಟ್ಟು ಇನ್ನೇನನ್ನೂ ಆತ ಪೂಜಿಸುವುದಿಲ್ಲ. ಅದೇ ಅವನಿಗೆ ಕಾಶಿಯ ವಿಶ್ವೇಶ್ವರ, ಶ್ರೀಶೈಲದ ಮಲ್ಲಿಕಾರ್ಜುನ ಎಲ್ಲವೂ ಆಗಿದೆ. ಇಷ್ಟಲಿಂಗವನ್ನು ಬಿಟ್ಟು ಬೇರೇನನ್ನೂ ಅವನು ಅರಿಯನು. ಪರಿಶುದ್ಧನಾಗಿ ಲಿಂಗದಲ್ಲಿ ಬೆರೆತು ಹೋದವನು ಶರಣ ಎಂದರೆ ನಿಜವಾಗಿ ಅವನೇ.

ಅಲ್ಲಮಪ್ರಭು ಶರಣರ ನಡೆಯನ್ನು ಅರ್ಥಪೂರ್ಣವಾಗಿ ವಿಶ್ಲೇಷಿಸಿದ್ದಾರೆ :

ಅಂಗದ ಕಳೆ ಲಿಂಗದಲ್ಲಿ ಅರತ ಬಳಿಕ
ಅಂಗವೆಂಬ ಶಂಕೆಯಿಲ್ಲ ನೋಡಾ ಶರಣಂಗೆ
ಪ್ರಾಣದ ಕಳೆ ಅರಿವಿನಲ್ಲಿ ಅರತ ಬಳಿಕ
ಶಬ್ದಸಂದಣಿಗೆ ಹಂಗಿಲ್ಲ ನೋಡಾ
ಶರಣ ನಡೆದಡೆ ನಿರ್ಗಮನಿ, ನುಡಿದಡೆ ನಿಶ್ಶಬ್ದಿ!
ಗುಹೇಶ್ವರನ ಶರಣಂಗೆ ಕುರುಹಿಲ್ಲ ಕೇಳಾ ಎಲೆ ಅವ್ವಾ
(ವಚನ, ಸಂ. ಡಾ. ಎಂ.ಎಂ. ಕಲಬುರ್ಗಿ, ಚೆ.ವ. 434, ಪು.99)

ಮಹಾಶರಣೆ ಅಕ್ಕಮಹಾದೇವಿ ಕೌಶಿಕನಿಂದ ದೂರವಾಗಿ, ಮಲ್ಲಿಕಾರ್ಜುನನೇ ತನ್ನ ಪತಿಯೆಂದು ತನುಮನಗಳಲ್ಲಿ ಧ್ಯಾನಿಸುತ್ತಾ, ಬಸವಣ್ಣನವರನ್ನು ಕಂಡು ಆಶೀರ್ವಾದ ಪಡೆಯಲು ಕಲ್ಯಾಣಕ್ಕೆ ಬರುತ್ತಾಳೆ. ಕಲ್ಯಾಣದಲ್ಲಿ ಅಲ್ಲಮಪ್ರಭುವಿನ ನೇತೃತ್ವದಲ್ಲಿ ನಡೆಯುತ್ತಿದ್ದ ಅನುಭವಮಂಟಪದಲ್ಲಿ ಅನೇಕ ಪ್ರಶ್ನೆಗಳಿಗೆ ಒಳಗಾಗುತ್ತಾಳೆ. ಅನುಭಾವದ ಮೇರುಶಿಖರ ಅಲ್ಲಮಪ್ರಭು ಅಕ್ಕಮಹಾದೇವಿಯನ್ನು ಪರೀಕ್ಷೆಗೊಡ್ಡಿ ಅವಳ ವೈರಾಗ್ಯವನ್ನು ಲೋಕಕ್ಕೆ ಪ್ರಚುರಪಡಿಸಲು ಆಧ್ಯಾತ್ಮಿಕತೆಯ ಹಿನ್ನೆಲೆಯಲ್ಲಿ ಪ್ರಶ್ನೆಗಳನ್ನು ಕೇಳಿ ಅವಳಿಂದ ಸೂಕ್ತವಾದ ಉತ್ತರವನ್ನು ಪಡೆದು ಸಂತುಷ್ಟನಾಗಿ ಶರಣೆನ್ನುತ್ತಾನೆ.

ಹರಿವ ನದಿಗೆ ಮೈಯೆಲ್ಲಾ ಕಾಲು
ಉರಿವ ಕಿಚ್ಚಿಗೆ ಮೈಯೆಲ್ಲಾ ನಾಲಗೆ
ಬೀಸುವ ಗಾಳಿಗೆ ಮೈಯೆಲ್ಲಾ ಕೈ
ಗುಹೇಶ್ವರಾ ನಿಮ್ಮ ಶರಣಂಗೆ, ಸರ್ವಾಂಗವೆಲ್ಲ ಲಿಂಗ (ವ.631, ಪು. 145)

ಎಂದು ಹೇಳುವಲ್ಲಿ ಅಲ್ಲಮಪ್ರಭು ಪ್ರಾಣಲಿಂಗಿಯ ಸ್ವರೂಪವನ್ನೇ ವರ್ಣಿಸಿದ್ದಾನೆ.

ಪ್ರಾಣಲಿಂಗಿ ಸ್ಥಲದಲ್ಲಿ ಸಾಧಕನು ಊರ್ಧ್ವಮುಖವಾಗಿ ಅದ್ವೈತದ ಕಡೆಗೆ ದೃಷ್ಟಿಯನ್ನು ಬೀರುವುದನ್ನು ಕಂಡರೆ, ಶರಣ ಸ್ಥಲದಲ್ಲಿ ಆ ಅದ್ವೈತದ ಅನುಭಾವವನ್ನು ಕಾಣುತ್ತೇವೆ. "ಸ್ವಾನುಭವದೊಳಗಣ ಅರಿವಿನಿಂ ಶರಣನಾಗಿ" ಎಂದು ಅಲ್ಲಮಪ್ರಭು ಈ ಸ್ಥಿತಿಯನ್ನು ಸೂಚಿಸಿದ್ದಾರೆ. ಇದುವರೆಗೂ ಬುದ್ಧಿಗೋಚರವಾಗಿದ್ದ ಸತ್ಯದ ಸ್ವರೂಪ ಇಲ್ಲಿ ಅನುಭವ ಗೋಚರವಾಗುತ್ತದೆ. ಈ ಸೃಷ್ಟಿ ವಿನ್ಯಾಸ ಕಾರಣನಾದ ಲೀಲಾಸ್ವರೂಪಿ ಶಿವನ ಒಂದು ಚಿದಂಶವೇ ತಾನೆಂಬುದು ಶರಣನಿಗೆ ಅಪ್ರಯತ್ನಪೂರ್ವಕವಾದ ಸಹಜ ಸ್ಥಿತಿಯಾಗಿ ಪರಿಣಮಿಸುತ್ತದೆ. ಆ ಸಹಜ ಸ್ವರೂಪ ಜ್ಞಾನದಿಂದ ಅವನು ತನ್ನ ಕರ್ಮಬಂಧನಗಳಿಂದಲೂ ಮಲಪಾಶಗಳಿಂದಲೂ ಬಿಡುಗಡೆಯನ್ನು ಪಡೆದು "ಇದ್ದು ಬದ್ಧನಲ್ಲ ಸುಳಿದು ಸೂತಕಿಯಲ್ಲ" ಎಂಬ ಜೀವನ್ಮುಕ್ತ ಸ್ಥಿತಿಗೆ ಬರುತ್ತಾನೆ.

ಸಾಧಕನ ಕೊನೆಯ ಸ್ಥಿತಿ ಐಕ್ಯಸ್ಥಲ. ಅನಂತಭಕ್ತಿಯಿಂದ ಲಿಂಗಸ್ವರೂಪವೇ ತಾನೆಂದು ಕಂಡುಕೊಂಡ ಶರಣ ಇಲ್ಲಿ ಸಮರಸಭಕ್ತಿಯಿಂದ ಲಿಂಗದಲ್ಲಿ ಬೆರೆತು ತಾನೂ ಲಿಂಗಸ್ವರೂಪನಾಗಿ ಪರಿಣಮಿಸುತ್ತಾನೆ. ಇದು ಅನುಭಾವದ ಕೊನೆಯ ಹಂತ. ಇದೇ ಲಿಂಗಾಂಗಸಾಮರಸ್ಯ. "ಘೃತ ಘೃತವ ಬೆರೆಸಿದಂತೆ, ತೈಲ ತೈಲವ ಬೆರೆಸಿದಂತೆ, ನೀರು ನೀರ ಬೆರೆಸಿದಂತೆ, ಜ್ಯೋತಿಯು ಜ್ಯೋತಿಯ ಬೆರೆಸಿದಂತೆ, ಬಯಲು ಬಯಲ ಬೆರೆಸಿದಂತೆ, ಪ್ರಾಣ ಪ್ರಾಣಸಂಯೋಗವಾದ ಶರಣಲಿಂಗ ಸಮರಸವೇನೆಂಬೆನಯ್ಯಾ ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ" ಎಂದು ಹೇಳುವ ತೋಂಟದ ಸಿದ್ಧಲಿಂಗೇಶ್ವರರು ಹೇಳಿರುವಂತೆ ಶರಣರ ಈ ನಿಲುವನ್ನು ವರ್ಣಿಸುತ್ತಾರೆ. ಅಂಬುಧಿಯೊಳಗೆ ಬಿದ್ದ ಆಲಿಕಲ್ಲಿನಂತೆ, ಲಿಂಗ ಸಮುದ್ರದೊಳಗೆ ಮುಳುಗಿ ಭಿನ್ನಭಾವವನ್ನು ಅಳಿದು ತಾನೂ ಸಮುದ್ರವೇ ಆಗಿ ಪರಿಣಮಿಸುತ್ತಾನೆ ಶರಣ.

ಅಲ್ಲಮ ಪ್ರಭು ಮತ್ತೊಂದು ವಚನದಲ್ಲಿ ಅಪಾರವಾದ ಅನುಭವವನ್ನು ಹಿಡಿದಿಡುವ ಅದ್ಭುತ ಶಕ್ತಿ ಬೆರಗಾಗುವಂತಹುದು.

ಸ್ವಸ್ಥಾನ ಸುಸ್ಥಿರದ ಸುಮನ ಮಂಟಪದೊಳಗೆ
ನಿತ್ಯನಿರಂಜನ ಪ್ರಭೆಯ ಬೆಳಗು
ಶಿವಯೋಗದನುಭವ ಏಕಾರ್ಥವಾಗಿ ಗುಹೇಶ್ವರಾ
ನಿಮ್ಮ ಶರಣನು ಅನುಪಮ ಸುಖಿಯಾಗಿರ್ದನು

ಶಿವಯೋಗದ ಅನುಭಾವದಲ್ಲಿ ಶರಣನು ಸುಖಿಯಾಗಿದ್ದನು ಎಂಬ ಮಾತು ಶರಣನ ಅನುಭಾವದ ಸ್ಥಿತಿಯನ್ನು ಸೂಚಿಸುತ್ತದೆ.

ಎಲ್ಲವನ್ನೂ ಶಿವನಿಗೆ ಒಪ್ಪಿಸುವ ಶರಣನಿಗೆ ಸುಖದುಃಖಗಳು ಬಂದರೂ ಅವು ಶಿವನನ್ನೇ ಸೇರುತ್ತವೆಂಬುದನ್ನು ಇನ್ನೊಂದು ವಚನದಲ್ಲಿ ಹೀಗೆ ಹೇಳಿದ್ದಾರೆ.

ತಾಯಿಗಾದ ಸುಖದುಃಖಂಗಳ ಬಸುರ ಶಿಶುವಿಂಗೆ ನೋಡಯ್ಯಾ
ಶಿವಶರಣರಿಗೆ ಮಾಡಿದ ಸುಖದುಃಖಂಗಳು ಶಿವನ ತಾಗುವವು
ಕರಣವುಳ್ಳವರು ಮರಣವಿಲ್ಲದವಂಗೆ ಮುನಿದರೆ
ತನುವುಳ್ಳವರ ಮುಟ್ಟುವುದಲ್ಲದೆ ಒಡಲಿಲ್ಲದಾತನ ಮುಟ್ಟಬಲ್ಲುದೆ?
ಗುಹೇಶ್ವರಾ ಕೆಂಡವನೊರಲೆ ಮುಟ್ಟಬಲ್ಲುದೆ?

ತಾಯಿಗಾದ ಸುಖದುಃಖಗಳು ಗರ್ಭದಲ್ಲಿರುವ ಶಿಶುವನ್ನು ಮುಟ್ಟುವಂತೆ ಶಿವಶರಣರ ಸುಖವಾಗಲಿ, ದುಃಖವಾಗಲಿ ಶಿವನನ್ನೇ ತಾಗುತ್ತವೆ. ಸಾಮಾನ್ಯರ ಕೋಪ ಶಿವಭಕ್ತರನ್ನೇನೂ ಮಾಡಲಾರದು ಎಂಬುದು ಅಲ್ಲಮರ ಅಭಿಪ್ರಾಯ. ಕೆಂಡವನ್ನು ಗೆದ್ದಲು ಮುಟ್ಟಬಲ್ಲುದೆ? ಎಂದಿದ್ದಾರೆ.

ಗುಹೇಶ್ವರ ಮತ್ತು ಶರಣರ ಎಂತಹ ಅವಿನಾಭಾವ ಸಂಬಂಧ ಎಂಬುದನ್ನು ಅಲ್ಲಮಪ್ರಭು ಒಂದು ಪ್ರಖರ ಉಪಮೆಯ ಮೂಲಕ ಸಾದರಪಡಿಸಿದ್ದಾರೆ :

ಶಿಲೆಯೊಳಗಣ ಪಾವಕನಂತೆ
ಉದಕದೊಳಗಣ ಪ್ರತಿಬಿಂಬದಂತೆ
ಬೀಜದೊಳಗಣ ವೃಕ್ಷದಂತೆ
ಶಬ್ದದೊಳಗಣ ನಿಶ್ಶಬ್ದದಂತೆ
ಗುಹೇಶ್ವರಾ ನಿಮ್ಮ ಶರಣ ಸಂಬಂಧ (ವ.ಸಂ. ಸಂ.613, ಪು. 142)

ಶಿಲೆಯೊಳಗಿನ ಬೆಂಕಿ, ನೀರಿನಲ್ಲಿ ಪ್ರತಿಬಿಂಬ, ಬೀಜದಲ್ಲಿ ವೃಕ್ಷ, ಶಬ್ದದೊಳಗೆ ನಿಶ್ಶಬ್ದ ಅಂತರ್ಗತವಾಗಿರುವಂತೆ ಹಾಗೆ ಪರಮಭಕ್ತರಾದ ಶರಣರು ಹಾಗೂ ಗುಹೇಶ್ವರನ ನಡುವಣ ಸಂಬಂಧ ಇರುತ್ತದೆ ಎಂದು ಹೇಳಿದ್ದಾರೆ.

ಬಸವಣ್ಣನವರು ತಮ್ಮ ವಚನದಲ್ಲಿ ಶರಣರ ನಡೆಯನ್ನು ಕುರಿತು ಹೀಗೆ ಹೇಳಿದ್ದಾರೆ :

ಶರಣ ನಿದ್ರೆಗೈದಡೆ ಜಪ ಕಾಣಿರೊ
ಶರಣನೆದ್ದು ಕುಳಿತರೆ ಶಿವರಾತ್ರಿ ಕಾಣಿರೊ
ಶರಣ ನಡೆದುದೇ ಪಾವನ ಕಾಣಿರೊ
ಶರಣ ನುಡಿದುದೇ ಶಿವತತ್ತ್ವ ಕಾಣಿರೊ
ಕೂಡಲಸಂಗನ ಶರಣನ
ಕಾಯವೇ ಕೈಲಾಸ ಕಾಣಿರೊ (ವ.ಸಂ. 363, ಪು.83)

ಇಂಥ ಶರಣನ ಬದುಕು ಎಷ್ಟು ಪವಿತ್ರ ಎಂದರೆ ಸರ್ವರೀತಿಯ ಪಾವಿತ್ರ್ಯವನ್ನು ಪಡೆದಿರುವಂಥದ್ದು. ಅವನು ನಿದ್ದೆ ಮಾಡುತ್ತಿದ್ದರೂ ಲೋಕಕಲ್ಯಾಣಕ್ಕಾಗಿ; ಅವನು ಜಪ ಮಾಡುತ್ತ ಇದ್ದ ಹಾಗೆ. ಅವನ ನಿದ್ದೆ ಕೂಡ ಅಷ್ಟೇ ಪವಿತ್ರ, ಪೂಜೆಗೆ ಕುಳಿತ ಹಾಗೆ. ಅವನು ನಡೆದ ಎಂದರೆ ಅದು ಕೈಲಾಸವನ್ನು ಸೇರುವ ನಡಿಗೆ ಇದ್ದ ಹಾಗೆ. ಅಂಥ ಶರಣ ಮಾತನಾಡಿದರೆ ಶಿವನ ರಹಸ್ಯವನ್ನು ನಮಗೆ ಬಿಡಿಸಿ ತೋರುವುದು. ಕೈಲಾಸವನ್ನು ನೋಡಲು ಎಲ್ಲಿಗೂ ಹೋಗಬೇಕಾಗಿಲ್ಲ. ಅವನನ್ನು ಮುಟ್ಟಿದರೆ ಸಾಕು, ಶಿವಸ್ಪರ್ಶವಾಗುತ್ತದೆ. ಬದುಕು ಧನ್ಯತೆಯನ್ನು ಪಡೆಯುತ್ತದೆ.

ಹಡಪದ ಅಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮ ಮಹಾಶರಣೆ. ಅವಳು ಕೈಲಾಸ ಮತ್ತು ಮರ್ತ್ಯಲೋಕದ ಬಗ್ಗೆ ಶರಣರ ನಿಲುವನ್ನು ತನ್ನ ವಚನದಲ್ಲಿ ನಿರೂಪಿಸಿದ್ದಾಳೆ.

ಕೈಲಾಸ ಮರ್ತ್ಯಲೋಕ ಎಂಬರು
ಕೈಲಾಸವೆಂದಡೇನೊ ಮರ್ತ್ಯಲೋಕವೆಂದಡೇನೊ?
ಅಲ್ಲಿಯ ನಡೆಯೂ ಒಂದೆ, ಇಲ್ಲಿಯ ನಡೆಯೂ ಒಂದೆ
ಅಲ್ಲಿಯ ನುಡಿಯೂ ಒಂದೆ
ಇಲ್ಲಿಯ ನುಡಿಯೂ ಒಂದೆ ಕಾಣಿರಯ್ಯಾ ಎಂಬರು.
ಕೈಲಾಸದವರ ದೇವರ್ಕಳೆಂಬರು
ಮರ್ತ್ಯಲೋಕದವರ ಮಹಾಗಣಂಗಳೆಂಬರು.
ಸುರಲೋಕದೊಳಗೆ ಸಾಸಿರ ಕಾಲಕ್ಕಲ್ಲದೆ ಅಳಿವಿಲ್ಲವೆಂಬರು
ನರಲೋಕದೊಳಗೆ ಸತ್ತು ಸತ್ತು ಹುಟ್ಟುತಿಹರೆಂಬರು
ಇದ ಕಂಡ ನಿಮ್ಮ ಶರಣರು
ಸುರಲೋಕವನು ನರಲೋಕವನು ತೃಣವೆಂದು ಭಾವಿಸಿ
ಭವವ ದಾಂಟಿ ತಮ್ಮ ತಮ್ಮ ಹುಟ್ಟನರಿದು
ಮಹಾಬೆಳಗನೆ ಕೂಡಿ ಬೆಳಗಿನಲ್ಲಿ ಬಯಲಾದರಯ್ಯಾ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣ (ವ. ವ.ಸಂ. 1351, ಪು.342)

ಈ ವಚನದಲ್ಲಿ ಕೈಲಾಸ, ಮರ್ತ್ಯಲೋಕ ಎಂದು ಜನರು ಚರ್ಚೆ ಮಾಡುತ್ತಾರೆ. ವಾಸ್ತವವಾಗಿ ಕೈಲಾಸ ಎಂದರೆ ಯಾವುದು? ಮರ್ತ್ಯ ಎಂದರೆ ಯಾವುದು? ಎಂಬುದನ್ನು ಕುರಿತು ಸುಮ್ಮನೆ ಚರ್ಚೆ ಮಾಡುತ್ತಾ ಕಾಲ ಕಳೆಯಬಾರದು. ಕೈಲಾಸ ಅದ್ಭುತವಾದದ್ದು, ಮರ್ತ್ಯ ಸಾಮಾನ್ಯವಾದುದು ಎಂಬ ಭೇದಭಾವ ಯಾಕೆ ಬೇಕು? ಅಲ್ಲಿದ್ದರೂ ಒಂದೆ, ಇಲ್ಲಿದ್ದರೂ ಒಂದೆ. ಸರಿಯಾಗಿ, ಪ್ರಾಮಾಣಿಕವಾಗಿ, ಪರಿಶುದ್ಧವಾದ ಜೀವನ ನಡೆಸುವವರಿಗೆ, ಅವೆರಡೂ ಒಂದೇ ಎನ್ನುತ್ತಾರೆ ಲಿಂಗಮ್ಮನವರು. ಕೈಲಾಸದಲ್ಲಿ ದೇವತೆಗಳಿದ್ದರೆ, ಮರ್ತ್ಯದಲ್ಲಿ ಶಿವನ ಭಕ್ತರುಗಳಿದ್ದಾರೆ ಎಂದೂ ಹೇಳುತ್ತಾರೆ. ಸ್ವರ್ಗಲೋಕದಲ್ಲಿದ್ದರೆ ಸಾವಿರ ವರ್ಷ ಬದುಕಬಹುದು, ಅಲ್ಲಿ ಸಾವಿಲ್ಲ ಎನ್ನುತ್ತಾರೆ. ಮರ್ತ್ಯದಲ್ಲಿ ಹುಟ್ಟುವ ಮತ್ತು ಸಾಯುವ ಚಕ್ರದಲ್ಲಿ ಸಿಕ್ಕಿ ತೊಳಲುತ್ತಾರೆ ಎನ್ನುತ್ತಾರೆ.

ಆದರೆ ನಮ್ಮ ಶರಣರು ಈ ಮಾತುಗಳನ್ನು ಒಪ್ಪುವುದಿಲ್ಲ. ನಮ್ಮ ಶರಣರು ಸ್ವರ್ಗವೂ ಬೇಡ ಎನ್ನುತ್ತಾರೆ. ಅಲ್ಲದೆ ಸತ್ತು ಹುಟ್ಟುವ ಈ ಮರ್ತ್ಯ ಕೂಡ ಬೇಡ ಎನ್ನುತ್ತಾರೆ. ಏಕೆಂದರೆ ಅಲ್ಲಿ ಸಾವಿರ ವರ್ಷ ಇದ್ದರೂ ಮತ್ತೆ ಮತ್ತೆ ಹುಟ್ಟುವ ಗತಿ ಪ್ರಾಪ್ತವಾಗುತ್ತದೆ. ಆದ್ದರಿಂದ ಶರಣರು ಸತ್ತು ಹುಟ್ಟುವ ಈ ಲೋಕವನ್ನು ದಾಟಿ, ಸ್ವರ್ಗಲೋಕ ಎನ್ನುವುದು ಹುಲ್ಲಿಗೆ ಸಮಾನವಾದದ್ದು ಎಂದು ಅರಿತು, ತಮ್ಮ ಹುಟ್ಟಿನ ರಹಸ್ಯವನ್ನು ಭೇದಿಸಿ ಮರುಜನ್ಮಗಳಲ್ಲದ ಬೆಳಕೇ ತಾನಾದ ಆ ಪರಮೇಶ್ವರ ಎಂಬ ಮಹಾಜ್ಯೋತಿಯಲ್ಲಿ ಬೆರೆತು ತಾವೂ ಬೆಳಕಾಗಿ ಹೋದರು. ನಮ್ಮ ಶರಣರು ಬೆಳಕಿನ ಜೀವಗಳು. ಆ ಬೆಳಕು ಮಹಾಬೆಳಕಾದ ಶಿವನಲ್ಲಿ ಸೇರಿಹೋಗುವುದು ಎನ್ನುತ್ತ ಶರಣನ ಧನ್ಯತೆಯನ್ನು ಇಲ್ಲಿ ವರ್ಣಿಸಲಾಗಿದೆ.

ಉರಿಲಿಂಗಪೆದ್ದಿಯೆಂಬ ವಚನಕಾರನು ತನ್ನ ರಚನೆಯೊಂದರಲ್ಲಿ ಶರಣರ ಬಗ್ಗೆ ಇರುವ ಗೌರವವನ್ನು ವ್ಯಕ್ತಪಡಿಸಿದ್ದಾನೆ.

ಶ್ರೀಗಂಧದ ತರು ಕಾಮರನಾದುದುಂಟೆ?
ಹೇಮದ ಪರ್ವತ ಹುಲುಮೊರಡಿಯಾದುದುಂಟೆ?
ಮಹಾಸಿಂಹ ಹುಲುಮೃಗವಾದುದುಂಟೆ?
ಜ್ಞಾನಿ ಅಜ್ಞಾನಿಯಾದುದುಂಟೆ?
ವಿರಕ್ತ ಸಂಸಾರಿಯಾದುದುಂಟೆ?
ಲಿಂಗವೆ ತಾನೆಂದರಿದ ಶರಣಂಗೆ
ಬೇರೆ ಅಂಗೇಂದ್ರಿಯಂಗಳ ವಿಕಾರವೆಂಬುದುಂಟೆ?
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ! (ವ. ವ.ಸಂ. 1585, ಪು. 405)

ಶರಣನು ಅಧ್ಯಾತ್ಮದ ಉತ್ತುಂಗಶಿಖರವನ್ನು ಮುಟ್ಟಿದಾಗ ಲಿಂಗವೇ ತಾನೆಂದರಿಯುವ ಸ್ಥಿತಿಗೆ ಮುಟ್ಟುತ್ತಾನೆ. ಅಂತಹ ಶರಣನಿಗೆ ಯಾವುದೇ ಇಂದ್ರಿಯಗಳ ವಿಕಾರವಿರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾನೆ.

ಶರಣನ ಲಕ್ಷಣಗಳನ್ನು ಕುರಿತು ಹೇಳುವಾಗ ಪಾಶ್ಚಾತ್ಯ ಲೇಖಕರು ಸಂತನ ಲಕ್ಷಣಗಳನ್ನು ಕುರಿತು ಹೇಳಿರುವ ಕೆಲವು ವಿಚಾರಗಳನ್ನು ಗಮನಿಸಬಹುದು. ಅವರ ಪ್ರಕಾರ ಸಂತನಿಗೆ ಇರಬೇಕಾದ ಗುಣಗಳೆಂದರೆ ಪರಿಶುದ್ಧಿ (Purity), ಅನುಕಂಪೆ (Sympathy) ಮತ್ತು ದಯೆ (Charity). ಆತನು ವಿನಮ್ರನಾಗಿರುತ್ತಾನೆ. ಭಗವಂತನ ಬಗೆಗಿನ ಅತೀವ ಶ್ರದ್ಧೆಯಿಂದಾಗಿ ಬಾಳಿನ ಕಷ್ಟಗಳನ್ನು ತೃಣಸಮಾನ ಎಂದು ಭಾವಿಸುತ್ತಾನೆ. ಪರಮಾತ್ಮನಿಗಾಗಿ ಲೌಕಿಕ ಸುಖವನ್ನು ತ್ಯಜಿಸುವ ಮನೋಭಾವ ಆತನದು. ಸಾಮಾನ್ಯ ಮಾನವರಿಗೆ ಮಾನಸಿಕ ಒತ್ತಡ (Tension), ಘರ್ಷಣೆ, ಸ್ವಂತ ಹೊಣೆಗಾರಿಕೆಯ ಮನೋಭಾವಗಳಿಂದಾಗಿ ಸದಾ ಒಂದಲ್ಲ ಒಂದು ಚಿಂತೆಯಲ್ಲಿಯೇ ಜೀವನ ನಡೆಸುತ್ತಾನೆ. ಆದರೆ ಸಂತನಾದವನು ಹಾಗಲ್ಲ, ಅವನು ಸಮತಾಭಾವವನ್ನು ತಳೆದು ಪರಮಾತ್ಮನ ಸಂಕಲ್ಪಕ್ಕೆ ತನ್ನನ್ನು ಸಮರ್ಪಿಸಿಕೊಂಡು ಸದಾ ನೆಮ್ಮದಿಯಿಂದ ಇರುತ್ತಾನೆ. ಆತನಿಗೆ

ಪರಮಾತ್ಮನ ಚಿಂತನೆಯನ್ನು ಬಿಟ್ಟು ಬೇರೆ ಏನೂ ಬೇಕೆನಿಸುವುದಿಲ್ಲ. ಸ್ವತಃ ತಾನು ಭಯ, ಕಾತುರತೆಗಳಿಂದ ದೂರವುಳಿದು ಲೋಕಕಲ್ಯಾಣವನ್ನು ಬಯಸುತ್ತಾನೆ. ಸಮಷ್ಟಿಯ ಹಿತ ಅವನಿಗೆ ಮುಖ್ಯವಾಗುತ್ತದೆ. ಕಷ್ಟ, ಸುಖ, ನೋವು, ನಲಿವು, ದುಃಖ, ದುಮ್ಮಾನ ಎಲ್ಲವನ್ನೂ ಸಮಚಿತ್ತದಿಂದ ಕಾಣುತ್ತಾನೆ.

ಮೇಲಿನ ಎಲ್ಲ ಗುಣಗಳನ್ನೂ ನಾವು ಶರಣರಲ್ಲಿಯೂ ಕಾಣುತ್ತೇವೆ. ಭೂಲೋಕದ ಶರಣರ ಸಂಗದ ಸುಖ ಕೈಲಾಸದಲ್ಲಿ ಲಭ್ಯವಾಗುವುದೆ ಎಂದು ಬಸವಣ್ಣನವರು ಶಿವನನ್ನು ಕೇಳಿದ ಸನ್ನಿವೇಶವನ್ನು ಹರಿಹರ ಚಿತ್ರಿಸಿದ್ದಾನೆ. ಕೈಲಾಸದ ಸುಖ ಭೂಲೋಕದಲ್ಲಿಯೇ ಲಭ್ಯವಾಗುವ ದಿಸೆಯ ಸಾಧನೆ ಶರಣರದಾಗಿತ್ತು. ಐಹಿಕ ಪ್ರಭಾವ, ಪ್ರದರ್ಶನ, ಪ್ರತಿಷ್ಠೆಗಳನ್ನು ಕಡೆಗಣಿಸಿ ಭೂಲೋಕದಲ್ಲಿಯೇ ದೈವೀರಾಜ್ಯ ಸ್ಥಾಪಿಸುವ ದಿಸೆಯಲ್ಲಿ ಸಾಗುವವ ಶರಣ.

ಜೀವನ ಎಂದಮೇಲೆ ಕಷ್ಟಕಾರ್ಪಣ್ಯಗಳು ಇಲ್ಲವೆಂದಲ್ಲ. ಆದರೆ ಕೆಲವು ವೇಳೆ ಕಷ್ಟಗಳನ್ನು ನಾವಾಗಿಯೇ ಆಹ್ವಾನಿಸುವುದು ಉಂಟು. ಸುತ್ತಮುತ್ತಲಿನ ಜನರನ್ನು ಮೆಚ್ಚಿಸುವ ಆಸೆ, ಜೊತೆಗೆ ಇತರರು ನಮ್ಮ ಬಗ್ಗೆ ಏನು ತಿಳಿದುಕೊಳ್ಳುವರೋ ಎಂಬ ಭಯ, ಆತಂಕಗಳಿಂದಲೂ ನಮ್ಮ ಕಷ್ಟಗಳು ಬೆಳೆಯುತ್ತಾ ಹೋಗುತ್ತವೆ. ಶಿವನಿಗೆ ಮಾತ್ರ ಬದ್ಧನಾದ ಶರಣ ನಿಸ್ಪೃಹ, ನಿರ್ಭಯನಾಗಿದ್ದುಕೊಂಡು ಶಿವಾನುಭವಪಥದಲ್ಲಿ ಸಾಧನೆಯ ಹೆಜ್ಜೆಗಳನ್ನಿಡುತ್ತಾ ಸಾಗುತ್ತಾನೆ. ಬಸವಣ್ಣನವರು ತನ್ನ ವಚನದಲ್ಲಿ ಶರಣನ ಲಕ್ಷಣಗಳನ್ನು ಅರ್ಥಪೂರ್ಣವಾಗಿ ಹೇಳಿದ್ದಾರೆ :

ಊರಾಡಿದಂತಾಡದಿರ್ದಡೆ ದೂರಿಹರೆನ್ನನು
ನಾಡಾಡಿದಂತಾಡದಿರ್ದಡೆ ಬೈದಿಹರೆನ್ನನು
ಆದರೆ ಇಂತಹ ದೂರು, ದೂಷಣೆಗಳು ನನ್ನನ್ನೇನು
ಮಾಡಬಲ್ಲವು? ಎಂಬ ನಿಲವು ಶರಣನದು
ನ್ಯಾಯನಿಷ್ಠುರಿ ದಾಕ್ಷಿಣ್ಯಪರನು ನಾನಲ್ಲ
ಲೋಕವಿರೋಧಿ ಶರಣನಾರಿಗಂಜುವನಲ್ಲ
ಕೂಡಲಸಂಗಮದೇವ.

ಅಂಬಿಗರ ಚೌಡಯ್ಯ ಇದೇ ಭಾವನೆಯನ್ನು ತನ್ನ ವಚನವೊಂದರಲ್ಲಿ ವ್ಯಕ್ತಪಡಿಸಿದ್ದಾನೆ.

ಲೌಕಿಕಕ್ಕಂಜಿ ಲೌಕಿಕವ ಮರಗೊಂಡು ನಡೆವಾತ
ಮಾತಯೋಗಿಯೆಂದಾತನಂಬಿಗರ ಚೌಡಯ್ಯ
ಲೌಕಿಕಕ್ಕಂಜುವವನು ಶಿವಯೋಗಿಯಲ್ಲ, ಶರಣನಲ್ಲ.

ಲೌಕಿಕ ವ್ಯಾಪಾರಗಳಿಗೆ ಮನಸ್ಸನ್ನು ಕೊಟ್ಟವನು, ಜನರು ಏನೆಂದುಕೊಂಡಾರೋ ಎಂದು ಅಂಜುವವನು ಶಿವಯೋಗಿಯಲ್ಲ, ಶರಣನಲ್ಲ ಎಂದು ಅಂಬಿಗರ ಚೌಡಯ್ಯ ಹೇಳಿದ್ದಾನೆ.

ಷಣ್ಮುಖಸ್ವಾಮಿ ತನ್ನ ವಚನವೊಂದರಲ್ಲಿ ಶರಣನ ಗುಣಲಕ್ಷಣಗಳನ್ನು ತನ್ನದೇ ದೃಷ್ಟಿಯಲ್ಲಿ ಅಭಿವ್ಯಕ್ತಿಪಡಿಸಿದ್ದಾನೆ.

ಕಾಯದ ಕಳವಳದಲ್ಲಿ ಕಂಗೆಡುವವನಲ್ಲ ಶರಣ
ಜೀವನುಪಾಧಿಕೆಯ ಹೊದ್ದುವವನಲ್ಲ ಶರಣ
ಭಾವದ ಭ್ರಮೆಯಲ್ಲಿ ಸುಳಿವನಲ್ಲ ಶರಣ
ಮನದ ಮರೆಯಲ್ಲಿ ಮಗ್ನನಲ್ಲ ಶರಣ
ಇಂದ್ರಿಯಂಗಳ ವಿಕಾರದಲ್ಲಿ ಹರಿದಾಡುವನಲ್ಲ ಶರಣ
ಪರತದ ಲಿಂಗದ ಬೆಳಗಿನೊಳು ಬೆರೆದು
ತೆರಹಿಲ್ಲದ ಬೆಳಗುವ ಪರಮ ಗಂಭೀರ ಶರಣನ ನಿಲುವಿಂಗೆ
ನಮೋ ನಮಃ ಎಂಬೆನಯ್ಯಾ ಅಖಂಡೇಶ್ವರಾ.

ದೇಹದ ಕಳವಳದಲ್ಲಿಯೇ ಕಂಗೆಡುವನಲ್ಲ, ಭಾವದ ಭ್ರಮೆಯಲ್ಲಿ ಒಳಗಾಗುವನಲ್ಲ ಶರಣ, ಅರಿಷಡ್ವರ್ಗಗಳಿಗೆ ಬಲಿಯಾಗುವನಲ್ಲ ಶರಣ; ಲೋಕವನ್ನೇ ಮರೆತು ಸದಾ ಲಿಂಗಪೂಜೆಯಲ್ಲಿ ತೊಡಗಿರುವ ಶರಣನಿಗೆ ನಮಸ್ಕರಿಸುತ್ತೇನೆ ಎನ್ನುತ್ತಾನೆ ಷಣ್ಮುಖಸ್ವಾಮಿ.

ಶರಣ ಜೇಡರ ದಾಸಿಮಯ್ಯ ತನ್ನ ವಚನದಲ್ಲಿ ಶರಣರ ಮಾತಿಗಿರುವ ಮಹತ್ವವನ್ನು ಕುರಿತು ಅರ್ಥಪೂರ್ಣವಾಗಿ ಹೇಳಿದ್ದಾನೆ :

ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ
ನಿಮ್ಮ ಶರಣರ ಸೂಳ್ನುಡಿಯ ಒಂದರಘಳಿಗೆಯಿತ್ತಡೆ
ನಿಮ್ಮನಿತ್ತೆ ಕಾಣಾ! ರಾಮನಾಥಾ.

ಇಂಥ ಶರಣರು ಒಂದೆಡೆ ಕುಳಿತು ಚರ್ಚೆ ಮಾಡಿದರೆ ಅಲ್ಲಿ ಅನುಭವಮಂಟಪ ನಿರ್ಮಾಣವಾಗಿಬಿಡುತ್ತದೆ. ಏಕೆಂದರೆ ಅವರ ಸಂವಾದಗಳು ಅಷ್ಟು ಮಹತ್ವದವು. ನಿಮಗೆ ಆನೆಯನ್ನೆ ಕೊಡುತ್ತೇನೆ ಎನ್ನಬಹುದು ಅಥವಾ ಆನೆಯ ಮೇಲೆ ಅಂಬಾರಿ ಮಾಡಿಸುತ್ತೇನೆ ಎನ್ನಬಹುದು. ಅಂತಹ ಗೌರವ ನನಗೆ ಬೇಕಾಗಿಲ್ಲ. ಐಶ್ವರ್ಯವನ್ನು ನಿಮಗೆ ಕೊಡುತ್ತೇನೆಂದು ಮುಂದೆ ಬರಬಹುದು. ಮುತ್ತುರತ್ನಗಳನ್ನು ಅಥವಾ ಬಂಗಾರವನ್ನು ತಿಂದು ಬದುಕಲು ಸಾಧ್ಯವೆ? ನನಗೆ ಅಂಥ ಮೋಹವಿಲ್ಲ. ಅದು ನನಗೆ ಬೇಡವೇ ಬೇಡ. ದೊಡ್ಡದಾದ ಸಾಮ್ರಾಜ್ಯವನ್ನೇ ನಿಮಗೆ ಕೊಡುತ್ತೇನೆ. ಅದರ ಅನುಕೂಲದಲ್ಲಿ ಮೆರೆಯಬಹುದು ಎನ್ನಬಹುದು. ಅದು ನನ್ನ ದೃಷ್ಟಿಯಲ್ಲಿ ನೀರಿನ ಮೇಲಿನ ಗುಳ್ಳೆಯಿದ್ದಂತೆ ನಶ್ವರ. ಅವು ಯಾವುದರಿಂದಲೂ ನನ್ನ ಮನಸ್ಸಿಗೆ ಸುಖ, ಶಾಂತಿ, ನೆಮ್ಮದಿ ದೊರೆಯದು. ಅವುಗಳ ಮಾಯಾಜಾಲಕ್ಕೆ ಒಳಗಾದರೆ ಅತೃಪ್ತಿ, ದುರಾಸೆಗಳು ಹುಟ್ಟಿಕೊಂಡು ನಮ್ಮ ಮನಶ್ಶಾಂತಿ ಕದಡುತ್ತದೆ. ರಾಮನಾಥನಿಗೆ ಆತ್ಮೀಯರಾದ ಶರಣರು ಸಂಭಾಷಣೆ

(ಸೂಳ್ನುಡಿ) ನಡೆಸಿದರೆ, ಅಂಥ ಜ್ಞಾನವನ್ನು ನೀಡುವ, ಅತೃಪ್ತಿಯನ್ನು ಹೋಗಲಾಡಿಸುವ ಮಾತುಗಳನ್ನು ನೀವು ನನಗೆ ದಯಪಾಲಿಸಿದರೆ ನಾನು ನಿಮ್ಮನ್ನೆ ಆ ಮಾತುಗಳಿಗೆ ಬೆಲೆಯಾಗಿ ಕೊಟ್ಟುಬಿಡುತ್ತೇನೆ. ಶರಣರ ಅನುಭಾವದಿಂದ ಕೂಡಿದ, ಹೃದಯವನ್ನು ಮಾಗಿಸಿ ಬುದ್ಧಿಯನ್ನು ಬೆಳೆಸುವ ಮಾತುಗಳಿಂದ ನಮಗೆ ಬೇಕಾದುದನ್ನೆಲ್ಲಾ ಪಡೆದುಕೊಳ್ಳಬಹುದು ಎನ್ನುತ್ತಾನೆ ಶರಣ ದಾಸಿಮಯ್ಯ. ಶರಣರ ಶರಣರ ಮಾತು ಎಂಥದ್ದು ಎಂಬುದಕ್ಕೆ ಒಂದು ಅರ್ಥಪೂರ್ಣವಾದ ದೃಷ್ಟಾಂತವನ್ನು ಮತ್ತೊಂದು ವಚನದಲ್ಲಿ ಹೀಗೆ ಮನವರಿಕೆ ಮಾಡಿಕೊಟ್ಟಿದ್ದಾನೆ :

ಕಡೆಗೀಲಿಲ್ಲದೆ ಬಂಡಿ ಹೊಡೆಗೆಡೆಯದೆ ಮಾಣ್ಬುದೆ?
ಕಡೆಗೀಲು ಬಂಡಿಗಾಧಾರ
ಈ ಕಡುದರ್ಪವೇರಿದ ಒಡಲೆಂಬ ಬಂಡಿಗೆ
ಮೃಡಭಕ್ತರ ನುಡಿಗಡಣವೆ ಕಡೆಗೀಲು ಕಾಣಾ ರಾಮನಾಥ!

ಗಾಡಿಯು (ಬಂಡಿ) ಎಷ್ಟೇ ಗಟ್ಟಿಯಾಗಿ ಇದ್ದರೂ ಅದರ ಚಕ್ರಗಳನ್ನು ಸುಭದ್ರಗೊಳಿಸುವುದು ಗಾಡಿಯ ಕಡೆಗೀಲಾಗಿರುವ ಕಡಾಣಿ. ಆ ಕಡಾಣಿ ಇಲ್ಲದಿದ್ದರೆ ಚಕ್ರ ಕಳಚಿಕೊಂಡು ಗಾಡಿ ಉರುಳಿ ಬೀಳುತ್ತದೆ. ಆ ಕಡೆಗೀಲುಗಳು ಬಂಡಿಯನ್ನು ಸುಭದ್ರವಾಗಿ ನಡೆಸುವುದಕ್ಕೆ ಆಧಾರ. ಅವು ಇಲ್ಲದಿದ್ದರೆ ಬಂಡಿಯು ಚಲಿಸುವುದಾದರೂ ಹೇಗೆ? ಹಾಗೆಯೇ ಎಂಥ ಗರ್ವದಿಂದ ಕೂಡಿದರೂ ದೇಹವೆಂಬ ಬಂಡಿ ಒಂದು ದಿನ ಉರುಳಿ ಬೀಳುತ್ತದೆ. ಇಂಥ ಮದದಿಂದ, ಅಹಂಕಾರದಿಂದ ಕೂಡಿದ ದೇಹವನ್ನು ನಿಯಂತ್ರಿಸುವ ಶಕ್ತಿ ಶಿವಭಕ್ತರ, ಅಂದರೆ ಶರಣರ ಮಾತುಗಳಿಗಿದೆ. ಶಿವಭಕ್ತರ ಮಾತುಗಳೆಂದರೆ ಅವೇ ಸೂಳ್ನುಡಿಗಳು.

ಚೆನ್ನಬಸವಣ್ಣ ಶರಣನ ನಡೆನುಡಿಗಳನ್ನು ವಚನವೊಂದರಲ್ಲಿ ನಿರೂಪಿಸಿದ್ದಾರೆ

ಅಂಗದ ಕೊನೆಯಲ್ಲಿ ಲಿಂಗ ಮುಂತಲ್ಲದೆ
ಸಂಗವ ಮಾಡನಾ ಶರಣನು
ನಯನದ ಕೊನೆಯಲ್ಲಿ ಲಿಂಗ ಮುಂತಲ್ಲದೆ
ಅನ್ಯವ ನೋಡನಾ ಶರಣನು
ಶ್ರೋತ್ರದ ಕೊನೆಯಲ್ಲಿ ಲಿಂಗ ಮುಂತಲ್ಲದೆ
ಅನ್ಯವ ಕೇಳನಾ ಶರಣನು
ನಾಸಿಕದ ಕೊನೆಯಲ್ಲಿ ಲಿಂಗ ಮುಂತಲ್ಲದೆ
ಪರಿಮಳವ ವೇಧಿಸ ಶರಣನು
ಜಿಹ್ವೆಯ ಕೊನೆಯಲ್ಲಿ ಲಿಂಗ ಮುಂತಲ್ಲದೆ
ರುಚಿಯ ನಿಶ್ಚಯಿಸ ಶರಣನು,
ಕೂಡಲಚೆನ್ನಸಂಗಾ ನಿಮ್ಮ ಶರಣ ಸರ್ವಾಂಗಲಿಂಗಿಯಾದ ಕಾರಣ.

(ವ.ವ.ಸಂ. 651, ಪು.150)

ಶರಣನಾದವನು ಪಂಚೇಂದ್ರಿಯಗಳಲ್ಲಿಯೂ ಶಿವನ ಧ್ಯಾನ ಮಾಡುತ್ತಿರಬೇಕು. ಅಂತಹ ಶರಣನ ಸರ್ವಾಂಗವೂ ಲಿಂಗಮಯವಾಗುತ್ತದೆ. ಅಂತವನೇ ನಿಜವಾದ ಶರಣನು ಎಂದು ಹೇಳಿದ್ದಾರೆ. ಮತ್ತೊಂದು ವಚನದಲ್ಲಿ ಶರಣನನ್ನು ಕುರಿತು ಮತ್ತಷ್ಟು ವಿಶದವಾಗಿ ಪರಿಚಯಿಸಲಾಗಿದೆ :

ಅಂಗದ ಮೇಲೆ ಲಿಂಗ ಸನ್ನಿಹಿತವಾದ ಬಳಿಕ
ಅನ್ಯ ಶಬ್ದವ ಕೇಳನಾ ಶರಣನು
ಅಂಗದ ಮೇಲೆ ಲಿಂಗ ಸನ್ನಿಹಿತವಾದ ಬಳಿಕ
ಅನ್ಯವ ಮುಟ್ಟನಾ ಶರಣನು
ಅಂಗದ ಮೇಲೆ ಲಿಂಗ ಸನ್ನಿಹಿತವಾದ ಬಳಿಕ
ಅನ್ಯವ ನೋಡನಾ ಶರಣನು
ಅಂಗದ ಮೇಲೆ ಲಿಂಗ ಸನ್ನಿಹಿತವಾದ ಬಳಿಕ
ಆಹಾರ ವ್ಯವಹಾರವನರಿಯನಾ ಶರಣನು
ಅಂಗದ ಮೇಲೆ ಲಿಂಗ ಸನ್ನಿಹಿತವಾದ ಬಳಿಕ
ಅನ್ಯವ ಘ್ರಾಣಿಸನಾ ಶರಣನು
ಅಂಗದ ಮೇಲೆ ಲಿಂಗ ಸನ್ನಿಹಿತವಾದ ಬಳಿಕ
ಬರಿ ಶಬ್ದವ ನುಡಿಯನಾ ಶರಣನು
ಅಂಗದ ಮೇಲೆ ಲಿಂಗ ಸನ್ನಿಹಿತನಾಗಿ
ಕೂಡಲ ಚೆನ್ನಸಂಗಯ್ಯನಲ್ಲಿದನ್ಯವನರಿಯನಾ ಶರಣನು (ವ. ವ.ಸಂ.656, ಪು.152)

ಅಂಗದಲ್ಲಿ ಆಚಾರಲಿಂಗಸಂಬಂಧಿಯಾಗಿಪ್ಪ
ಮನದಲ್ಲಿ ಮಹಾಲಿಂಗಸಂಬಂಧಿಯಾಗಿಪ್ಪ
ಇಂತೀ ಉಭಯಸಂಗ ಸಂಬಂಧ ಸನ್ನಿಹಿತನಾಗಿಪ್ಪ
ಕೂಡಲ ಚೆನ್ನಸಂಗಾ, ನಿಮ್ಮ ಶರಣ (ವ. ವ.ಸಂ.896, ಪು.152)

ಮೇಲಿನ ವಚನಗಳ ಮೂಲಕ ಚೆನ್ನಬಸವಣ್ಣ ಶರಣನಾದವನು ಸಮಾಜದಲ್ಲಿ ಹೇಗಿರಬೇಕು, ಹೇಗೆ ಬದುಕನ್ನು ರೂಪಿಸಿಕೊಂಡು ಸಮಾಜಕ್ಕೆ ಮಾದರಿಯಾಗಿರಬೇಕು ಎಂಬುದನ್ನು ತಿಳಿಸಿದ್ದಾರೆ. ಮತ್ತೊಂದು ವಚನದಲ್ಲಿ –

ಲೋಕವನು ಹೊದ್ದ, ಲೌಕಿಕವ ಬೆರಸ, ಏಕಗ್ರಾಹಿ ಶರಣ,
ಲಿಂಗವ ಪೂಜಿಸಿ ಅನ್ಯವನರಿಯದ ಅಚ್ಚಲಿಂಗೈಕ್ಯ
ಕೂಡಲ ಚೆನ್ನಸಂಗಾ ನಿಮ್ಮ ಶರಣ. (ವ. ವ.ಸಂ.896, ಪು.221)

ಲೋಕದ ನಡುವೆ ಇದ್ದರೂ ಅವನು ಸ್ಥಿತಪ್ರಜ್ಞ. ಲಿಂಗವನ್ನು ಪೂಜಿಸುವುದನ್ನು ಬಿಟ್ಟು ಬೇರೊಂದನ್ನು ಅರಿಯದ ಮಹಾಶರಣ.

ತೋಂಟದ ಸಿದ್ಧಲಿಂಗ ಶಿವಯೋಗಿ ಮತ್ತು ಷಣ್ಮುಖಸ್ವಾಮಿಗಳ ದೃಷ್ಟಿಯಲ್ಲಿ ಶರಣರೆಂದರೆ ದೇಹದ ಬಾಧೆಗಳಿಂದಲೂ, ಮನಸ್ಸಿನ ಮಾಯೆಯಿಂದಲೂ, ಅಂತಃಕರಣದ

ವ್ಯವಹಾರಗಳಿಂದಲೂ, ಇಂದ್ರಿಯ ಸುಖಗಳಿಂದಲೂ ದೂರವಿರುವವನು. ಸತ್ಯ, ದಯೆ, ಕ್ಷಮೆ, ಸೈರಣೆ, ಸಮಾಧಾನ, ಸಂತೋಷ, ಸ್ಥೈರ್ಯ ಮುಂತಾದ ಸದ್ಗುಣಗಳನ್ನು ಉಳ್ಳವನು. ಅಂಗದ ನೈಜ ಸ್ವರೂಪವನ್ನು ಕೆಡಿಸುವಂಥ ಶಕ್ತಿಯ ವಿವಿಧ ರೂಪಗಳಾದ ಅರಿಷಡ್ವರ್ಗ, ಅಷ್ಟಮದಗಳನ್ನು ಗೆದ್ದವನು. ಮುಖ್ಯವಾಗಿ ಶಿವನಿಗೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡವನು. ಶರಣ ತನ್ನ ದೇಹವನ್ನು ಶಿವನಿಗರ್ಪಿಸಿದ ಬಳಿಕ ತನಗೊಂದು ದೇಹವಿದೆ ಎಂಬುದನ್ನು ತಿಳಿಯುವುದಿಲ್ಲ. ಹಾಗೆಂದಮಾತ್ರಕ್ಕೆ ಶರಣನಿಗೆ ದೇಹವೇ ಇರುವುದಿಲ್ಲ ಎಂಬರ್ಥವಲ್ಲ. ದೇಹವಿದ್ದರೂ ಅದು ಅವನದು ಎಂಬ ಭಾವವಿಲ್ಲ. ಅರ್ಥಾತ್ ಅದಕ್ಕೆ ಭೌತ ಶರೀರಕ್ಕಿರುವ ಮಿತಿಗಳಿರುವುದಿಲ್ಲ. ಇಂತಹ ಕಾಯವನ್ನೇ ಬೌದ್ಧರು 'ಜ್ಞಾನಕಾಯ' ಅಥವಾ 'ಬೋಧಿಕಾಯ' ಎನ್ನುತ್ತಾರೆ.

ಶರಣನಾದವನು ಭಗವಂತನ ಅನುಗ್ರಹದಿಂದ ಪಡೆದ ಅನುಭಾವಕ್ಕಾಗಿ ತನ್ನ ದೇಹ ಮತ್ತು ಆತ್ಮವನ್ನು ಶಿವನಿಗೆಂದೇ ಮೀಸಲಾಗಿಡುತ್ತಾನೆ. ಅಂದರೆ ದೇಹ ಮತ್ತು ಆತ್ಮಗಳಲ್ಲಿರುವ ಶಕ್ತಿಗಳು ತನ್ನವಲ್ಲ, ಶಿವನಿಗೆ ಸೇರಿದವು ಎಂದು ತಿಳಿಯುತ್ತಾನೆ. ಇಂಥ ಒಂದು ಮಾನಸಿಕ ಸ್ಥಿತಿಗೆ ಆನಂದಭಕ್ತಿ ಎನ್ನುತ್ತಾರೆ.

ಸ್ವತಂತ್ರ ಸಿದ್ಧಲಿಂಗೇಶ್ವರರು ಶರಣರ ಪರಿಯನ್ನು ತಮ್ಮ ವಚನದಲ್ಲಿ ತಮ್ಮದೇ ಆದ ಚಿಂತನೆಯ ಮೂಲಕ ಅಭಿವ್ಯಕ್ತಿಗೊಳಿಸಿದ್ದಾರೆ :

ಆಚಾರವೆಂಬ ಭಕ್ತಿಯ ಮೇಲೆ ವಿಚಾರ ಎಂಬ ಚಿತ್ತವ ಚಿತ್ರಿಸಿ
ಜ್ಞಾನವೆಂಬ ಕಳೆಯ ನೆಲೆಗೊಳಿಸಿ
ಅನುಭಾವವೆಂಬ ಮಂಟಪದಲ್ಲಿ ಶರಣ ಕುಳ್ಳಿರ್ದುರ
ನೆತ್ತಿಯ ನಯನವ ತೆರೆದು ನೋಡಲು ಆಚಾರ ವಿಚಾರದೊಳಡಗಿತ್ತು
ವಿಚಾರ ಸುವಿಚಾರದೊಳಡಗಿತ್ತು, ಸುವಿಚಾರ ಸುಜ್ಞಾನದೊಡಗಿತ್ತು
ಸುಜ್ಞಾನ ಮಹಾನುಭಾವದೊಳಡಗಿತ್ತು
ಮಹಾನುಭಾವ ಶರಣನೊಳಡಗಿತ್ತು
ಶರಣನಿರ್ದ ತನ್ನ ಆಚಾರವ ನುಂಗಿ
ನಿಜ ಗುರು ಸ್ವತಂತ್ರ ಸಿದ್ಧಲಿಂಗೇಶ್ವರ

ಶರಣರನ್ನು, ಶರಣರ ಗುಣವಿಶೇಷಗಳನ್ನು ಕುರಿತ ಇಂಥ ನೂರಾರು ವಚನಗಳು ಲಭ್ಯವಿದೆ. ಶರಣನಾದವನು ಲೌಕಿಕದಲ್ಲಿದ್ದರೂ ಅಲೌಕಿಕದತ್ತ ಮುಖ ಮಾಡಿ ಶಿವನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. ಅಂಥವನೇ ನಿಜವಾದ ಶರಣ ಎಂಬ ವಿಚಾರ ತಿಳಿದುಬರುತ್ತದೆ.

ಪರಶಿವ ತತ್ತ್ವದ ಸಾಕ್ಷಾತ್ಕಾರಕ್ಕಾಗಿ ಶರಣರು ಅನುಸರಿಸಿದ ಸಾಧನಮಾರ್ಗದ ಕೆಲವು ಮುಖ್ಯ ಅಂಶಗಳನ್ನು ನಾವಿಲ್ಲಿ ನೆನಪು ಮಾಡಿಕೊಳ್ಳಬಹುದು. ಸಾಮಾನ್ಯವಾಗಿ ಧಾರ್ಮಿಕ ಬದುಕು ಆರಂಭವಾಗುವುದು ದೀಕ್ಷಾಸಂಸ್ಕಾರದೊಂದಿಗೆ. ಅಂದರೆ ಸಾಧಕನು ದೀಕ್ಷಾಬದ್ಧನಾಗಬೇಕು ಎಂದರ್ಥ. ಶರಣಧರ್ಮದಲ್ಲಿ ಶರಣ ದೀಕ್ಷಾಬದ್ಧನಾಗಬೇಕಾದರೆ

ಅವನಿಗೆ ಇರಬೇಕಾದ ಅರ್ಹತೆಗಳೇನು ಎಂಬುದನ್ನು ಚೆನ್ನಬಸವಣ್ಣನವರು ಹೀಗೆ ಹೇಳುತ್ತಾರೆ.

ಎಲ್ಲರ ದೀಕ್ಷೆಯಂತಲ್ಲ ನಮ್ಮಯ್ಯನ ದೀಕ್ಷೆ
ನಡೆ–ನುಡಿ ಶುದ್ಧವಾದವರಿಗಲ್ಲದೆ ಅನುಗ್ರಹಿಸ ನೋಡಾ!
ಪರಮಾರ್ಥಕ್ಕೊಲ್ಲದ ಜಡ ಮನುಜರನ್ನೊಲ್ಲ, ದೀಕ್ಷೆಯ ಕೊಡನು
ಭಾವಭಾರಿಗಳ ಮುಖದತ್ತ ನೋಡನು
ನಮ್ಮ ಕೂಡಲ ಚೆನ್ನಸಂಗಯ್ಯನೆಂಬ ಜ್ಞಾನಗುರು

ಅಂದರೆ ನಡೆ–ನುಡಿ ಶುದ್ಧವಿದ್ದು, ಜ್ಞಾನದಾಹಿಗಳೂ, ಮೋಕ್ಷಾಪೇಕ್ಷಿಗಳೂ ಆದ ಜಾಗೃತಮತಿಗಳಿಗೆ ಮಾತ್ರ ಶಿವಪಥ ಸಾಧ್ಯ. ಆದ್ದರಿಂದ ಶರಣರು ನೈತಿಕ ಪರಿಶುದ್ಧತೆ ಮತ್ತು ವೈಚಾರಿಕತೆಗೆ ಕೊಟ್ಟಷ್ಟು ಮಹತ್ವವನ್ನು ಕರ್ಮಾಚರಣೆಗೆ ಕೊಟ್ಟವರಲ್ಲ ಎಂದಾಯಿತು. ಯಜ್ಞಯಾಗಾದಿ ಕರ್ಮಗಳನ್ನು ಇವರು ನಿರಾಕರಿಸಿದ್ದಲ್ಲದೆ ಜನಸಾಮಾನ್ಯರು ಧರ್ಮದ ಹೆಸರಿನಲ್ಲಿ ಆಚರಿಸುತ್ತಿದ್ದ ಅರ್ಥಹೀನ ಆಚರಣೆಗಳನ್ನು ಖಂಡಿಸಿದರು.

ಕಲ್ಲನಾಗರನು ಪೂಜಿಸಿ ದಿಟದ ನಾಗರನ್ನು ಕೊಲ್ಲುವುದು, ಹಸಿದ ಜೀವಿಗೆ ಉಣಬಡಿಸದೆ ಲಿಂಗಕ್ಕೆ ಬೋನವೆರೆಯುವುದು, ಪಾಪ ಪರಿಹಾರಕ್ಕೆಂದು ನೀರಲ್ಲಿ ಮುಳುಗುವುದು, ಮರವನ್ನು ಸುತ್ತುವುದು ಮುಂತಾದವು. ಶರಣರಿಗೆ ವಿಚಾರಕ್ಕೆ ಸಲ್ಲದ ಆಚರಣೆಗಳಾಗಿ ಕಂಡವು. ತಾವು ನಂಬಿದ ತತ್ತ್ವಕ್ಕೆ ಸ್ವಲ್ಪವೂ ಅಪಚಾರವಾಗಬಾರದೆಂಬ ನಿಷ್ಠೆ ಅವರದಾದ್ದರಿಂದ ಯಾವ ದಾಕ್ಷಿಣ್ಯಕ್ಕೂ ಸಿಕ್ಕದ ಇವರನ್ನು ಜನರು, ತುಂಬಾ ನಿಷ್ಠುರಪರರು ಎಂದಿರುವುದೂ ಉಂಟು.

ಚೆನ್ನಬಸವಣ್ಣನವರು ನಾವು ಮಾಡುವ ಪೂಜೆ, ಪ್ರಾರ್ಥನೆ ಪರಿಣಾಮಕಾರಿಯಾಗಬೇಕಾದರೆ ಅದರಲ್ಲಿರಬೇಕಾದ ಮುಖ್ಯ ತತ್ತ್ವಗಳೇನು ಎಂಬುದನ್ನು ವಿವರಿಸಿದ್ದಾರೆ.

ಹೊರಗನೆ ಕೊಯ್ದು ಹೊರಗನೆ ಪೂಜಿಸಿದೊಡೆ ಪರಿಣಾಮವಿಲ್ಲ,
ಪ್ರಯೋಜನವಿಲ್ಲ, ಮೇಣ್ ಸುಖ ದೊರೆಕೊಳ್ಳದು ನೋಡಾ!
ಸರ್ವಜೀವಂಗಳಲ್ಲಿ ಹಿಂಸೆ ಮಾಡದಿರಬಲ್ಲಡೆ ಪ್ರಥಮ ಪುಷ್ಪ
ಸರ್ವೇಂದ್ರಿಯಗಳ ನಿಗ್ರಹಿಸಿಕೊಂಡಿರಬಲ್ಲಡೆ ದ್ವಿತೀಯ ಪುಷ್ಪ
ಸರ್ವಾಹಂಕಾರವ ಮರೆತು ಶಾಂತನಾಗಿರಬಲ್ಲಡೆ ತೃತೀಯ ಪುಷ್ಪ
ಸರ್ವ ವ್ಯಾಪಾರವಳಿದ ನಿರ್ವ್ಯಾಪಾರಿಯಾಗಿರಬಲ್ಲಡೆ ಚತುರ್ಥ ಪುಷ್ಪ
ದುರ್ಭಾವ ಪ್ರಕೃತಿಯಳಿದು ಸದ್ಭಾವ ಎಡೆಗೊಂಡಿರಬಲ್ಲಡೆ ಪಂಚಮ ಪುಷ್ಪ
ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿಯಾಗಿರಬಲ್ಲಡೆ ಷಷ್ಠ ಪುಷ್ಪ
ಅನೃತವ ಮರೆತು ಸತ್ಯವ ನುಡಿಯಬಲ್ಲಡೆ ಸಪ್ತಮ ಪುಷ್ಪ
ಸಕಲ ಪ್ರಪಂಚವಳಿದು ಜ್ಞಾನಸಂಪನ್ನನಾಗಿರಬಲ್ಲೆಡೆ ಅಷ್ಟಮ ಪುಷ್ಪ.
ಇಂತೀ ಅಷ್ಟದಳಕಮಲದಲ್ಲಿ ಸಹಸ್ರಪೂಜೆಯ ಮಾಡಬಲ್ಲ ಶರಣರು
ನಿಮ್ಮ ಪ್ರತಿಬಿಂಬದಂತಿರುವರು ಕಾಣಾ ಕೂಡಲಚೆನ್ನಸಂಗಮದೇವಾ.

ನಾವು ನೀತಿವಂತರಾಗಿರಬೇಕಾದರೆ ನಮ್ಮಲ್ಲಿ ಇಚ್ಛಾಶಕ್ತಿ ಪ್ರಬಲವಾಗಿರಬೇಕು, ದುರ್ಬಲವಾದ ಇಚ್ಛಾಶಕ್ತಿ ಇರುವವರು ನೀತಿಪಥದಿಂದ ಸುಲಭವಾಗಿ ಜಾರುತ್ತಾರೆ. ಇಂದ್ರಿಯವ್ಯಾಮೋಹಗಳಿಗೆ ದಾಸರಾಗಿ ನಾವು ಬದುಕುವ ಅನೈತಿಕ ಜೀವನಕ್ಕೂ, ನೀತಿವಂತರಾಗಿ ಬದುಕಬೇಕಾದ ಆದರ್ಶ ಜೀವನಕ್ಕೂ ನಡುವೆ ನಮ್ಮಲ್ಲಿ ಸದಾ ಘರ್ಷಣೆ ನಡೆಯುತ್ತಲೇ ಇರುತ್ತದೆ. ಆದ್ದರಿಂದ ದೃಢವಾದ ಸಂಕಲ್ಪ ನಮ್ಮಲ್ಲಿ ಸದಾ ಜಾಗೃತವಾಗಿರಬೇಕು.

ಶರಣರು ಎಂದೂ ದ್ವಿಮುಖ ವ್ಯಕ್ತಿತ್ವವನ್ನು ಒಪ್ಪಲಿಲ್ಲ. ಅದನ್ನು ಅವರು ವಿರೋಧಿಸುತ್ತಲೇ ಬಂದರು. ಅವರು ಅಂತರಂಗ ಮತ್ತು ಬಹಿರಂಗ ಎರಡರಲ್ಲಿಯೂ ಏಕಸೂತ್ರತೆಯನ್ನು ಅಳವಡಿಸಿಕೊಂಡವರು. ಧರ್ಮಕ್ಕಾಗಿ ಒಂದು ಬದುಕು, ಲೌಕಿಕಕ್ಕಾಗಿ ಮತ್ತೊಂದು ಬದುಕು ಎಂಬುದನ್ನು ಅವರು ಒಪ್ಪಲಿಲ್ಲ. ಪಾರಮಾರ್ಥಿಕ ಮತ್ತು ವ್ಯಾವಹಾರಿಕ ದೃಷ್ಟಿಗಳೆರಡೂ ಜೊತೆಗೂಡಿ ಬೆರೆತು ದೈನಂದಿನ ಬದುಕಿನಲ್ಲಿ ಸಹಜವಾಗಿ ಧ್ವನಿಸುವಂತಿರಬೇಕು ಎಂಬ ನಿಲುವು ಹೊಂದಿದ್ದುಇವರಿಗೆ ಮಾನವ ನಿರ್ಮಿತವಾದ ವರ್ಣ, ಜಾತಿ ಮುಂತಾದವು ಅಸಹಜವಾಗಿ ಕಂಡವು. ಬದುಕಿಗೆ ಅವಶ್ಯಕವಾದ ದುಡಿಮೆ ಅಥವಾ ಕಾಯಕ ಬಹು ಪವಿತ್ರವಾದ ಜೀವನಕ್ರಮವೆನಿಸಿತು. ಕಾಯಕದಲ್ಲಿ ಗಳಿಕೆ (ಯುಟಿಲಿಟಿ) ಘನತೆ (ಡಿಗ್ನಿಟಿ) ಮತ್ತು ಪವಿತ್ರತೆ (ದಿವಿನಿಟಿ) ಎಂಬ ಈ ಮೂರು ಗುಣಗಳನ್ನು ಇವರು ಗುರುತಿಸಿದರು. ಅಷ್ಟೇ ಅಲ್ಲ, ಅವನ್ನು ಜೀವನದಲ್ಲಿ ಅಳವಡಿಸಿಕೊಂಡು ಅನುಷ್ಠಾನಕ್ಕೆ ತರುವಲ್ಲಿ ಯಶಸ್ವಿಯಾದರು. ಅವರು ಎಲ್ಲ ಕಾಯಕವೂ ಶ್ರೇಷ್ಠ ಎಂದು ಭಾವಿಸಿ ಎಲ್ಲರಿಗೂ ಗೌರವ ಮರ್ಯಾದೆಯನ್ನು ನೀಡಿ ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಶೋಷಣೆಗೆ ಅಂತ್ಯವನ್ನು ಹಾಡಿದರು.

ಜನಸಾಮಾನ್ಯರ ಪಾಲಿಗೆ ಧರ್ಮವನ್ನು ಸರಳೀಕರಿಸಿ ಸುಲಭವಾಗಿ ಅನುಸರಿಸುವಂತೆ ಮಾಡಿದುದು ಶರಣರ ಬಹುದೊಡ್ಡ ಸಾಧನೆ. ಅವರ ಧರ್ಮದ ಪರಿಕಲ್ಪನೆ ಸರಳವಾದುದು, ಅಂತೆಯೇ ಯಥಾರ್ಥವಾದುದು. ಬಸವಣ್ಣನವರು 'ದಯೆಯೇ ಧರ್ಮದ ಮೂಲವಯ್ಯ' ಎಂದು ಸಾರುವ ಮೂಲಕ ಧರ್ಮವನ್ನು ಸರಳಗೊಳಿಸಿದರು. ಅಲ್ಲದೆ ಅವರು ಜೀವ ಕಾರುಣ್ಯ, ಅಹಿಂಸೆ, ಸದಾಚಾರಗಳು ಧರ್ಮದ ತಳಹದಿ, ಅದೇ ಧರ್ಮದ ನಿಜ ಸ್ವರೂಪ ಎಂದು ತಿಳಿಹೇಳಿದರು. ಅದು ಎಲ್ಲರೂ ಅವಲಂಬಿಸಬಹುದಾದದ್ದು ಅನುಸರಿಸಬಹುದಾದ್ದು ಎಂಬುದನ್ನು ಸ್ವತಃ ತೋರಿಸಿಕೊಟ್ಟರು.

ಶರಣರು ಇಹ–ಪರಗಳನ್ನು, ಲೌಕಿಕ–ಅಲೌಕಿಕಗಳನ್ನು ಎಂದೂ ಬೇರೆಬೇರೆಯಾಗಿ ಬಗೆಯಲಿಲ್ಲ. ಎರಡನ್ನೂ ಅಖಂಡವಾಗಿ ಸ್ವೀಕರಿಸಿದರು. ಸ್ವರ್ಗ ಮತ್ತು ನರಕಗಳ ಪರಿಕಲ್ಪನೆ

ಅವಾಸ್ತವಿಕ ಎಂದರು. ಅದಕ್ಕೆ ಅವರು 'ದೇವಲೋಕ, ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ' ಎಂದು ಘೋಷಿಸಿದರು. ಬಸವಣ್ಣನವರು 'ಆಚಾರವೇ ಸ್ವರ್ಗ, ಅನಾಚಾರವೇ ನರಕ' ಎಂದು ಸ್ವರ್ಗನರಕಗಳ ಬಗ್ಗೆ ಇದ್ದ ನಂಬಿಕೆಗಳ ಪುನರ್‌ಮೌಲ್ಯಮಾಪನ ಮಾಡುತ್ತಾರೆ. ಈ ನೆಲದ ಮೇಲೆಯೇ ಸ್ವರ್ಗವನ್ನು ಅರಳಿಸಿ ಮರ್ತ್ಯವನ್ನೇ ಕೈಲಾಸವನ್ನಾಗಿಸುವುದು ಶರಣರ ಆದರ್ಶವಾಗಿತ್ತು. ಸ್ವರ್ಗ ಎಂಬುದು ಎಲ್ಲೋ ಇದೆ ಎಂದು ನಂಬದೆ, ಅದರ ಕೀಲಿಕೈ ಮರ್ತ್ಯದಲ್ಲೇ ಇದೆ ಎಂಬುದನ್ನು ಖಚಿತಪಡಿಸಿದರು. ಏಕೆಂದರೆ, ಸ್ವರ್ಗಪ್ರವೇಶದ ಅರ್ಹತೆಯನ್ನು ಈ ಭೂಮಿಯಲ್ಲಿಯೇ ಸಂಪಾದಿಸಬೇಕು. 'ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು'. ಶರಣರ ದೃಷ್ಟಿಯಲ್ಲಿ ಮುಕ್ತಿ ಎಂಬುದು ಸತ್ತ ಮೇಲೆ ಪಡೆಯುವ ಪದವಿಯಲ್ಲ, ಬದುಕಿರುವಾಗಲೇ ಗಳಿಸಬೇಕಾದದ್ದು.

ಶರಣರು ಮಾನವೀಯ ದೌರ್ಬಲ್ಯಗಳನ್ನು ಸಹಜವೆಂದು ಒಪ್ಪಿಕೊಂಡವರು. ಮನುಷ್ಯ ಹುಟ್ಟಿನಿಂದಲೇ ಪರಿಪೂರ್ಣ ಎಂದು ಅವರು ಭಾವಿಸಲಿಲ್ಲ. ಆದರೆ ವಿಕಾಸದಲ್ಲಿ ಅವರಿಗೆ ಅಖಂಡ ನಂಬಿಕೆ. ಸಾಧನೆಯಿಂದ ನರ ಹರನಾಗಬಲ್ಲ ಎಂಬುದವರ ವಿಶ್ವಾಸ. ಎಲ್ಲರಿಗೂ ಅವರು ವೈರಾಗ್ಯವನ್ನು ಬೋಧಿಸಲಿಲ್ಲ. ಏಕೆಂದರೆ 'ಒಲಿವೆನೆಂಬುದು ಕಾಯಗುಣ' ಎಂಬ ವಾಸ್ತವವನ್ನು ಅವರು ಬಲ್ಲವರಾಗಿದ್ದರು.

> ಒಡಲುಗೊಂಡವ ಹಸಿವ, ಒಡಲುಗೊಂಡವ ಹುಸಿವ
> ಒಡಲುಗೊಂಡವನೆಂದು ನೀನೆನ್ನ ಜಡಿದೊಮ್ಮೆ ನುಡಿಯದಿರಾ!
> ನೀನೆನ್ನಂತೆ ಒಮ್ಮೆ ಒಡಲುಗೊಂಡು ನೋಡಾ! ರಾಮನಾಥ.

ಎಂದು ಶಿವನಿಗೆ ಸವಾಲು ಹಾಕುತ್ತಾನೆ ಜೇಡರ ದಾಸಿಮಯ್ಯ. ಒಟ್ಟಿನಲ್ಲಿ ತಪ್ಪು ಮಾಡುವುದು ಮನುಷ್ಯನ ಸಹಜ ಗುಣ. ಆದರೆ ಮಾಡಿದ ತಪ್ಪನ್ನು ತಿದ್ದಿಕೊಳ್ಳಬೇಕು, ಗೆದ್ದು ನಿಲ್ಲಬೇಕು ಎಂಬುದು ಶರಣರ ಅಭಿಮತ.

ಷಟ್‌ಸ್ಥಲ ಸಿದ್ಧಾಂತದ ಹಿನ್ನೆಲೆಯಲ್ಲಿ ಶರಣಸ್ಥಲದ ಪರಿಕಲ್ಪನೆಯನ್ನು ಇಲ್ಲಿ ಸಂಕ್ಷಿಪ್ತವಾಗಿ ಗಮನಿಸಬಹುದು. ಷಟ್‌ಸ್ಥಲ ಎಂದಾಗ ಸಾಧಕನು ಸಿದ್ಧಿಯನ್ನು ಪಡೆಯುವ ಮಾರ್ಗ ಕ್ರಮದ ಹಂತಗಳೆಂದು ಸ್ಥೂಲವಾಗಿ ಭಾವಿಸಬಹುದು. ಸ್ಥಲಕ್ಕೆ ಕೆಲವು ಕೃತಿಗಳು ವಿಶೇಷ ಅರ್ಥವನ್ನು ಹೇಳುತ್ತವೆ. ಮೊದಲ ಅಕ್ಷರವು ಸ್ಥಿತಿಯನ್ನೂ, ಎರಡನೆಯ ಅಕ್ಷರವು ಲಯವನ್ನೂ ಸೂಚಿಸಿ ಆ ಎರಡಕ್ಕೂ ಕಾರಣವಾದ ಮೂಲಶಕ್ತಿಯನ್ನು ಆ ಎರಡೂ ಅಕ್ಷರಗಳು ಸೂಚಿಸುತ್ತವೆ.

ಷಟ್‌ಸ್ಥಲದ ಉಪಾಂತ ಸ್ಥಲವೇ ಶರಣ ಸ್ಥಲ. ಹೀಗಾಗಿ ಸ್ಥಲದ ದ್ವಾರದ ಬಳಿ ನಿಂತ ಸಾಧಕನ ಉತ್ಕಟ ಸ್ಥಿತಿ ಇದಾಗಿರುತ್ತದೆ. ಶರಣನು ಜ್ಞಾನಿ, ನಿತ್ಯಸತ್ಯಗಳನು, ಅರಿತವನು, ದೇಹಮೋಹವನ್ನು ವರ್ಜಿಸಿದವನು, ಸ್ವಸ್ವರೂಪಜ್ಞಾನ ಪಡೆದವನು. ಪ್ರಾಣಲಿಂಗಸ್ಥಲ,

ಶರಣಸ್ಥಲಗಳು ಜ್ಞಾನಾತ್ಮಕವಾಗಿದ್ದ ಆಧ್ಯಾತ್ಮಿಕತೆಯ ಪರಿಪೂರ್ಣ ಅರಿವಿನಿಂದ ಕೂಡಿರುತ್ತವೆ. ಶರಣರು ತನ್ನ ಹಿಂದಿನ ಮಾರ್ಗಕ್ರಮದಲ್ಲಿ ಆಸೆಯನ್ನು ಗೆದ್ದು ಅಂಟಿದ್ದರೂ ಪ್ರಪಂಚಕ್ಕೆ ಅಂಟಿಯೂ ಅಂಟದಂತೆ ಇರುತ್ತಾನೆ. ಅವನ ಇರುವಿಕೆ ಹೊರಗಿನವರ ದೃಷ್ಟಿಗೆ ಉಳಿದವರಂತೆ ಕಂಡರೂ ಅವನ ಅಂತರ್‌ದೃಷ್ಟಿ ಸಂಪೂರ್ಣವಾಗಿ ಭಿನ್ನವಾಗಿರುತ್ತದೆ. ಪ್ರಾಣಲಿಂಗಸ್ಥಲದ ಅನುಭವ ಭಕ್ತಿಯು ಶರಣ ಸ್ಥಳದಲ್ಲಿ ಆನಂದಭಕ್ತಿಯ ಸ್ವರೂಪವನ್ನು ಧರಿಸುವುದು. ಅಂಗಸತಿ ಲಿಂಗಪತಿ ಭಾವದಲ್ಲಿ ಲಿಂಗಯ್ಯನೊಡನೆ ವ್ಯವಹರಿಸುವುದರಿಂದ ಉಂಟಾಗುವ ಸಾಮರಸ್ಯಾನುಭವದ ಸುಖವು ಅನುಪಮವಾದುದು.

ಸಿದ್ಧಾಂತ ಶಿಖಾಮಣಿಯಲ್ಲಿ ಶರಣಸ್ಥಲದ ವಿಷಯವನ್ನು ಹೇಳುವ ಭಾಗದಲ್ಲಿ–

ಸತೀವ ರಮಣೇ ಯಸ್ತು ಶಿವೇ ಶಕ್ತಿಂ ವಿಭಾವಯನ್ ।
ತದನ್ಯ ಮುಖಃ ಸೋಽಯಂ ಜ್ಞಾತಃ ಶರಣನಾಮವಾನ್ ॥

ಎಂದು ಹೇಳಲಾಗಿದೆ. ಪತಿವ್ರತೆಯ ತನ್ನ ಪತಿಯ ಹೊರತು ಇತರರ ವಿಷಯದಲ್ಲಿ ವಿಮುಖಳಾಗಿರುವಂತೆಯೇ ಹಾಗೆಯೇ ಯಾರು ತನ್ನನ್ನು ಶಿವನ ವಿಷಯದಲ್ಲಿ ಸತಿಯನ್ನಾಗಿ ಭಾವಿಸುವನೋ ಅವನು ಅನ್ಯದೇವತೆಗಳ ವಿಷಯದಲ್ಲಿ ವಿಮುಖನಾಗುವನೋ ಅವನನ್ನು ಶರಣನೆಂದು ತಿಳಿಯಬೇಕು. ಅಂತಹ ಗುಣವನ್ನು ಶರಣನಾದವನು ಸತತ ಪ್ರಯತ್ನದಿಂದ ರೂಢಿಸಿಕೊಳ್ಳಬೇಕು.

ವೀರಶೈವ ಧರ್ಮದ ಪರಿಭಾಷೆಯಲ್ಲಿ ಬರುವ ಶರಣ ಪರಿಕಲ್ಪನೆ ಬಹು ಉನ್ನತ ಭೂಮಿಕೆಯದಾಗಿದ್ದು ಶರಣರ ಘನ ವ್ಯಕ್ತಿತ್ವವು ಸಾಧನೆಯ ತುದಿಯಲ್ಲಿ ನಿಂತ ಭವ್ಯದರ್ಶನವನ್ನು ನೀಡುತ್ತದೆ. ಶರಣ ಎನ್ನುವುದು ಒಂದು ಧರ್ಮವಷ್ಟೇ ಅಲ್ಲ, ಅದು ಒಂದು ವಿಶಿಷ್ಟ ಮನೋಧರ್ಮವೂ ಆಗಿದೆ.

ಶರಣನ ಭವ್ಯ ವ್ಯಕ್ತಿತ್ವದ ಲಕ್ಷಣಗಳನ್ನು ಕೆಲವು ಮಟ್ಟಿಗೆ ಹೋಲುವ ಸಾಧಕನ ಸ್ಥಿತಿಯ ವರ್ತನೆ ಭಗವದ್ಗೀತೆಯ ಸ್ಥಿತಪ್ರಜ್ಞನ ವರ್ಣನೆಯಲ್ಲಿ ಕಂಡುಬರುತ್ತದೆ. ಆತ್ಮನಲ್ಲಿ ಬೇರು ಬಿಟ್ಟವನು, ಸುಖ–ದುಃಖಗಳಿಗೆ ತಳಮಳಗೊಳ್ಳದಿರುವವನು, ಯಾವುದರ ಬಗ್ಗೆಯೂ ಅತಿ ಮಮತೆ ಇಲ್ಲದೆ ಬಾಹ್ಯವಿಷಯಗಳಿಗೆ ಇಂದ್ರಿಯಗಳನ್ನು ಹರಿಯಬಿಡದೆ, ಆಮೆಯಂತೆ ತನ್ನ ಅವಯವಗಳನ್ನು ಒಳಸೆಳೆದುಕೊಳ್ಳುವವನು ಮುಂತಾದ ಸ್ಥಿತಪ್ರಜ್ಞನ ಕೆಲವು ಲಕ್ಷಣಗಳು ಶರಣರ ವಿಶಿಷ್ಟ ಗುಣಗಳನ್ನು ನೆನಪಿಗೆ ತರುವಂತಿದೆ.

□

ವಾರ್ತಾವಿಹಾರ

ಕುಮಾರಸ್ವಾಮಿ ವಿರಕ್ತಮಠ

ಎಐ ತಂತ್ರಜ್ಞಾನದಿಂದ ಎಲ್ಲ ಕ್ಷೇತ್ರದಲ್ಲೂ ಬದಲಾವಣೆ

ಎಐ ತಂತ್ರಜ್ಞಾನದಿಂದ ಎಲ್ಲ ಕ್ಷೇತ್ರದಲ್ಲೂ ಬದಲಾವಣೆಯ ಪರ್ವ ಆರಂಭವಾಗಿದೆ ಎಂದು ಸಚಿವರಾದ ಡಾ. ಯತೀಂದ್ರ ಸಿದ್ದರಾಮಯ್ಯನವರು ಜುಲೈ 1ರಂದು ಮೈಸೂರು ಜೆಎಸ್ಎಸ್ ಆಸ್ಪತ್ರೆಯಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಜೆಎಸ್ಎಸ್ ಎಹೆಚ್ಇಆರ್ ವತಿಯಿಂದ ಇಡಿಜಿಇ, ಜಿಐಎಫ್ಟಿ ಹಾಗೂ ಎಐ ಇನ್ ಹೆಲ್ತ್‌ಕೇರ್ ಕೋರ್ಸ್‌ಗಳ ಉದ್ಘಾಟನೆ ಹಾಗೂ ರಾಷ್ಟ್ರೀಯ ವೈದ್ಯರ ದಿನಾಚರಣೆಯ ಅಂಗವಾಗಿ ಮಾತನಾಡುತ್ತಾ ತಿಳಿಸಿದರು. ಆರೋಗ್ಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ವೈದ್ಯರು, ದಾದಿಯರು ಸೇರಿದಂತೆ ಎಲ್ಲ ಸಿಬ್ಬಂದಿಯೂ ಕೃತಕ ಬುದ್ದಿಮತ್ತೆ ತಂತ್ರಜ್ಞಾನದ ಕುರಿತು ತರಬೇತಿ ಪಡೆಯುವುದು ಇಂದಿನ ಅಗತ್ಯ. ಕೃತಕ ಬುದ್ದಿಮತ್ತೆ ತಂತ್ರಜ್ಞಾನವು ಇಂದು ಪ್ರತಿಯೊಂದು ಕ್ಷೇತ್ರದಲ್ಲೂ ಕ್ರಾಂತಿಕಾರಕ ಬದಲಾವಣೆಗಳನ್ನು ತರುತ್ತಿದೆ. ವೈದ್ಯಕೀಯ ಕ್ಷೇತ್ರವೂ ಇದಕ್ಕೆ ಹೊರತಲ್ಲ. ಹಾಗಾಗಿ ಮುಂದಿನ ದಿನಗಳಲ್ಲಿ ಆರೋಗ್ಯ ಸೇವೆಯಲ್ಲಿ ಮಹತ್ತರ ಬದಲಾವಣೆಗಳನ್ನು ತರಲಿದೆ. ಆದ್ದರಿಂದ ವೈದ್ಯರು, ದಾದಿಯರು ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರು ಸೂಕ್ತ ತರಬೇತಿ ಪಡೆದು ಕೊಳ್ಳುವುದು ಅವಶ್ಯವಾಗಿದೆ. ಜೆಎಸ್ಎಸ್ ಸಂಸ್ಥೆಯು ಎಐ ಇನ್ ಇಂಡಿಯನ್ ಹೆಲ್ತ್‌ಕೇರ್ ಎಂಬ ಕೋರ್ಸ್ ಆರಂಭಿಸಿರುವುದು ಅತ್ಯಂತ ಶ್ಲಾಘನೀಯ. ಸಂಸ್ಥೆಯು ಈ ವಿನೂತನ ಪ್ರಯತ್ನವನ್ನು ಆರಂಭಿಸಿರುವುದು ಅತ್ಯುತ್ತಮ ಹೆಜ್ಜೆಯಾಗಿದೆ ಎಂದರು.

ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸ ಅಧ್ಯಕ್ಷತೆ ವಹಿಸಿದ್ದರು. ಭಾರತ ಸರ್ಕಾರದ ನೀತಿ ಆಯೋಗದ ಸದಸ್ಯರಾದ ಡಾ. ಆರ್. ಬಾಲಸುಬ್ರಹ್ಮಣ್ಯಂರವರು ಇಡಿಜಿಐ ಮತ್ತು ಜಿಐಎಫ್ಟಿಗಳನ್ನು ಉದ್ಘಾಟಿಸಿ ಮಾತನಾಡಿದರು. ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ಸಮಕುಲಪತಿಗಳಾದ ಡಾ. ಬಿ. ಸುರೇಶ್‌ರವರು ಹೊಸ ಯೋಜನೆಗಳ ಬಗ್ಗೆ ವಿವರಣೆ ನೀಡಿದರು. ಕುಲಪತಿಗಳಾದ ಡಾ. ಹೆಚ್. ಬಸವನ ಗೌಡಪ್ಪ ಸ್ವಾಗತಿಸಿದರು. ಆಸ್ಪತ್ರೆ ನಿರ್ದೇಶಕರಾದ ಡಾ. ಸಿ.ಪಿ. ಮಧು ವೈದ್ಯರ ದಿನಾಚರಣೆಯ ಕುರಿತು ಮಾತನಾಡಿದರು. ಡಾ. ವಿಕ್ರಮ್ ಪಾಟೀಲ್, ಡಾ. ಪಿ. ನಾಗಭೂಷಣ್ ಕೋರ್ಸ್‌ಗಳ ಬಗ್ಗೆ ಮಾಹಿತಿ ನೀಡಿದರು. ಡಾ. ಬಿ. ಮಂಜುನಾಥ್ ವಂದಿಸಿದರು.

ಅವಿಸ್ಮರಣೀಯ ಸೇವೆ ಸಲ್ಲಿಸಿದ ಮುಮ್ಮಡಿ ನಿರ್ವಾಣ ಶ್ರೀಗಳು

ಐದು ದಶಕಗಳ ಕಾಲ ಅವಿಸ್ಮರಣೀಯ ಸೇವೆ ಸಲ್ಲಿಸಿದ ಕೀರ್ತಿ ಮುಮ್ಮಡಿ ನಿರ್ವಾಣ ಶ್ರೀಗಳಿಗೆ ಸಲ್ಲುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 3ರಂದು ಕನಕಪುರ ದೇಗುಲಮಠದ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರ ಪುಣ್ಯ ಸಂಸ್ಮರಣೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಕನಕಪುರದ ಶ್ರೀ ದೇಗುಲಮಠದ ಪೀಠಾಧ್ಯಕ್ಷರಾಗಿ ರಾಜ್ಯ ಸೇರಿದಂತೆ ತಮಿಳುನಾಡು ಭಾಗದಲ್ಲೂ ಅಪಾರ ಭಕ್ತರನ್ನು ಅವರು ಹೊಂದಿದ್ದರು. ಸ್ವಾತಂತ್ರ್ಯಪೂರ್ವದಿಂದಲೂ ದೇಗುಲಮಠವು ಶೈಕ್ಷಣಿಕ ಕ್ರಾಂತಿ ಮಾಡಿ ಬಡ ಕುಟುಂಬಗಳ ಜ್ಞಾನಾರ್ಜನೆಗೆ ದಾರಿದೀಪವಾಗಿದೆ ಮಾತೃ ಹೃದಯವನ್ನು ಹೊಂದಿದ್ದ ಶ್ರೀಗಳು ಸೌಮ್ಯ ಸ್ವಭಾವದ ಮಿತಭಾಷಿಗಳಾಗಿದ್ದರು. ಎಲ್ಲ ಭಕ್ತರ ಕಷ್ಟ ಸುಖಗಳಿಗೆ ಅತ್ಯಂತ ಪ್ರೀತಿಯಿಂದ ಸ್ಪಂದಿಸುತ್ತಿದ್ದರು ಎಂದು ಹೇಳಿದರು.

ಶ್ರೀ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳವರು ಐದು ದಶಕಗಳ ಕಾಲ ದೇಗುಲಮಠಕ್ಕೆ ಅಮೂಲ್ಯ ಸೇವೆ ಸಲ್ಲಿಸಿ ಅಭಿವೃದ್ಧಿ ಮಾಡಿದ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳ ಕೊಡುಗೆ ಅಪಾರ. ಮುಮ್ಮಡಿ ನಿರ್ವಾಣ ಶ್ರೀಗಳು ಮಠಕ್ಕೆ ಬಂದ ಸಂದರ್ಭದಲ್ಲಿ ಕನಕಪುರ ಮೈಸೂರು ಭಾಗದೊಂದಿಗೆ ಹೆಚ್ಚು ಸಂಪರ್ಕ ಬೆಳೆಸಿಕೊಂಡಿತ್ತು. ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು ಬಡವ ಶ್ರೀಮಂತ ಎಂಬ ಭೇದವಿಲ್ಲದೆ ಎಲ್ಲರನ್ನೂ ಸಮಾನವಾಗಿ ಕಂಡು ಅವರ ಆಶಯಗಳನ್ನು ಈಡೇರಿಸುತ್ತಿದ್ದ ಶ್ರೀ ಶಿವಕುಮಾರ ಮಹಾಸ್ವಾಮಿಗಳ ಒಡನಾಡಿಗಳಲ್ಲಿ ಒಬ್ಬರಾಗಿದ್ದರು ಎಂದರು.

ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಶ್ರೀಮಠಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ದೇಹಕ್ಕೆ ಅಂತ್ಯವಿದೆ, ಗುರುಗಳ ಚೇತನಕ್ಕೆ ಅಂತ್ಯವಿಲ್ಲ ಎಂಬುದು ನಮ್ಮ ನಂಬಿಕೆ. ಅವರ ಮಾರ್ಗದರ್ಶನದಲ್ಲಿ ಬದುಕುತ್ತಿದ್ದೇವೆ. ಗುರುವೇ ಜಂಗಮ, ಗುರುವೇ ಆಚಾರ, ಗುರುವೇ ಶಿವಪ್ರಸಾದ ಎಂದು ಹಿರಿಯರು ಮಾರ್ಗದರ್ಶನ ನೀಡಿದ್ದಾರೆ. ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳವರು ಬೆಂಗಳೂರು ದಕ್ಷಿಣ ಜಿಲ್ಲೆ ಹಾಗೂ ಸುತ್ತಮುತ್ತಲ ಪ್ರದೇಶಕ್ಕೆ ದೊಡ್ಡ ದೀಪದಂತಿದ್ದರು ಎಂದು ಸ್ಮರಿಸಿದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮುಮ್ಮಡಿ ನಿರ್ವಾಣ ಶ್ರೀಗಳು ದೇಗುಲ ಮಠವನ್ನು ಸಾಮಾಜಿಕ ಕಳಕಳಿಯಿಂದ ಧರ್ಮ, ಸಂಸ್ಕೃತಿ, ಧಾರ್ಮಿಕ ಪರಂಪರೆಗಳನ್ನು ನೈತಿಕ ಮೌಲ್ಯಗಳೊಂದಿಗೆ ಮುನ್ನಡೆಸಿಕೊಂಡು ಬಂದಿರುವ ಆದರ್ಶವಾದಿಗಳು. ಅವರ ದಾರಿಯಲ್ಲಿ ಕಿರಿಯ ಶ್ರೀಗಳು ಮಠವನ್ನು ಮುನ್ನಡೆಸಲಿ, ನಮ್ಮೆಲ್ಲರ ಸಹಕಾರ ಸದಾ ಇರುತ್ತದೆ ಎಂದು ತಿಳಿಸಿದರು.

ಕೇಂದ್ರದ ರಾಜ್ಯ ಸಚಿವರಾದ ಶ್ರೀ ವಿ. ಸೋಮಣ್ಣನವರು ಲಿಂಗೈಕ್ಯ ಶ್ರೀಗಳು 50 ವರ್ಷ ಪೀಠಾಧಿಪತಿಗಳಾಗಿ ಮಠವನ್ನು ಇಷ್ಟು ಎತ್ತರಕ್ಕೆ ಬೆಳೆಸಿದ್ದಾರೆ. ಸಾಮಾಜಿಕ, ಶೈಕ್ಷಣಿಕ,

ಧಾರ್ಮಿಕವಾಗಿ ಮಠದಲ್ಲಿ ಹೊಸ ಬದಲಾವಣೆಗಳನ್ನು ತಂದು ಪ್ರಗತಿಗೆ ಕಾರಣರಾಗಿದ್ದಾರೆ ಎಂದು ಹೇಳಿದರು.

ಕನಕಪುರದ ಡಾ. ಶ್ರೀ ಚನ್ನಬಸವ ಸ್ವಾಮಿಗಳು ಲಿಂಗೈಕ್ಯ ಶ್ರೀಗಳ ಪುತ್ತಳಿಗೆ ರಾಜೋಪಚಾರ ಸಹಿತ ವಿಶೇಷಪೂಜೆ ಸಲ್ಲಿಸಿ, ಪೂಜ್ಯರುಗಳು ಹಾಗೂ ಗಣ್ಯರುಗಳನ್ನು ಅಭಿನಂದಿಸಿ ಸನ್ಮಾನಿಸಿದರು.

ನೊಣವಿನಕೆರೆ, ಬೇಲಿಮಠ, ಸಾಲೂರು ಮಠ, ಸೋಮಹಳ್ಳಿ ಮಠಗಳ ಶ್ರೀಗಳು, ಶಾಸಕರುಗಳಾದ ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಶ್ರೀ ಎಸ್. ರವಿ, ಬಮುಲ್ ಅಧ್ಯಕ್ಷರಾದ ಶ್ರೀ ಡಿ.ಕೆ. ಸುರೇಶ್, ಡಾ. ಕೆ. ಅನ್ನದಾನಿ, ಶ್ರೀಮತಿ ಗಂಗಾಂಬಿಕೆ ಮಲ್ಲಿಕಾರ್ಜುನ್, ಶ್ರೀಮತಿ ಪದ್ಮಾವತಿ, ಶ್ರೀ ಪುಟ್ಟರಾಜು, ಶ್ರೀ ಎಂ. ರುದ್ರೇಶ್, ಶ್ರೀ ಜಿ. ಮರಿಸ್ವಾಮಿ, ಶ್ರೀಮತಿ ವೀಣಾ ಕಾಶಪ್ಪನವರ ಮೊದಲಾದವರುಗಳು ಉಪಸ್ಥಿತರಿದ್ದರು.

ವಚನ ಸಾಹಿತ್ಯದಲ್ಲಿ ಎಲ್ಲ ಸಮಸ್ಯೆಗಳಿಗೂ ಪರಿಹಾರವಿದೆ

ವಚನ ಸಾಹಿತ್ಯದಲ್ಲಿ ಎಲ್ಲ ಸಮಸ್ಯೆಗಳಿಗೂ ಪರಿಹಾರವಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 7ರಂದು ಬೆಂಗಳೂರಿನಲ್ಲಿ ನಡೆದ 14ನೇ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಜಗತ್ತಿನಲ್ಲಿ ಇಂದು ಯುದ್ಧ, ಭಯ, ಭೀತಿ, ದ್ವೇಷ, ಅಸೂಯೆಗಳೇ ತುಂಬಿವೆ. ಇಂತಹ ಕಠಿಣ ಪರಿಸ್ಥಿತಿಯ ಕಾಲದಲ್ಲಿ ಈ ಎಲ್ಲದಕ್ಕೂ ಪರಿಹಾರ ವಚನ ಸಾಹಿತ್ಯದಲ್ಲಿದೆ. ಬಸವಾದಿ ಶರಣರ ವಚನಗಳು ಸಾರ್ವಕಾಲಿಕ ಸತ್ಯದಿಂದ ಕೂಡಿವೆ. ಎಲ್ಲರಿಗೂ ಅರ್ಥವಾಗುವಂತೆ ಅತ್ಯಂತ ಸರಳ ಭಾಷೆಯಲ್ಲಿ ಶರಣರು ವಚನಗಳನ್ನು ರಚಿಸಿದರು. ಇದರಿಂದ ಹೆಚ್ಚು ಜನರ ಮನೆ ಮತ್ತು ಮನಗಳಿಗೆ ವಚನ ಸಾಹಿತ್ಯ ತಲುಪಲು ಸಾಧ್ಯವಾಯಿತು ಎಂದು ಹೇಳಿದರು.

ಶ್ರೀ ಸಿದ್ದಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಶರಣರ ವಚನ, ಚಿಂತನೆಗಳನ್ನು ಕೇವಲ ಭಾಷಣ, ಹಾಡುಗಳಿಗೆ ಸೀಮಿತಗೊಳಿಸದೆ, ಅವುಗಳನ್ನು ಅಳವಡಿಸಿಕೊಂಡು ಬದುಕಬೇಕಿದೆ ಎಂದರು.

ಸಮ್ಮೇಳನಾಧ್ಯಕ್ಷರಾದ ಶ್ರೀ ಗೊ.ರು. ಚನ್ನಬಸಪ್ಪನವರು ವಚನ ಸಾಹಿತ್ಯವನ್ನು ಪ್ರಾಥಮಿಕ ಶಿಕ್ಷಣದ ಹಂತದಿಂದ ಸ್ನಾತಕೋತ್ತರ ಹಂತದವರೆಗಿನ ಪಠ್ಯಕ್ರಮದಲ್ಲಿ ಕಡ್ಡಾಯವಾಗಿ ಸೇರಿಸಬೇಕು. 'ವಚನ ವಿಶ್ವವಿದ್ಯಾಲಯ'ದ ಆರಂಭಕ್ಕೆ ರಾಜ್ಯ ಸರಕಾರ ಅಗತ್ಯ ನೆರವು ಒದಗಿಸಬೇಕು ಎಂದು ತಿಳಿಸಿದರು.

ಸಚಿವರಾದ ಶ್ರೀ ಎಂ.ಬಿ. ಪಾಟೀಲ್‌ರವರು ವೀರಶೈವ ಲಿಂಗಾಯತ ಜಾತಿರಹಿತ ಧರ್ಮವಾಗಿದೆ. ಆದರೆ ಇಂದು ಅದನ್ನು ಕೇವಲ ಒಂದು ಜಾತಿಯನ್ನಾಗಿ

ಸೀಮಿತಗೊಳಿಸಲಾಗುತ್ತಿದೆ. ಬಸವಣ್ಣನವರ ಪರಿಕಲ್ಪನೆಯ ಜಾತಿರಹಿತ ಸಮಾಜ ನಿರ್ಮಾಣ ಮಾಡಲು ನಾವೆಲ್ಲರೂ ಶ್ರಮಿಸಬೇಕು ಎಂದರು.

ಸಮ್ಮೇಳನದ ಸ್ಮರಣ ಸಂಚಿಕೆ 'ಕಲ್ಯಾಣ ಸಂಗಮ' ಹಾಗೂ 'ಮಹಾಮನೆ' ಮಾಸಿಕ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

ಶಾಸಕರಾದ ಶ್ರೀ ಎಂ. ಕೃಷ್ಣಪ್ಪನವರು ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಭಾವಚಿತ್ರ ಅನಾವರಣಗೊಳಿಸಿ ಸಮಾಜದಲ್ಲಿ ಎಲ್ಲರೂ ಪರಸ್ಪರ ಪ್ರೀತಿ–ವಿಶ್ವಾಸಗಳಿಂದ ಜೀವನ ಸಾಗಿಸಬೇಕೆಂದು ತಿಳಿಸಿದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್ ಸ್ವಾಗತಿಸಿದರು. ಶ್ರೀ ಕೆ.ವಿ. ನಾಗರಾಜಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ, ಮಾಜಿ ಉಪ ಮೇಯರ್ ಶ್ರೀ ಬಿ.ಎಸ್. ಪುಟ್ಟರಾಜುರವರು ಉಪಸ್ಥಿತರಿದ್ದರು. ಶ್ರೀ ಸೋಮಶೇಖರ್ ಶಿ. ಗಾಂಜಿ ವಂದಿಸಿದರು. ಶ್ರೀಮತಿ ದಿವ್ಯ ಆಲೂರು ಕಾರ್ಯಕ್ರಮ ನಿರೂಪಿಸಿದರು.

ಜ್ಞಾನಕ್ಕೆ ಮಿಗಿಲಾದ ಮತ್ತೊಂದು ಸಂಪತ್ತು ಎಲ್ಲಿಯೂ ಸಿಗದು

ಜ್ಞಾನವೆಂಬುದು ಪವಿತ್ರವಾದ ಸಂಪತ್ತು, ಅದಕ್ಕೆ ಮಿಗಿಲಾದ ಮತ್ತೊಂದು ಸಂಪತ್ತನ್ನು ಗುರುತಿಸಲು ಸಾಧ್ಯವಿಲ್ಲ ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 10ರಂದು ನಂಜನಗೂಡು ತಾಲ್ಲೂಕು ಶಿರಮಳ್ಳಿಯಲ್ಲಿ ಶ್ರೀ ಮುರಗೀಸ್ವಾಮಿ ವಿರಕ್ತಮಠದಲ್ಲಿ ಶ್ರೀ ಬಸವರಾಜ ಸ್ವಾಮಿಗಳ ಸಂಸ್ಮರಣೋತ್ಸವ ಹಾಗೂ ಶಾಲಾ ಕಟ್ಟಡದ ಶಿಲಾನ್ಯಾಸದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಜ್ಞಾನಕ್ಕೆ ಸಮಾನವಾದ ಮತ್ತೊಂದು ವಸ್ತು ಜಗತ್ತಿನಲ್ಲಿ ಯಾವುದೂ ಇಲ್ಲ. ಜ್ಞಾನವನ್ನು ಯಾರಿಂದಲೂ ಕದಿಯಲು ಸಾಧ್ಯವಿಲ್ಲ. ಅಂತಹ ಜ್ಞಾನವನ್ನು ಸಂಪಾದಿಸುವಂತೆ ಮಕ್ಕಳನ್ನು ರೂಪಿಸುವುದು ತಂದೆ–ತಾಯಿಗಳ ಕರ್ತವ್ಯವಾಗಿದೆ. ಜ್ಞಾನ ನೀಡುವುದರ ಜೊತೆಗೆ ಸಂಸ್ಕಾರವನ್ನು ಕಲಿಸುವುದು ಮಠಗಳ ಕರ್ತವ್ಯ. ಶಿರಮಳ್ಳಿ ಮಠದ ಆವರಣದಲ್ಲಿ ಶಾಲೆಯನ್ನು ಪ್ರಾರಂಭಿಸಿ ಗ್ರಾಮೀಣ ಮಕ್ಕಳ ಶಿಕ್ಷಣಕ್ಕೆ ನೆರವಾಗುವ ಮೂಲಕ ಮಠ ಮತ್ತು ಭಕ್ತರ ಬಾಂಧವ್ಯ ಬೆಳೆಸಲು ಮುಂದಾಗುತ್ತಿದ್ದಾರೆ ಎಂದು ತಿಳಿಸಿದರು.

ಮಾಜಿ ಸಂಸದರಾದ ಶ್ರೀ ರಮೇಶ್ ಕತ್ತಿಯವರು ಹಿಂದಿನ ಶಿಕ್ಷಣ ಪದ್ದತಿಯಲ್ಲಿ ಗುರು – ಶಿಷ್ಯರ ನಡುವೆ ಅನ್ಯೋನ್ಯತೆಯಿಂದ ಕೂಡಿದ ನೈತಿಕ ಶಿಕ್ಷಣವನ್ನು ಕಲಿಸುತ್ತಿದ್ದರು. ಆದರೆ ಇಂದಿನ ಶಿಕ್ಷಣ ಪದ್ಧತಿಯಲ್ಲಿ ಸಂಸ್ಕಾರ, ನೈತಿಕತೆ ಮಾಯವಾಗಿದೆ. ಮಕ್ಕಳಿಗೆ ತಂದೆ–ತಾಯಿಗಳು ಭಾರವಾಗಿದ್ದಾರೆ. ಸಮಾಜದಲ್ಲಿ ಕೌಟುಂಬಿಕ ಸಂಬಂಧಗಳು ಕುಸಿದಿವೆ.

ಆದ್ದರಿಂದ ವಿದ್ಯಾರ್ಥಿಗಳಿಗೆ ಪಠ್ಯ ವಿಷಯದ ಜೊತೆಗೆ ಸಂಸ್ಕಾರಯುತ ನೈತಿಕ ಶಿಕ್ಷಣದ ಅಗತ್ಯವಿದೆ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಕನಕಪುರ, ಶಿರಮಳ್ಳಿ ಶ್ರೀಗಳು, ಭಾಲ್ಕಿ ಕಿರಿಯ ಶ್ರೀಗಳು, ಮಾಜಿ ಶಾಸಕರಾದ ಶ್ರೀ ಬಿ. ಹರ್ಷವರ್ಧನ್, ಶ್ರೀ ಬಿ.ಡಿ. ಹಿರೇಮಠ, ಶ್ರೀ ಶಿವಶಂಕರಪ್ಪ ಸಾಹುಕಾರ, ಶ್ರೀ ಹೆಚ್.ವಿ. ರಾಜೀವ್ ಮೊದಲಾದವರು ಉಪಸ್ಥಿತರಿದ್ದರು.

ಸೇವೆಯೇ ಸಮಾಜದ ಅಭಿವೃದ್ಧಿಗೆ ಮೂಲ

ಸಮಾಜದ ಅಭಿವೃದ್ಧಿ ಸರ್ಕಾರದ ಕಾರ್ಯಕ್ರಮಗಳಿಂದ ಮಾತ್ರ ಸಾಧ್ಯವಿಲ್ಲ, ಸಾರ್ವಜನಿಕರೂ ಜನಪರ ಸೇವಾ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಾಗ ಮಾತ್ರ ನಿಜವಾದ ಸಾಮಾಜಿಕ ಪರಿವರ್ತನೆ ಸಾಧ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 12ರಂದು ಹಾಸನದಲ್ಲಿ ಜಿಲ್ಲಾ ನಾಗರಿಕರ ಹಿತರಕ್ಷಣಾ ವೇದಿಕೆ ಹಾಗೂ ವಿವಿಧ ಸಂಘ ಸಂಸ್ಥೆಗಳು ಆಯೋಜಿಸಿದ್ದ ಹಿರಿಯ ಸಾಮಾಜಿಕ ಹೋರಾಟಗಾರರಾದ ಡಾ. ವೈ.ಎಸ್. ವೀರಭದ್ರಪ್ಪನವರ ಅಭಿನಂದನೆ ಹಾಗೂ ಜೀವನಚರಿತ್ರೆ 'ಸೇವಾರತ್ನ' ಕೃತಿ ಬಿಡುಗಡೆಯ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಸರ್ಕಾರಗಳ ಅಭಿವೃದ್ಧಿ ಕಾರ್ಯಗಳಿಗೆ ಪೂರಕವಾಗಿ ಸಮಾಜದ ವಿವಿಧ ಕ್ಷೇತ್ರಗಳ ನಾಗರಿಕರು ಅವರ ಕೈಲಾದ ಸೇವೆಯನ್ನು ಸಲ್ಲಿಸುವುದು ಅತ್ಯಂತ ಶ್ಲಾಘನೀಯ ಕಾರ್ಯವಾಗಿದೆ. ಬಡವರು, ದೀನ ದಲಿತರು ಹಾಗೂ ಸಮಾಜದ ಹಿಂದುಳಿದ ವರ್ಗಗಳ ಏಳಿಗೆಗಾಗಿ ನಿಸ್ವಾರ್ಥ ಸೇವೆ ಸಲ್ಲಿಸುವುದೇ ನಿಜವಾದ ಮಾನವೀಯತೆ. ಡಾ. ವೈ.ಎಸ್. ವೀರಭದ್ರಪ್ಪನವರು ಕಳೆದ ಐದು ದಶಕಗಳಿಂದ ನಿರಂತರವಾಗಿ ಸಮಾಜಮುಖಿ ಕಾರ್ಯಗಳನ್ನು ನಡೆಸಿಕೊಂಡು ಬಂದಿದ್ದಾರೆ. ಅವರ ಸೇವೆಯನ್ನು ಗುರುತಿಸಿ ಗೌರವಿಸುತ್ತಿರುವುದು ಸಂತಸದ ವಿಷಯ ಎಂದು ಹೇಳಿದರು.

ಮಾಜಿ ಸಚಿವರು ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಡಾ. ವೀರಭದ್ರಪ್ಪನವರು ಭಾರತ್ ಸ್ಕೌಟ್ಸ್ ಮತ್ತು ಗೈಡ್ ಜಿಲ್ಲಾ ಆಯುಕ್ತರಾಗಿ ಅತ್ಯುತ್ತಮ ಸೇವೆ ಸಲ್ಲಿಸುತ್ತಿದ್ದಾರೆ. ವಿವಿಧ ಸಂಘ–ಸಂಸ್ಥೆಗಳ ಮೂಲಕ ಸಾರ್ವಜನಿಕ ಹಿತಕ್ಕಾಗಿ ಶ್ರಮಿಸುತ್ತಿರುವ ಅವರ ಜೀವನ ಯುವಜನತೆಗೆ ಮಾದರಿಯಾಗಿದೆ. ಇಂತಹ ಸೇವಾ ಮನೋಭಾವವನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು ಎಂದರು.

ಮಾಜಿ ಸಚಿವರಾದ ಶ್ರೀ ಜೆ.ಸಿ. ಮಾಧುಸ್ವಾಮಿಯವರು ಸಮಾಜದ ಒಳಿತಿಗಾಗಿ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ದುಡಿಯುವ ಅನೇಕರು ಬೆಳಕಿಗೆ ಬಾರದೇ ಉಳಿದಿದ್ದಾರೆ. ಸಮಾಜಕ್ಕೆ ಸೇವೆ ಸಲ್ಲಿಸಿರುವವರನ್ನು ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ಗುರುತಿಸಿ ಗೌರವಿಸುವುದು ಉತ್ತಮ ಪರಂಪರೆ. ವೃತ್ತಿಯ ಜೊತೆಗೆ ಸಾಮಾಜಿಕ ಸೇವೆಗೆ

ಸಮಯ ಮೀಸಲಿಟ್ಟು ಜನೋಪಯೋಗಿ ಕಾರ್ಯಗಳನ್ನು ನಡೆಸುತ್ತಿರುವ ಡಾ. ವೀರಭದ್ರಪ್ಪನವರ ಸೇವೆ ಶ್ಲಾಘನೀಯ ಎಂದು ಹೇಳಿದರು.

ಸಂಸದರಾದ ಶ್ರೀ ಶ್ರೇಯಸ್ ಪಟೇಲ್‌ರವರು ಹಾಸನ ಜಿಲ್ಲೆ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಅನೇಕ ಹಿರಿಯರನ್ನು ಹೊಂದಿದೆ. ಅಂತಹವರಲ್ಲಿ ಡಾ. ವೀರಭದ್ರಪ್ಪನವರ ಸೇವೆ ವಿಶಿಷ್ಟ ಸ್ಥಾನ ಪಡೆದಿದ್ದು, ಅವರಂತಹ ವ್ಯಕ್ತಿಗಳು ಜಿಲ್ಲೆಯ ಅಭಿವೃದ್ಧಿ ಚಿಂತನೆಗೆ ಪ್ರೇರಣೆಯಾಗಿದ್ದಾರೆ ಎಂದರು.

ಹಾಸನ ಆದಿಚುಂಚನಗಿರಿ ಶಾಖಾಮಠದ ಶ್ರೀ ಶಂಭುನಾಥ ಸ್ವಾಮಿಗಳು, ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮಿಗಳು, ಶಾಸಕರಾದ ಶ್ರೀ ಕೆ.ಎಂ. ಮಂಜು, ಶ್ರೀ ಹೆಚ್.ಪಿ. ಸ್ವರೂಪ್, ಶ್ರೀ ಸಿ.ಎನ್. ಬಾಲಕೃಷ್ಣ, ಕರ್ನಾಟಕ ರಾಜ್ಯ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶ್ರೀ ಶಿವಾನಂದ ತಗಡೂರು, ಶ್ರೀ ಬಿ.ಆರ್. ಗುರುದೇವ್, ಶ್ರೀ ಪಟೇಲ್ ಶಿವಪ್ಪ, ಶ್ರೀ ಜಿ.ಎಲ್. ಮುದ್ದೇಗೌಡ, ಶ್ರೀ ಬಿ.ಪಿ. ಐಸಾಮಿಗೌಡ ಮೊದಲಾದವರು ಉಪಸ್ಥಿತರಿದ್ದರು. ಶ್ರೀ ರವಿ ನಾಕಲಗೂಡು ಸ್ವಾಗತಿಸಿದರು. ಶ್ರೀಮತಿ ವೈ.ವಿ. ಗಂಧನ ತೇಜಸ್ ವಂದಿಸಿದರು. ಶ್ರೀಮತಿ ಸವಿತಾ ಶಿವಕುಮಾರ್ ಕಾರ್ಯಕ್ರಮ ನಿರೂಪಿಸಿದರು.

ಜಾಗತಿಕ ಸಾಂಸ್ಕೃತಿಕ ನಾಯಕ ಬಸವಣ್ಣ

ಇಡೀ ವಿಶ್ವವೇ ಬಸವಣ್ಣನವರ ತತ್ವಾದರ್ಶಗಳನ್ನು ಇಷ್ಟಪಡುತ್ತಿದ್ದು, ಅವರು ಜಾಗತಿಕವಾಗಿ ಸಾಂಸ್ಕೃತಿಕ ನಾಯಕರಾಗಿದ್ದಾರೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 25ರಂದು ಯಳಂದೂರಿನಲ್ಲಿ ವೀರಶೈವ–ಲಿಂಗಾಯತ ಮಹಾಸಭಾ, ಬಸವ ಜಯಂತಿ ಆಚರಣಾ ಸಮಿತಿ ಹಾಗೂ ಬಸವ ಬಳಗ ಒಕ್ಕೂಟಗಳ ವತಿಯಿಂದ ಆಯೋಜಿಸಿದ್ದ ಬಸವ ಉತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಬಸವಣ್ಣ ನಮ್ಮ ದೇಶದ ಹೆಮ್ಮೆಯಾಗಿದ್ದಾರೆ. ಬಸವ ಜಯಂತಿಯನ್ನು ವಿಶ್ವದ ಇತರೆ ರಾಷ್ಟ್ರಗಳಲ್ಲೂ ಆಚರಿಸುವ ವಾಡಿಕೆ ಹೆಚ್ಚಾಗುತ್ತಿದೆ. ನಮ್ಮ ರಾಜ್ಯದ ಪ್ರತಿ ಗ್ರಾಮಗಳಲ್ಲೂ ಜಯಂತಿ ಆಚರಿಸಿಕೊಂಡು ಬರಲಾಗುತ್ತಿದೆ ಎಂದು ಹೇಳಿದರು.

ಶಾಸಕರಾದ ಶ್ರೀ ಎ.ಆರ್. ಕೃಷ್ಣಮೂರ್ತಿಯವರು ಬಸವಣ್ಣ ಜಗತ್ತಿಗೆ ಮಾನವ ಧರ್ಮ ಏನು ಎಂಬುದನ್ನು ತೋರಿಸಿಕೊಟ್ಟ ಮಹಾನ್ ದಾರ್ಶನಿಕರಾಗಿದ್ದಾರೆ. ಮಹಾಮನೆಯ ಇವರ ಕಲ್ಪನೆಯೇ ಅತ್ಯದ್ಭುತವಾಗಿದೆ. ಎಲ್ಲರಿಗೂ ಅರ್ಥವಾಗುವಂತೆ ವಚನಗಳ ಮೂಲಕ ತತ್ವಗಳನ್ನು ಹೇಳಿಕೊಟ್ಟ ಮಹಾನ್ ಸಂತರಾಗಿದ್ದಾರೆ. ಇವರ ತತ್ವಾದರ್ಶಗಳು ನಮಗೆ ಆದರ್ಶಪ್ರಾಯವಾಗಲಿ ಎಂದರು.

ಸಾಲೂರು, ಕಾರಾಪುರ, ಗೌಡಹಳ್ಳಿ, ಹರವೆ, ಮುಡಿಗುಂಡ, ಅಗರ, ಮರಿಯಾಲ, ಗೌಡಹಳ್ಳಿ, ಕುದೇರು, ಹೊನ್ನೂರು ಮಾವಳ್ಳಿ, ಕೆಸ್ತೂರು ಮಠಗಳ ಶ್ರೀಗಳು, ಶಾಸಕರಾದ

ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಮಾಜಿ ಶಾಸಕರುಗಳಾದ ಶ್ರೀ ಎನ್. ಮಹೇಶ್, ಶ್ರೀ ಎಸ್. ಬಾಲರಾಜು, ಕಾಡಾ ಅಧ್ಯಕ್ಷರಾದ ಶ್ರೀ ಪಿ. ಮರಿಸ್ವಾಮಿ, ಶ್ರೀ ತೋಟೇಶ್, ಶ್ರೀ ಮೂಡ್ಲುಪುರ ನಂದೀಶ್ ಮೊದಲಾದವರು ಉಪಸ್ಥಿತರಿದ್ದರು.

ಕಾಯಿಲೆಗೆ ಕಾರಣವಾಗುವ ಅಂಶಗಳನ್ನು ತಡೆಯುವುದು ಅಗತ್ಯ

ರೋಗಗಳನ್ನು ಗುಣಪಡಿಸುವಲ್ಲಿ ಔಷಧ ಒಂದು ಮಾಧ್ಯಮವಾಗಿ ಕೆಲಸ ಮಾಡುತ್ತದೆ. ಅದು ಫಲ ನೀಡಬೇಕಾದರೆ ಕಾಯಿಲೆಗೆ ಕಾರಣವಾಗುವ ಅಂಶಗಳನ್ನು ತಡೆಯುವುದು ಅಗತ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಜುಲೈ 26ರಂದು ಬೆಂಗಳೂರಿನಲ್ಲಿ ಆಯೋಜಿಸಿದ್ದ ಹಿರಿಯ ವೈದ್ಯರಾದ ಡಾ. ಬಿ.ಟಿ. ರುದ್ರೇಶ್‌ರವರ ಕುರಿತ 'ಬೆಳಕಿನ ಬೆಳೆ' ಸಮಗ್ರ ಸಾಹಿತ್ಯ ಸಂಪುಟ ಬಿಡುಗಡೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಆರೋಗ್ಯ ಕಾಪಾಡಿಕೊಳ್ಳಬೇಕಾದರೆ ಋತುಮಾನಕ್ಕೆ ಸರಿಯಾದ ಆಹಾರ ಸೇವಿಸಬೇಕು. ಆಯುರ್ವೇದ ಮತ್ತು ಹೋಮಿಯೋಪಥಿ ಚಿಕಿತ್ಸೆ ಪಡೆಯುತ್ತಿರುವವರು ವೈದ್ಯರು ಹೇಳುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿದರೆ ಉತ್ತಮ ಫಲಿತಾಂಶ ಪಡೆಯಬಹುದು. ಅದನ್ನು ಮಾಡದೇ ತಮ್ಮ ತಪ್ಪಿಗೆ ವೈದ್ಯರನ್ನು ದೂಷಿಸಿದರೆ ಫಲವಿಲ್ಲ. ಆದರೆ ವೈದ್ಯರ ಸಲಹೆಗಳನ್ನು ಪಾಲಿಸದವರ ಸಂಖ್ಯೆಯೇ ಹೆಚ್ಚು ಎಂದರು.

ಕೃತಿ ಪರಿಚಯಿಸಿದ ಚಲನಚಿತ್ರ ಕಲಾವಿದರಾದ ಶ್ರೀಮತಿ ಅದಿತಿ ಪ್ರಭುದೇವ್‌ರವರು ನಮ್ಮ ಮೇಲೆ ನಮಗೆ ನಂಬಿಕೆಯಿದ್ದರೆ ಶೇ.50 ಕಾಯಿಲೆಗಳು ಗುಣವಾಗುತ್ತವೆ. ನಮ್ಮ ಆಲೋಚನೆ, ಮಾತು, ಜೀವನಕ್ರಮ ಎಲ್ಲವೂ ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ. ಕಾಯಿಲೆಗಳಿಗೆ ಔಷಧವನ್ನು ಕೂಡ ದೇವರು ಸೃಷ್ಟಿಸಿದ್ದಾನೆ. ಹೋಮಿಯೋಪಥಿ ಕೂಡ ಅದನ್ನು ನಂಬಿದೆ. ಈ ಪುಸ್ತಕದಲ್ಲಿ ಅಂತಹ ಹಲವು ನಿದರ್ಶನಗಳನ್ನು ನೋಡಬಹುದು. ಪುಸ್ತಕವನ್ನು ಅನುಭವಿಸಿ ಓದಿದಾಗ ಅದರ ಜ್ಞಾನ ಶಾಶ್ವತವಾಗಿ ಉಳಿಯಲಿದ್ದು, ಇದು ವೈದ್ಯ ಸಾಹಿತ್ಯದಲ್ಲಿ ಅಮೂಲ್ಯ ಗ್ರಂಥವಾಗಲಿದೆ ಎಂದು ಹೇಳಿದರು.

ಡಾ. ಬಿ.ಟಿ. ರುದ್ರೇಶ್‌ರವರು ನನ್ನ ಬಳಿ ಬಂದವರು 'ಹಣ ಇಲ್ಲ ಎಂದು ಮರಳಿ ಹೋಗಿಲ್ಲ' ಎಂಬ ಬಗ್ಗೆ ಹೆಮ್ಮೆ ಇದೆ. ವೃತ್ತಿ ಜೀವನದಲ್ಲಿ 45 ಲಕ್ಷಕ್ಕೂ ಅಧಿಕ ಮಂದಿಗೆ ಚಿಕಿತ್ಸೆ ನೀಡಿದ್ದು, ದೇವರೇ ಅವರನ್ನು ಕಳಿಸಿದ್ದಾನೆ ಎಂದು ಭಾವಿಸಿ ಸೇವೆ ಸಲ್ಲಿಸಿದ್ದೇನೆ ಎಂದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಬಿ.ಸಿ. ಭಗವಾನ್, ರಾಷ್ಟ್ರೀಯ ನರ್ಸಿಂಗ್ ಕೌನ್ಸಿಲ್ ಅಧ್ಯಕ್ಷರಾದ ಡಾ. ಟಿ. ದಿಲೀಪ್ ಕುಮಾರ್, ಕಲಾವಿದರಾದ ಶ್ರೀ ಸುಚೇಂದ್ರ ಪ್ರಸಾದ್ ಉಪಸ್ಥಿತರಿದ್ದರು.

□

ಲೇಖಕರ ವಿಳಾಸ

ಶ್ರೀ ಧರ್ಮಣ್ಣ ಮ. ಕುಂಬಾರ
'ಶ್ರೀ ವೀರಭದ್ರೇಶ್ವರ ನಿಲಯ'
ಡೇರಿ ರೋಡ್, ಮದಿಹಾಳ
ಧಾರವಾಡ 580006
ಮೊ : 96322 68605

ಡಾ. ಎ. ನಿರಂಜನ್
ನಂ. 1140, 4ನೇ ಮೈನ್ ರೋಡ್
ವಿವೇಕಾನಂದ ನಗರ
ಮೈಸೂರು 570 023
ಮೊ : 99865 67700

ಶ್ರೀ ಎಚ್.ಎಸ್. ಸಿದ್ಧಗಂಗಪ್ಪ
ನಂ. 1617, 'ಮಾತೃಶ್ರೀ'
ಸರ್ ಎಂ.ವಿ. ಮುಂದುವರೆದ ಬಡಾವಣೆ
8ನೇ ಬ್ಲಾಕ್, ಸ್ಫೂರ್ತಿಧಾಮದ ಎದುರು
ಮುದ್ದಿನಪಾಳ್ಯ ಮುಖ್ಯರಸ್ತೆ
ಬೆಂಗಳೂರು 560 091
ಮೊ: 98455 65871

ಹಿಂಬದಿ ಪುಟದ ಚಿತ್ರ

ಕನಕಪುರ ದೇಗುಲಮಠದ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳ ಪುಣ್ಯ ಸಂಸ್ಮರಣೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರು ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಮಲ್ಲನಮೂಲೆ, ಸಾಲೂರು, ಸೋಮಹಳ್ಳಿ, ನೊಣವಿನಕೆರೆ, ಬೇಲಿಮಠ, ಸಿದ್ಧಗಂಗಾ ಶ್ರೀಗಳು, ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್, ಕನಕಪುರ ಶ್ರೀಗಳು ಮೊದಲಾದವರಿದ್ದಾರೆ (3 ಜುಲೈ 2026)



ಮೈಸೂರು ಶ್ರೀ ಕುದೇರು ಮಠದಲ್ಲಿ ಶ್ರೀ ಗುರುಮಲ್ಲೇಶ್ವರರು ಹಾಗೂ ಶ್ರೀ ಗುರುಲಿಂಗ ಸ್ವಾಮಿಗಳವರ ಗಣಾರಾಧನೆಯು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಕುದೇರು ಮಠದ ಹಿರಿಯ ಮತ್ತು ಕಿರಿಯ ಶ್ರೀಗಳು, ಶ್ರೀ ಟಿ.ಎಸ್. ಶ್ರೀವತ್ಸರವರಿದ್ದಾರೆ (9 ಜುಲೈ 2026)



ಹಾಸನದಲ್ಲಿ ಆಯೋಜಿಸಿದ್ದ ಹಿರಿಯ ಸಾಮಾಜಿಕ ಹೋರಾಟಗಾರರಾದ ಡಾ. ವೈ.ಎಸ್. ವೀರಭದ್ರಪ್ಪನವರ ಜೀವನಚರಿತ್ರೆ 'ಸೇವಾರತ್ನ' ಕೃತಿ ಬಿಡುಗಡೆ ಹಾಗೂ ಅಭಿನಂದನಾ ಸಮಾರಂಭವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಹಡೇನಹಳ್ಳಿ ಲೋಕೇಶ್, ಶ್ರೀ ಕಟ್ಟಾಯ ಶಿವಕುಮಾರ್, ಶ್ರೀ ಬಿ.ಕೆ.ಮಂಜುನಾಥ್, ಶ್ರೀ ಗುರುದೇವ್, ಶ್ರೀ ಶಂಭುನಾಥ ಸ್ವಾಮಿಗಳು, ತಣ್ಣೀರುಹಳ್ಳ ಮಠದ ಶ್ರೀಗಳು, ಶ್ರೀ ಶ್ರೇಯಸ್ ಪಟೇಲ್, ಡಾ. ಹೆಚ್.ಎಲ್. ಮಲ್ಲೇಶ್ ಗೌಡ, ಡಾ. ವೈ.ಎಸ್. ವೀರಭದ್ರಪ್ಪ, ಶ್ರೀ ಜಿ.ಎಲ್. ಮುದ್ದೇಗೌಡರು, ಶ್ರೀ ರವಿ ನಾಕಲಗೂಡು, ಶ್ರೀಮತಿ ಜಯಲಕ್ಷ್ಮೀ ರಾಜಣ್ಣಗೌಡ ಹಾಗೂ ಶ್ರೀಮತಿ ವನಜಾಕ್ಷಿ ಬೆಟ್ಟದಾಲೂರುರವರಿದ್ದಾರೆ (12 ಜುಲೈ 2026)




ನಂಜನಗೂಡು ತಾಲ್ಲೂಕು ಶಿರಮಳ್ಳಿಯಲ್ಲಿ ಶ್ರೀ ಮುರಗೀಸ್ವಾಮಿ ವಿರಕ್ತಮಠದಲ್ಲಿ ಶ್ರೀ ಬಸವರಾಜ ಸ್ವಾಮಿಗಳ ಸಂಸ್ಮರಣೋತ್ಸವ ಉದ್ಘಾಟಿಸಿ ಹಾಗೂ ಶಾಲಾ ಕಟ್ಟಡದ ಶಿಲಾನ್ಯಾಸ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿಸಲಾಯಿತು. ಹುಲ್ಲಹಳ್ಳಿ, ಭಾಲ್ಕಿ, ಕನಕಪುರ ಮಠಗಳ ಶ್ರೀಗಳು, ಶ್ರೀ ಬಿ.ಡಿ. ಹಿರೇಮಠ, ಶಿರಮಳ್ಳಿ ಶ್ರೀಗಳು, ಶ್ರೀ ಹೆಚ್.ವಿ. ರಾಜೀವ್ ಹಾಗೂ ಅರಕೆರೆ ಶ್ರೀಗಳಿದ್ದಾರೆ (10 ಜುಲೈ 2026)



ಜೆಎಸ್ಎಸ್ ಆಸ್ಪತ್ರೆಯಲ್ಲಿ ರಾಷ್ಟ್ರೀಯ ವೈದ್ಯರ ದಿನಾಚರಣೆಯ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ವೈದ್ಯರಾಗಿ ಉತ್ತಮ ಸೇವೆ ಸಲ್ಲಿಸಿದ ಡಾ. ಎ.ಆರ್. ಬಾಬು, ಡಾ. ಕೆ.ಎಂ. ಶ್ರೀನಾಥ್. ಡಾ. ಮಂಜುನಾಥ್ ಶೆಟ್ಟಿ, ಡಾ. ಸುಧಾ ಕಿರಣ್ ದಾಸ್ ಹಾಗೂ ಡಾ. ಸುಬ್ರಮಣಿಯನ್‌ರವರುಗಳನ್ನು ಸನ್ಮಾನಿಸಲಾಯಿತು. ಡಾ. ವಿಕ್ರಮ್ ಪಾಟೀಲ್, ಡಾ. ಸಿ.ಪಿ. ಮಧು, ಡಾ. ಬಿ. ಸುರೇಶ್, ಶ್ರೀ ಟಿ.ಎಸ್. ಶ್ರೀವತ್ಸ, ಡಾ. ಆರ್. ಬಾಲಸುಬ್ರಮಣ್ಯಂ, ಡಾ. ಸಿ.ಜಿ. ಬೆಟಸೂರಮಠ, ಡಾ. ಹೆಚ್. ಬಸವನಗೌಡಪ್ಪ, ಡಾ. ಪಿ. ನಾಗಭೂಷಣ್, ಡಾ. ಬಿ. ಮಂಜುನಾಥ್‌ರವರುಗಳಿದ್ದಾರೆ (1 ಜುಲೈ 2026)



ಮೈಸೂರು ಶ್ರೀ ಮುದ್ದುರಾಮ ಪ್ರತಿಷ್ಠಾನದ ವತಿಯಿಂದ ಪ್ರೊ. ಎಂ. ಕೃಷ್ಣೇಗೌಡರಿಗೆ ಪರಮಪೂಜ್ಯ ಜಗದ್ಗುರುಗಳವರು ಹಾಗೂ ಆದಿಚುಂಚನಗಿರಿ ಜಗದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ಮುದ್ದುರಾಮ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶ್ರೀ ಆರ್.ಎ. ಚೇತನ್‌ರಾಮ್, ಪ್ರೊ. ಡಿ.ಎಸ್. ಗುರು, ಶ್ರೀ ಎಂ. ಶಿವಕುಮಾರ್, ಶ್ರೀ ನಾಗತಿಹಳ್ಳಿ ಚಂದ್ರಶೇಖರ್, ಶ್ರೀ ಕೆ.ಸಿ. ಶಿವಪ್ಪ, ಪ್ರೊ. ಎನ್.ಎಂ. ತಳವಾರ್, ಶ್ರೀ ಎನ್. ರವಿಕುಮಾರ್ ಹಾಗೂ ಶ್ರೀ ಪ್ರಕಾಶ್ ಚಿಕ್ಕಪಾಳ್ಯರುವರುಗಳಿದ್ದಾರೆ (26 ಜುಲೈ 2026)



ಮೈಸೂರು ಕಲಾಮಂದಿರದಲ್ಲಿ ಆಯೋಜಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಮಡ್ಡೀಕೆರೆ ಗೋಪಾಲ್‌ರವರ ಅಭಿನಂದನಾ ಸಮಾರಂಭವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಡಾ. ಕೆ. ಅನುಸೂಯ, ಶ್ರೀ ಮಡ್ಡೀಕೆರೆ ಗೋಪಾಲ್, ಶ್ರೀ ಭಾಷ್ಯಂ ಸ್ವಾಮೀಜಿ, ಪ್ರೊ. ಹಂಪ ನಾಗರಾಜಯ್ಯ, ಶ್ರೀ ಸೋಮೇಶ್ವರನಾಥ ಸ್ವಾಮಿಗಳು, ಪ್ರೊ. ಸಿ.ಪಿ. ಕೃಷ್ಣಕುಮಾರ್, ಡಾ. ಡಿ. ತಿಮ್ಮಯ್ಯ, ಶ್ರೀ ರಘು ಕೌಟಿಲ್ಯ, ಶ್ರೀ ನಾಗರಾಜ ಬೈರಿ, ಶ್ರೀ ರಾಜಶೇಖರ್ ಕದಂಬ ಮೊದಲಾದವರುಗಳಿದ್ದಾರೆ (19 ಜುಲೈ 2026)



ಬೆಂಗಳೂರಿನಲ್ಲಿ ಹಿರಿಯ ಹೋಮಿಯೋಪತಿ ವೈದ್ಯರಾದ ಡಾ. ಬಿ.ಟಿ. ರುದ್ರೇಶ್‌ರವರ ಕುರಿತ 'ಬೆಳಕಿನ ಬೆಳೆ' ಸಮಗ್ರ ಸಾಹಿತ್ಯ ಸಂಪುಟವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಬಿಡುಗಡೆಗೊಳಿಸಲಾಯಿತು. ಡಾ. ಟಿ. ದಿಲೀಪ್‌ಕುಮಾರ್, ಶ್ರೀಮತಿ ಅದಿತಿ ಪ್ರಭುದೇವ್, ಡಾ. ಬಿ.ಟಿ. ರುದ್ರೇಶ್, ಶ್ರೀಮತಿ ಎಸ್.ಒ. ಸ್ವರ್ಣಲತಾ, ಡಾ. ಬಿ.ಸಿ. ಭಗವಾನ್‌ರವರುಗಳಿದ್ದಾರೆ (26 ಜುಲೈ 2026)



ಮೈಸೂರು ಶ್ರೀ ಸುತ್ತೂರು ಮಠದಲ್ಲಿ ನಡೆದ ಗುರುಪೂರ್ಣಿಮಾ ಹಾಗೂ 294ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ವಿಜಯ ಕರ್ನಾಟಕ ದಿನಪತ್ರಿಕೆಯ ಸ್ಥಾನಿಕ ಸಂಪಾದಕರಾದ ಶ್ರೀ ಐತಿಚಂಡ ರಮೇಶ್ ಉತ್ತಪ್ಪರವರು ಉಪನ್ಯಾಸ ನೀಡಿದರು. ಸಂಗೀತ ಕಚೇರಿ ಪ್ರಸ್ತುತ ಪಡಿಸಿದ ಕಲಾವಿದರುಗಳಾದ ವಿದ್ವಾನ್ ಸುನಾದಕೃಷ್ಣ ಅಮ್ಮಾಯಿ, ವಿದ್ವಾನ್ ಎಸ್. ಮಂಜುನಾಥ್, ವಿದ್ವಾನ್ ಕೃಷ್ಣ ಪವನ್‌ಕುಮಾರ್. ಮತ್ತು ವಿದ್ವಾನ್ ಕೇಶವ ಮೋಹನ್‌ಕುಮಾರ್‌ರವರುಗಳಿದ್ದಾರೆ (26 ಜುಲೈ 2026)



ಹೂವಿನ ಹಡಗಲಿಯಲ್ಲಿ ಮಾಜಿ ಉಪಮುಖ್ಯಮಂತ್ರಿಗಳಾದ ಶ್ರೀ ಎಂ.ಪಿ. ಪ್ರಕಾಶ್‌ರವರ ಪುತ್ತಳಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಅನಾವರಣಗೊಳಿಸಿದರು. ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ್, ಶ್ರೀ ವಿಜಯ್ ಬಿ. ಹಿರೇಮಠ್, ಶ್ರೀ ಎಸ್.ಎಸ್. ಪಾಟೀಲ್, ಶ್ರೀಮತಿ ಎಂ.ಪಿ. ಸುಮಾ ವಿಜಯ್, ಶ್ರೀಮತಿ ಎಂ.ಪಿ. ಲತಾ ಮಲ್ಲಿಕಾರ್ಜುನ್, ಶ್ರೀ ಇ. ತುಕಾರಾಂ, ಶ್ರೀ ರಾಘವೇಂದ್ರ ಹಿಟ್ನಾಳ್ ಮೊದಲಾದವರಿದ್ದಾರೆ (11 ಜುಲೈ 2026)

Registered with the Registrar of Newspapers in India Under No. 50622 / 1986
'Prasada' Monthly, Vol. 41 Issue No. 7, July 2026



ISSN 2583-7648
9 772583 764006

ಬಿಡಿ ಪ್ರತಿ : ರೂ.10/-

e-mail: prasada@jssonline.org * www.jssonline.org